ಪಾವಂಜೆ ಗುರುರಾವ್ ಅಂಡ್ ಸನ್ಸ್

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ

ಉಡುಪಿ

ಗೀತಾಮೃತಲಹರೀ

(ಗೀತೆಯ ಕನ್ನಡ ಭಾವಾನುವಾದ)

ಎ. ಜಿ. ಕೃಷ್ಣರಾವ್, ಶಿರೋಮಣಿ.

ಪಾವಂಜೆ ಗುರುರಾವ್ ಅಂಡ್ ಸನ್ಸ್
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ
ಉಡುಪಿ

ಮೊದಲನೆಯ ಅಚ್ಚು: ಜೂಲೈ, ೧೯೫೩

ಒಂದು ರೂಪಾಯಿ

ಅಚ್ಚುಗಾರರು:
ಪಾವಂಜೆ ಗುರುರಾವ್ ಅಂಡ್ ಸನ್ಸ್
ಶ್ರೀಕೃಷ್ಣಮುದ್ರಣಾಲಯ ಉಡುಪಿ

ಮುನ್ನುಡಿ

ಹಿಂದೂಸಂಸ್ಕೃತಿಯನ್ನೂ ಧರ್ಮಸಾಹಿತ್ಯವನ್ನೂ ತಕ್ಕ ಮಟ್ಟಿಗಾದರೂ ಅರಿತವರಿಗೆ ತತ್ತ್ವಗ್ರಂಥಗಳ ಶಿರೋರತ್ನವಾದ ಶ್ರೀಭಗವದ್ಗೀತೆಯ ವಿಷಯದಲ್ಲಿ ಹೆಚ್ಚೇನು ವಿವರಿಸಬೇಕಾಗಿಲ್ಲವಷ್ಟೆ! ಜಗತ್ತಿನ ನಾನಾಭಾಷೆಗಳಲ್ಲಿ ಸಾವಿರಾರು ಗ್ರಂಥಕರ್ತರುಗಳಿಂದ ಅದರ ಅನುವಾದಗಳೂ ವಿಮರ್ಶೆಗಳೂ ಟೀಕೆಟಿಪ್ಪಣಿಗಳೂ ದಿನನಿತ್ಯ ಆಗುತ್ತಲೇ ಇರುವುದೊಂದು ಪರಿಪಾಟಿಯೆಂದರೂ ತಪ್ಪಲ್ಲ. ಅಂತಹ ಅಸಾಧಾರಣ ಸ್ಥಾನವನ್ನಾಶ್ರಯಿಸಿದ ಗೀತೆಯ ವೈಶಿಷ್ಟ್ಯದ ಮಟ್ಟಿಗೆ ಎಲ್ಲರೂ ತಿಳಿದ ವಿಚಾರವೇ ಸರಿ.

ಗೀತೆಯ ಮೇಲಣ ಅಸಾಮಾನ್ಯ ಅಭಿರುಚಿ ಮತ್ತು ಗೌರವಗಳಿಂದಲೋ, ಸುಮ್ಮನಿರುವಾಗ ನೈಜ ಕವಿತಾಶಕ್ತಿಯ ಪ್ರೇರಣೆಯಿಂದಲೋ, ಅದನ್ನು ಸಿರಿಗನ್ನಡದಲ್ಲಿ ಪದ್ಯರೂಪವಾಗಿ ಲಲಿತ ಶೈಲಿಯಲ್ಲಿ ಭಾಷಾಂತರಿಸಬೇಕೆಂಬ ಹಿರಿದಾದ ಹಂಬಲೇ ನನ್ನನ್ನೂ ಈ ಕಾರ್ಯದಲ್ಲಿ ಕೈ ಹಚ್ಚುವಂತೆ ಮಾಡಿತು. ಗೀತೆಯ ಅನುವಾದಗಳೇನೋ ಲೆಕ್ಕವಿಲ್ಲದಷ್ಟಿದ್ದರೂ ಅದು ಸರಿಯಾದ ಸುಂದರ ಪದ್ಯರೂಪದಲ್ಲಿ ನಿರವಿಸಲ್ಪಡದಿರುವುದೇ ನನ್ನ ಈ ಶ್ರಮಕ್ಕೆ ಕಾರಣವಾಗಿತ್ತು. ಆದರೆ ಪ್ರಾಸಬಂಧವೇ ಜೀವಾಳವಾದ ಕನ್ನಡ ಪದ್ಯಗಳಲ್ಲಿ, ಕೇವಲ ತತ್ತ್ವನಿರೂಪಣಾಪರವಾದ ಸಂಸ್ಕೃತದ ವಿಶಿಷ್ಟಗ್ರಂಥವೊಂದನ್ನು ಅನುವಾದಿಸುವುದು ಅದೆಷ್ಟು ಕಷ್ಟಸಾಧ್ಯವೆಂದು ಆ ಮೇಲೆ ಮನನವಾಯಿತು. ಅದಕ್ಕೆ ಸರಿಯಾಗಿಯೇ, ಕನ್ನಡಭಾರತದಲ್ಲಿ ಕವಿಕುಲತಿಲಕ ಕುಮಾರವ್ಯಾಸನಿಂದ ಭಾಮಿನಿಷಟ್ಪದಿಯಲ್ಲಿ ಅನುವಾದಿಸಲ್ಪಟ್ಟ ಗೀತೆಯನ್ನು, ನಾನು ಕೈಗೊಂಡ ಕಾರ್ಯವು ಹೆಚ್ಚು ಕಮ್ಮಿ ಅರ್ಧದಷ್ಟು ಮುಗಿದಿರಲು (ಮೊದಲೇ ನೋಡಿದುದಾದರೂ), ಪ್ರಸಂಗವಶಾತ್ ಕಂಡೆನು. ಗೀತಾರ್ಥಪ್ರಕಾಶಿಕೆಯಲ್ಲಿನ ಅವನ ರಚನಾಶೈಲಿಯು ಅತ್ಯಂತ ವಿಧುರವಾಗಿಯೂ ಕ್ಲಿಷ್ಟವಾಗಿಯೂ ಇದ್ದುದನ್ನೋದಿಯಂತೂ ಕೇವಲ ತಾತ್ತ್ವಿಕ ರಹಸ್ಯಗಳ ನಿರೂಪಣೆಯು, ಅದೂ ಅನುವಾದರೂಪದಲ್ಲಿ, ಬಹಳ ಪರಿಶ್ರಮ ಸಾಧ್ಯವೆಂಬುದು ನನಗೆ ಮುಂದಟ್ಟಾಯಿತು. ಹಾಗೂ ಮೊದಲೇ ವರ ಕವಿಯೋರ್ವನಿಂದ ಭಾಮಿನಿಷಟ್ಪದಿಯಲ್ಲಿ ವಿರಚಿತವಾದ ಗೀತೆಯನ್ನೇ ಮರುಕಳಿಸಿ ವಾರ್ಧಿಕಷಟ್ಪದಿಯಲ್ಲಿ ನನ್ನಂತಹ ನರಕವಿಯು ರಚಿಸುವುದು ಹಾಸ್ಯಾಸ್ಪದವಾಗಲೂಬಹುದು ಎಂಬ ಭಾವನೆ ನನ್ನನ್ನು ಸ್ವಲ್ಪ ಕದಡಿತು. ಪರಂತು ಒಮ್ಮೆ ಬರೆಯತೊಡಗಿದುದನ್ನು ಹೀಗೆ ಅರ್ಧದಲ್ಲೇ ನಿಲ್ಲಿಸದೆ ಈ ಕೃತಿಯನ್ನು

ಮುಗಿಸಲೇಬೇಕೆಂಬ ಲವಲವಿಕೆಯಿಂದ ಮುಂದುವರಿಸಿದೆನು. ಹಾಗೇಯೇ ಅಸಾಮಾನ್ಯ ಗ್ರಂಥರತ್ನವಾದ ಗೀತೆಯ ಅಸಂಖ್ಯ ಅನುವಾದಗಳಲ್ಲಿ ನನ್ನ ಈ ಪುಟ್ಟ ಯತ್ನವೂ ಹೆಚ್ಚಾಗಿ ಕಾಣಲಾರದೆಂಬ ಭರವಸೆಯಿಂದ ಇದನ್ನು ಆದಷ್ಟು ಬೇಗನೇ ಬರೆದು ಮುಗಿಸಿದೆನು.

ಹಳೆಗನ್ನಡ ಮತ್ತು ಸಂಸ್ಕೃತದ ಹಲವಾರು ಕ್ಲಿಷ್ಟಪದಗಳು ಅಲ್ಲಲ್ಲಿ ಕಂಡುಬಂದರೂ, ಇದರ ಶೈಲಿಯು ಆದಷ್ಟು ಸರಳವಾಗಿಯೂ ಲಘುವಾಗಿಯೂ ಇದ್ದು ಜನಸಾಮಾನ್ಯರಿಗೆ ಓದಲು ಮತ್ತು ಅರ್ಥಮಾಡಿಕೊಳ್ಳಲು ಅತಿ ಸುಲಭಶಕ್ಯವಾಗುವಂತೆ ತಿಳಿಗನ್ನಡದಲ್ಲೇ ರಚಿಸಿರುವೆನು. ಮೂಲದ ಪ್ರತಿಯೊಂದು ಶ್ಲೋಕಕ್ಕೂ ಇದರಲ್ಲಿನ ಒಂದು ಪದ್ಯಾರ್ಥ ಯಾ ಪದ್ಯವೆಂಬ ಜೋಡಣೆಯ ಯಾವ ನಿಯಮವೂ ಇಲ್ಲದೇ ಇದ್ದುದರಿಂದ, ಹಲವಾರುಕಡೆ ಸಂದರ್ಭಕ್ಕೊದಗಿದಂತೆ ಶ್ಲೋಕಗಳು ಪದ್ಯಗಳಲ್ಲಿ ಹರಿಹಂಚಾಗಿ ಚೆಲ್ಲಲ್ಪಟ್ಟಂತೆ ಕಾಣಬಹುದು. ಅಂತೆಯೇ ಕೆಲವೆಡೆ ಪ್ರಾಸಕ್ಕನುರೂಪವಾಗಿ ರಚನೆಯಲ್ಲಿ ನ್ಯೂನಾಧಿಕ್ಯಗಳೂ ಕಂಡುಬರಬಹುದು. ಪರಂತು, ಯಾವ ಅಪಾರ್ಥ ಅನರ್ಥಗಳೂ ಬಾರದಂತೆ, ಮತ್ತು ನಿಜವಾದ ಅರ್ಥವು ಲೋಪವಾಗದಂತೆ ಸಾಧ್ಯವಿದ್ದಷ್ಟು ಜಾಗರೂಕತೆಯಿಂದ, ಹೆಚ್ಚುಕಡಿಮೆ ವಾರ್ಧಿಕಷಟ್ಪದಿಯ ೩೫೦ ಪದ್ಯಗಳಲ್ಲಿ ಈ ಕಿರುಕೃತಿಯನ್ನು ಪೋಣಿಸಿರುವೆನು. ಅದಲ್ಲದೆ ಗ್ರಂಥಾದಿಯಲ್ಲಿ ಗೀತಾಮಾಹಾತ್ಮ್ಯವನ್ನೂ ಕೆಲ ಮಂಗಲ ಶ್ಲೋಕಗಳನ್ನೂ ಕೋವಣಿಸಿ ಕಥನದ ಕಳೆಯನ್ನು ಇನ್ನಷ್ಟು ಹೆಚ್ಚಿಸಿರುವೆನು. ಏವಂಚ ನಿರ್ದುಷ್ಟ ದೃಷ್ಟಿಯ ಗುಣಗ್ರಾಹಿಗಳಾದ ವಿದುಷರಲ್ಲಿ ಈ ಕೃತಿಯು ತಕ್ಕ ಮನ್ನಣೆ ಪಡೆದು, ಯೋಗ್ಯ ಸ್ಥಾನಮಾನಗಳನ್ನು ಗಳಿಸದಿರಲಾರದೆಂದು ನಂಬುವೆನು. ಇದರ ಗುಣದೋಷಗಳೇ ಮೊದಲಾದ ವಿವೇಚನಾವಿಷಯಗಳನ್ನಂತೂ ವಾಚಕರೇ ಮನಗಂಡು ನಿರ್ಣಯಿಸಲರ್ಹರು.

ಕನ್ನಡಮಾತೆಯ ಸಾಹಿತ್ಯದ ಮುಡಿಪಿನಲ್ಲಿ ಭಕ್ತಿಯಿಂದರ್ಪಿಸಲ್ಪಟ್ಟ ಈ ಕಿರುಗಾಣಿಕೆಯು ಹೊಗರೆತ್ತಿ ಬೆಳಗಿ ಜನಸಾಮಾನ್ಯರ ಉದಾರಾಶ್ರಯವನ್ನೂ ಆದರವನ್ನೂ ಹೊಂದಲೆಂದು ಹಾರೈಸುವೆನು. ಈ ಮಧ್ಯೆ ಇದನ್ನು ಬರೆಯಲು ಪ್ರೋತ್ಸಾಹಿಸಿ ಆಗಾಗ ಹಲಕೆಲವು ಯುಕ್ತ ಸಲಹೆಗಳಿತ್ತು ಸಹಾಯಕರಾದ ನನ್ನ ತೀರ್ಥರೂಪರಿಗೂ, ಉದಾರಭಾವದಿಂದ ಸ್ವೀಕರಿಸಿ ಅಂದವಾಗಿ ಮುದ್ರಿಸಿದ ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದ ಒಡೆಯರಿಗೂ ಮತ್ತು ಹಿತೈಷಿಗಳಿಗೂ ನನ್ನ ಹಾರ್ದಿಕ ಕೃತಜ್ಞತೆಯು ಸಲ್ಲಬೇಕಾಗಿದೆ.

ಪೋಸ್ಟ್: ಆಲೆಟ್ಟಿ (ಸುಳ್ಯ), ದ. ಕ. **ಇತಿ ಸಜ್ಜನವಿಧೇಯ,**

ತಾರೀಕು 19—5—1952 **ಎ. ಜಿ. ಕೃಷ್ಣರಾವ್, ಶಿರೋಮಣಿ.**

ಶ್ರೀಃ

॥ ಓಂ ತತ್ಸತ್ ॥

ಗೀತಾಮಾಹಾತ್ಮ್ಯಃ

ಸೂಚನೆ ॥ ಸೂತಪೌರಾಣಿಕಂ ಮುನಿಸಂಕುಲಕೆ ಪೇಳ್ದ
ಪೂತ ವಾರಾಹಪೌರಾಣ ಸಂಗ್ರಹವಾದ
ಗೀತೆಯಿಾ ಮಾಹಾತ್ಮ್ಯವೆಂಬೆ ಸಂಕ್ಷೇಪದಿಂ ಪಾಠಕರ ಸುವಿಧಿಗಾಗಿ

ಭೂರಮಣಿ ಕೇಳಿದಳು ಭಗವಂತನೇ ತನ್ನ
ಪ್ರಾರಬ್ಧವನುಭವಿಸುತಿರುವವನಿಗೆಡೆಬಿಡದ
ಸಾರ ಭಕ್ತಿಯದೆಂತು ಸಂಭವಿಪುದೆನಲು ಶ್ರೀವಿಷ್ಣು ಪೇಳಿದನವಳಿಗೆ
ಪ್ರಾರಬ್ಧವುಣ್ಣುವವ ಗೀತೆಯಭ್ಯಾಸದಲಿ
ತಾ ರಮಿಸುತಿರೆ ಸದಾ ಸುಖಿಯಹಂ ಲೋಕದೊಳ
ಸಾರ ಕರ್ಮಗಳವನ ಲೇಪಿಸವು ಭವಪಾಶದಿಂದ ಮುಕ್ತಿಯನೈದುವ ೧

ಗೀತೆಯ ಧ್ಯಾನಮಂ ಮಾಡುತಿರೆ ಬಲು ದೊಡ್ಡ
ಪಾತಕಗಳಾದರೂ ಕಮಲದೆಲೆ ನೀರ್ಕೊಳ್ಳ
ದೂತಿರುವ ತೆರ ನರನನಂಟಲಾರವು ನೋಡಲದರ ಪುಸ್ತಕವೆಲ್ಲಿಯೋ
ಪೂತ ಪಾಠಗಳೆಲ್ಲಿ ನಡೆಯುವುದೊ ಅಲ್ಲಿಯೆ
ಲ್ಲಾ ತೀರ್ಥಗಳು ಪ್ರಯಾಗಾದಿಗಳು ನೆಲಸಿಹವು
ಸಾತಿಶಯದಖಿಲ ವೇದರ್ಷಿಗಳು ಯೋಗಿಗಳು ಪನ್ನಗರು ಗೋಪಾಲರು ೨

ನಾರದೋದ್ಧವ ಪಾರ್ಷದರು ಗೋಪಿಯರು ಸದಾ
ಸೇರಿ ವಾಸಿಸುವರಲ್ಲಿಯೆಯೆಲ್ಲಿ ಗೀತೆಯ ವಿ
ಚಾರಗಳು ಪಠನ ಪಾಠನ ಶ್ರವಣಗಳು ಜರಗುವುದೊ ಅಲ್ಲಿ ನಿಜವಾಗಿಯೂ
ಸಾರಿರುವೆ ನಾ ಸತತ ಗೀತೆಯಾಸರೆಲಿ ವ್ಯ
ದೋರುತಿಹೆ ಗೀತೆಯೇ ನನಗುತ್ತಮದ ಗೃಹವು
ಮೂರು ಲೋಕಗಳ ನಾ ಗೀತೆಯ ಜ್ಞಾನವಾಶ್ರೈಸಿಯೇ ಕಾಪಾಡುವೆ ೩

ವರಗೀತೆಯೇ ನನ್ನ ಮುಖ್ಯ ವಿದ್ಯೆಯು ಬ್ರಹ್ಮ
ನುರುವ ರೂಪವು ಸಂಶಯವು ಬೇಡ ನಿತ್ಯವಾ
ಗಿರುವಿದರೊಳರ್ಥಮಾತ್ರಾಕ್ಷರವೆ ನಿರ್ಮಾಣ್ಯಬ್ರಹ್ಮಾತ್ಮಕವದಾಗಿದೆ

ನಿರುಮಲ ಚಿದಾನಂದರೂಪ ಕೃಷ್ಣಂ ಪಾರ್ಥ
ಗೊರೆದ ವೇದತ್ರಯುದ ಸಾರವಿಹ ಬೊಮ್ಮನಿರ
ವರುಹುವ ಜ್ಞಾನದಿಂ ಕೂಡಿದಷ್ಟಾದಶಾಧ್ಯಾಯುಗಳ ವೆರಸಿದಿದನು ೪

ಮೋದದಲಿ ಶುದ್ಧ ಮನದಿಂದಾರು ಜಪಿಸುತಿಹ
ನಾದರಿಸುವವ ಜ್ಞಾನಸಿದ್ಧಿಯುಂ ಪೊದ್ದಿ ತಾ
ನೈದುವಂ ಮೋಕ್ಷಪದವಿಯು ಪೂರ್ತಿಯೋದಲಸಮರ್ಥನಿರಲದರರ್ಥವ
ಓದಬೇಕದರಿಂದ ಸಂದೇಹಮಿಲ್ಲದಲೆ
ಗೋದಾನ ಮಾಡಿರುವ ಪುಣ್ಯ ಬರುವುದು ಜಗದೊ
ಳೋದಿದರೆ ಮೂರರೊಳಗೊಂದು ಭಾಗವ ಗಂಗೆಯುಲಿ ಮಿಂದ ಫಲ ಸಿಗುವುದಃ೫

ನಿರತ ವಾರದೊಳೊಂದು ಭಾಗವಮಂ ತಾ ಜಪಿಸಿ
ದರೆ ಸೋಮಯಾಗ ಮಾಡಿದ ಫಲವು ದೊರಕುವುದು
ವರ ಭಕ್ತಿಯಿಂದಲೇಕಾಧ್ಯಾಯುವಂ ಪಠಿಸುತಿರೆ ರುದ್ರಲೋಕವೊಂದಿ
ಚಿರಕಾಲ ಗಣನಾಗಿರುವನಲ್ಲಿ ಪೃಥ್ವಿಯಾ
ರಿರದಿದರೊಳಧ್ಯಾಯುವನೊ ಶ್ಲೋಕಪಾದವನೊ
ಸರಿಯಾಗಿ ನಿಚ್ಚವೋದುವನಾತನೀ ಮನ್ವಂತರದನಕ ನರತೆವಡೆವ ೬

ಐದೆ ಗೀತೆಯು ಶ್ಲೋಕಗಳಲಿ ಹತ್ತನೊ ಏಳ
ನೈದನೋ ನಾಲ್ಕನೆರಡನೊ ಮೂರನೊಂದನೋ
ಓದುತಿಹನಾವನದರರ್ಥವನೊ ಅವನಯುುತವರ್ಷಗಳು ಧ್ರುವವಾಗಿಹ
ವೋದದಿಂ ಚಂದ್ರಲೋಕವ ಪೊಂದುವಂ ಗೀತೆ
ಯೋದುತಲೆ ಸತ್ತವಂ ನರಜನ್ಮವೊಂದುವಂ
ಗೈದು ಗೀತಾಭ್ಯಾಸಮಂ ಮಗುಳಿ ತಾನುತ್ತಮದ ಮುಕ್ತಿಯುಂ ಗಳಿಸುವ ೭

ಹೇ ಗೀತೆಯೆಂದು ನರನುಚ್ಚರಿಸಿ ಜಗದಿ ಮೃತ
ನಾಗೆ ಸುಗತಿಯು ಪಡೆವ ವಿಗಡತರ ಪಾಪಗಳೆ
ತಾಗಿದ್ದರೂ ತಾನು ಗೀತಾರ್ಥಶ್ರವಣರತನಿರಲು ವೈಕುಂಠಪದವ
ಪೋಗಿ ವಿಷ್ಣುವಿನೊಡನೆ ತೋಷದಿಂದಿಹ ಯಾರು
ತಾ ಗೈದರೂ ಭೂರಿಕರ್ಮಗಳ ಗೀತಾರ್ಥ
ವೇಗಳರಿವಾತ ಜೀವನ್ಮುಕ್ತನೆಂದೆಣಿಸಲರ್ಹನಹನೆರಡಿಲ್ಲದೆ ೮

ಜಲಸ್ನಾನದಿಂದ ದಿನದಿನವು ಮನುಜರು ಮಲವ
ತೊಳೆಯುವಂದದೊಳೊಮ್ಮೆ ಗೀತಾಂಭಸಿಲಿ ಮಿಂದಿ
ರಲುಸಂಸೃತಿಯಕೊಳೆಯುತೊಲಗುವುದುಗೀತೆಯವಲಂಬಿಸಿಯೆಜನಕಾದಿಯ
ಹಲವಾರು ಭೂಭುಜರು ಲೋಕದಲಿ ಪಾಪಗಳ
ಕಳೆದು ಹೆಸರಾಂತು ಪರಪದವಿಯಂ ಪೊಂದಿದರು
ಸಲೆ ರಾತ್ರಿಹಗಲಾವ ನರರು ಗೀತಾಶಾಸ್ತ್ರಮಂ ಓದುವರೊ ಕೇಳ್ವರೊ ೯

ಅವರ ಮಾನವರೆಂದು ತಿಳಿಯಬಾರದು ದೇವ
ರವರೆ ಸಂಶಯಮಿಲ್ಲ ಗೀತೆಯಧ್ಯಯನದಿಂ
ತವೆ ತಿಳಿದು ತಿಳಿಯದೆಲೆ ನಿತ್ಯಮಿಂದ್ರಿಯಗಳಿಂ ಗೈದ ಕಿಲ್ಬಿಷವೆಲ್ಲವು
ಕವಿಯದಾಕ್ಷಣಕೆ ನಸಿಯುವವು ಗೀತಾರ್ಥ ಪಠ
ನವ ಮಾಡದಿಹನ ಜ್ಞಾನಾಚಾರ ವ್ರತಗಳಿಗೆ
ನವೆವ ಚೇಷ್ಟೆಗೆ ತಪಕೆ ಜಸಕೆ ಧಿಕ್ಕಾರವಿರಲವನಿಂದಲಧಮರಿಲ್ಲ ೧೦

ಘೋರವಾಗಿಹ ಸಂಸೃತಿಯ ಸಾಗರವ ದಾಟ
ಲಾರು ಬಯಸುವನಾತ ಗೀತೆಯೆನ್ನುವ ಹಡಗ
ವೇರಿದರೆ ಸುಖದಿ ಪರಪಾರವೈದುವನಾರು ಗೀತೆಯನ್ನೋದಿ ಬಳಿಕ
ಸಾರ ಮಾಹಾತ್ಮ್ಯವಿದನೋದದಿಹನಾತನಿದ
ರಾರಂಭವೇ ವ್ಯರ್ಥವಿಹುದವಗೆ ಬರಿದು ಶ್ರಮ
ಕಾರಿಯಪ್ಪುದು ನೋಡೆ ಮಾಹಾತ್ಮ್ಯವಿದರಿಂದ ಕೂಡಿರ್ಪ ಗೀತೆಯನ್ನು ೧೧

ಮುಂದಾವನಭ್ಯಾಸ ಗೈವನವನದರ ಫಲ
ವೃಂದಗಳ ಪೊರ್ದಿ ದುರ್ಲಭವಾದ ಸುಗತಿಯಂ
ಹೊಂದುನಂ ಧರಣಿದೇವಿಯೆ! ಸೂತಪೌರಾಣಿಕಂ ಪೇಳ್ದನೊಲವಿನಿಂದ
ಹಿಂದಿನಿಂದಲೆ ಬಂದ ಗೀತೆಯಿಮಹಿಮೆಗಳ
ನಿಂದಾನು ಬಣ್ಣಿಸಿದೆನೈಸೆ ಶ್ರದ್ಧೆಯೊಳಿವರ
ನಂದದಿಂ ಗೀತೆಯೊತ್ತಿನೊಳೋದಿದರೆ ಪೇಳ್ದ ಫಲಗಳಂ ಪಡೆವ ನರನು ೧೨

ಗೀತಾಮಾಹಾತ್ಮ್ಯ ಮುಗಿದುದು

ಮಂಗಲ ಶ್ಲೋಕಗಳು

ಯಾರಂ ಬ್ರಹ್ಮಬಿಡೌಜರುದ್ರಮರುತರ್ ಕೈವಾರಿಪರ್ ಭಕ್ತಿಯಿಂ
ಯಾರಂ ಸಾಂಗಪದಕ್ರಮಶ್ರುತಿಗಳಿಂ ಗಾನಾತುರರ್ ಸಾಮಗರ್ ।
ಯಾರಂ ಜಾನದಿ ನಿಂದ ನಿಚ್ಚಟರಿವಿಂ ಯೋಗಿಗಳ್ಕಾಂಬರೆಂದುಂ
ಯಾರಾದ್ಯಂತವನಾರುಮಿಲ್ಲರಿಯರಾ ದೇವಂಗೆ ನಾಂ ಬಂದಿಪೆಂ ॥ ೧ ॥

ಶ್ರೀರಮಣನಾರು ಭಕ್ತರಿಗೆ ಬೇಡಿದುದೀವ
ಪಾರಿಜಾತನೊ ತೋತ್ರಜ್ಞಾನಮುದ್ರೆಗಳುಭಯ
ವೀರಕರದೋಜೆಯಿಂ ಮೆರೆವ ಗೀತಾಮೃತವನೆರೆವ ದೇವಗೆ ನಮಿಪೆನು
ಯಾರು ಭಾರತವೆಂಬ ಸ್ನೇಹಪೂರ್ಣ ಜ್ಞಾನ-
ಸಾರಮಯ ಬೊಂಬಾಳ ದೀವಿಗೆಯನುರಿಸಿದನೊ
ಸೂರಿಕುಲದುತ್ತಂಸ ಸುವಿಶಾಲಮತಿಯ ಮುನಿವ್ಯಾಸನಂ ಪೊಡಮಡುವೆನು ೨

ಗೋವುಗಳೆ ಸರ್ವೋಪನಿಷದಗಳು ದೋಗ್ಧನೇ
ಕಾವ ಕರುಣಾಳು ಗೋಪಾಲಕಂದಂ ಪಾರ್ಥ
ನೇ ವತ್ಸನುರ್ವ ಸುಧಿಗಳೆ ಪಾನಲೋಲುಪರು ಗೀತೆಯಮೃತವ ಕರೆಯಲು
ಆ ವಿಮಲ ಚೈತನ್ಯಮೂರುತಿಯ ವಸುದೇವ
ದೇವಕೀನಂದನನ ಕಂಸಾದಿ ಕುಮತಿಗಳ
ಸೀವರಿಸಿ ಮಡುಹಿದನ ಜ್ಞಾನದ ಜಗದ್ಗುರುವ ಕೃಷ್ಣನಡಿಗಳ್ಗೆರಗುವೆ ೩

ಭಗವಂತ ಕೃಷ್ಣಮೂರ್ತಿಯ ವದನದಿಂ ಪಾರ್ಥ
ನಿಗೆನಿರೂಪಿತವಪ್ಪ ಭಾರತಾಕಾಶದಲಿ
ಮಿಗೆ ಜಾಣ್ಮೆನಿಂ ವ್ಯಾಸನಿಂದ ಕೇವಣಿಸಿಪ್ಪ ತತ್ತ್ವಾಮೃತಾಸಾರವ
ಬಗಿದೊರೆಯುವಷ್ಟಾದಶಾಧ್ಯಾಯ ಕಾದಂಬಿ-
ನಿಗಳನೊಳಗೊಂಡಬ್ಬೆ ಗೀತೆಗೆ ಭವದ್ವೇಷಿ
ಣಿಗೆ ಮೋಹದಾವಾಗ್ನಿಯಿಂ ಬೆಂದು ಬಸವಳಿದ ಜೀವಿ ನಾಂ ಶರಣೆಂಬೆನು ೪

ಮುನಿಪ ವ್ಯಾಸನ ಲಲಿತ ವಚನಗಳ ಸರಸಿಯಲಿ
ಜನಿಸಿರುವ ತತ್ತ್ವಗಳ ಪರಿಮಳವ ಸೂಸುತಿಹ
ಬಿನದದಿಂದರಳಿದಧ್ಯಾಯ ಹದಿನೆಂಟರೆಸಳುಗಳ ತಿಳಿವೆಲರಿನಿಂದ
ಕೊನರಿ ತೊನೆಯುವ ಸಾರಮಧುವ ಸಜ್ಜನಭ್ರಮರ-
ವನವು ಸವಿಯುತೆ ನಲಿವ ಕಲಿಯುಗದ ದೋಷಗಳ
ನೆನೆದ ಮಾತ್ರಕೆ ಕಳೆವ ಗೀತೆಯೆಂಬೀ ದಿವ್ಯಸುಮ ಶ್ರೀಯವೆಮಗೀಯಲಿ ೫

ಶ್ರೀಃ

ಗೀತಾಮೃತಲಹರೀ

ಮೊದಲನೆಯ ಅಧ್ಯಾಯ

ಸೂಚನೆ ॥ ಜನಮೇಜಯನೆ ಬಳಿಕ ರಣಕಣದಿ ಮಾರ್ಮಲೆತು
ಕಿನಿಸಿನಿಂ ಕಾಳಗವು ಕೈಗೆಯ್ಯೆ ಕಪಿಕೇತ
ನನಘನೊಳು ನೆರೆದ ಬಂಧುಗಳ ಬವಣೆಯು ನೆನೆದು ಹಲುಬಿದಂ ದೀನನಾಗಿ

ಕ್ಷತ್ರಿಯಕುಲಾವತಂಸನೆ ಕೇಳು ವರ ಧರ್ಮ
ಕ್ಷೇತ್ರವಾಗಿಹ ಸಮರಕಳವಾಗಿ ಮೆರೆವ ಕುರು
ಕ್ಷೇತ್ರದೊಳು ದಾಯಾದವಾಯದಲಿ ವಾಸಿವಿಡಿದತುಳ ಚತುರಂಗ ದಳವ
ಕ್ಷಾತ್ರತೇಜದೊಳೊಟ್ಟುಗೂಡಿ ಸಂಧಿಸಿದೆನ್ನ
ಪುತ್ರರಾಗಿಹ ಕೌರವರು ಮೇಗು ಪಾಂಡವರು
ಸುತ್ರಾಮಬಲರೇನಗೈದರೆಂದರುಹೆಂದು ಧೃತರಾಷ್ಟ್ರ ಸಂಜಯನೊಳು ೧

ಕೇಳಲವಧರಿಸೆಲೆ ಮಹೀಪಾಲ ಪಾಂಡವರ
ಪಾಳಯವನೆದುರಾರ್ದು ಸನ್ನದ್ಧವಿರೆ ಕಂಡು
ವ್ಯಾಳಕೇತನ ದ್ರೋಣನಂ ಸಾರ್ದುವಂದಿಸುತೆ ಮಣಿಮುಕುಟದೋಜೆಯೊಸೆಯೆ
ಪೇಳಿದಂ ಗುರುವರ್ಯ ನೋಡದೋ ದ್ರುಪದಸುತ
ನಾಳುತನದಲಿ ಬಲಿದು ನಿಂದಿರುವ ಕೌಂತೇಯ
ರೂಳಿಗದ ಪಾಯದಳವಿಸ್ತರವ ತವ ಶಿಷ್ಯನಾದ ಸೇನಾನಿಯೊಡನೆ ೨

ಅತಿಶೂರರಾರ್ಪಿನಲಿ ಭೀಮಾರ್ಜುನರಿಗೆ ಸಮ
ರತುಲ ಚಾಪವನೆತ್ತಿ ಪೊಯ್ಯೆ ಕಡುಗಿರ್ಪ ಹವ
ದಿತಿವೃತ್ತಪರಿತು ಪಳಗಿದ ಮಹಾರಥರು ದ್ರುಪದನು ವಿರಾಟನು ಶೈಬ್ಯನು
ಮತಿಮಂತ ಧೃಷ್ಟಕೇತುವು ಚೇಕಿತಾನನತಿ
ಹಿತದ ಪುರುಜಿತ್ಕಾಶಿರಾಜ ಕುಂತಿಭೋಜ
ಖತಿಯುಗಳುತ್ತಮೌಜಸು ಯುಧಾಮನ್ಯು ದ್ರೌಪದಿ ಸುಭದ್ರೆಯರಣುಗರು ೩

ಎಮ್ಮ ಪಕ್ಷವನೊಪ್ಪುವತಿಬಲರಸರುಮುಮೇನು
ತಮ್ಮ ಚಿತ್ತಕೆ ವೇದ್ಯವಾಗೆ ತಾವ್ ಭೀಷ್ಮಕೃಪ
ನೆಮ್ಮಗೆಯು ಕರ್ಣ ಸಮಿತಿಂಜಯಶ್ವತ್ಥಾಮ ಸೈಂಧವನು ಸೌಮದತ್ತಿ
ಹುಮ್ಮಸ್ಸಿನಾಳದ ವಿಕರ್ಣ ಮೊದಲಾದವರೆ
ಹೊಮ್ಮುವಂಗದ ವೀರರಸದೊರೆಯು ಕಡುದೋಳಿ
ನಮ್ಮನಿಂದೆನಗಾಗಿ ಹರಣವರ್ಪಿಸೆ ಸಿದ್ಧರಾಗಿರ್ಪ ಜೋಧರ್ಕಳು ೪

ಅಪಲಾಪವಿಲ್ಲದಿರೆ ಭೀಷ್ಮನಭಿರಕ್ಷಣೆಯೊ
ಳಪರ್ಯಾಪ್ತವಾಗೀರ್ಪುದೆಮ್ಮ ಸೇನೆಯು ಭೀಮ
ನಪರಿಮಿತ ಬಲ್ಪಿಂದಲಾರೈವ ಪಾಂಡವಾನೀಕದಿಂ ಪಡಿಯಿಡಲ್ಕೆ
ಗುಪಿತದಿಂ ನೀವೆಲ್ಲರೊಂದಾಗಿ ಚೂಣಿಯೊಳ
ಗುಪಹತಿಯನೊಡ್ಡದಲೆ ತಮ್ಮ ತಮ್ಮಯ ಸ್ಥಾನ
ದುಪರಿಭಾಗದಿ ನೆಲಸಿ ಗಾಂಗೇಯನಂ ಬಿಡದೆ ಬೆಂಗಾವುದೆಂದನಾಗ ೫

ಇದನಾಲಿಸುತೆ ಮೋದಮುತ್ತನಾದಾ ಕುರುಕು-
ಲದ ಪಿತಾಮಹ ಭೀಷ್ಮನುಬ್ಬಿ ಕಿಡಿಗೆದರಿ ಮೊಳ
ಗಿದ ಸಿಂಹನಾದಮನ್ನಾದರ್ಶ ಶಂಖಧ್ವಾನಯುದ್ಧದಾಹ್ವಾನವೆನಲು
ಅದವೆರಸಿ ಶಂಖಗೋಮುಖ ಭೇರಿಕಹಳಾದಿ
ಯೊದರಿದವು ಸರ್ವತ್ರ ಶತ್ರುವಾಹಿನಿಯುಂತ
ರದಿ ತುಮುಲರವ ಪೆರ್ಚೆ ಶ್ರುತಿಪುಟವ ನಿಗುರಿ ರೊಕ್ಕಾಡುವಂತಕನಾಳೆನೆ ೬

ಇಂತಿರಲಿಕತ್ತ ಸಿತಹಯಯುಕ್ತ ಮಣಿರಥವ
ನಾಂತ ಮಾಧವ ಮಧ್ಯಪಾಂಡವರ್ ತಮ್ಮರ್ಪ
ಕಾಂತ ಶಂಖಗಳೂದಿದರ್ ಬಿಮ್ಮನಿಂದರಿಗಳಂತರಂಗವ ಭೇದಿಸಿ
ಕಂತುಪಿತ ಪಾಂಚಜನ್ಯವ ದೇವದತ್ತಮಂ
ರೊಂತದಿಂದರ್ಜುನಂ ಪೌಂಡ್ರವ ವೃಕೋದರನ-
ನಂತವಿಜಯವ ರಾಜ ಧರ್ಮಜಂ ಬೊಬ್ಬಿರಿದು ಸಹದೇವನಕುಲರ್ಕಳು ೭

ಮಧುರ ಮಣಿಪುಷ್ಪಕ ಸುಘೋಷಗಳ ಕಾಶ್ಯಾದಿ
ಯುಧಟರತಿರಥ ಮಹಾರಥರೆಲ್ಲರೊಗ್ಗಿನಿಂ
ವಿಧುರ ಧ್ವನಿಯುಂ ದಿಶೆಗಳೇ ತುಳುಕಲೊಪ್ಪುತಿಹ ನಿಜ ಶಂಖಗಳ ಗೀಕ್ಷರು

ಮಧುವೈರಿ ಮುಖ್ಯರಿಂದಿಂತುಗಿದ ವಿಗಡಶರ
ವಿಧಿಪುರವನೇರಿ ಪಡಿಗೊಟ್ಟು ಭುವಿಯುದುರಿ ನಿ-
ರಥಿಯ ಪೆರ್ಮೆಯ ವೈರಿಮೋಹರವ ಕಂಪಿಸಿತು ಕಲ್ಪಾಂತ ಕಲಕಲವೆನೆ ೮

ಸುವ್ಯವಸ್ಥಿತರಾದ ಧಾರ್ತರಾಷ್ಟ್ರರ ಮುಂಚೆ
ಸವ್ಯಸಾಚಿಯು ನೋಡಿ ಬಿಲ್ವಿಡಿದು ಜೇಗೈದು
ನಿರ್ವ್ಯಸನಭಾವದಿಂ ಶಸ್ತ್ರಸಂಪಾತವಾರಂಭಿಸಲ್ಕೆಲಬಲದೊಳು
ಅವ್ಯಯಗೆ ಕೈಮುಗಿದು ಹರಿಯೆ! ಸ್ವೀಯವರೂಥ-
ವಂ ವ್ಯಷ್ಟಿಯಾಗಿ ಯುದ್ಧದ ಕಣದ ಮಧ್ಯದೊಳ
ಗವ್ಯವಚ್ಛಿನ್ನಾರಿಸೇನಾಸಮೂಹಮಂ ದಿಟ್ಟಿಸಲ್ಕಿಳುಪೆಂದನು ೯

ಯುದ್ಧತತ್ಪರರಾಗಿ ಕತ್ತಿಯೆತ್ತಿದ ದುಷ್ಟ-
ಬುದ್ಧಿ ದುರ್ಯೋಧನಗೆ ಪ್ರಿಯಚಿಕೀರ್ಷುಗಳಾಗಿ
ಬದ್ಧಕಂಕಣರಾದ ಬಲ್ಗೈಯ ಯೋಧರಂ ತಿಳಿದಾನು ಗುರುತಿಪನಕ
ಉದ್ಧಟರದಾರೊಡನೆ ನಾ ಸೆಣೆದು ಸೆಣಸೆ ಸ
ನ್ನದ್ಧನಾಗಿರವೇಳ್ಪುದೆಂದರಿವತನಕ ನೀ
ಶುದ್ಧಮೂರುತಿ ರಥವ ನಿಲಿಸೆಂದು ಕೃಷ್ಣನಿಂಗರಿಕೆಗೈದಂ ಪಾರ್ಥನು ೧೦

ಶೌರಿಯುಂದಣಪಡರಿ ವಾಘೆಯುಂ ಚಪ್ಪರಿಸಿ
ವಾರುವಗಳಂ ನಡೆಸಿ ಸೈನ್ಯದುರುವ್ಯೂಹಮಂ
ಡೋರುಗಳೆಯುತೆ ನಡುಕಳವ ಸೇರಿ ಪೊಂದೇರ ತಳುವಿ ನೋಡೆಂದನವಗೆ
ದೂರದಿಂದರ್ಜುನಂ ಸಿಟ್ಟಿಸಿದನೆಲ್ಲರಂ
ಸೋರುವೆದೆಯೊಳಗಜ್ಜ ಗುರು ಮಾವ ಸೋದರರ
ಮಾರಾಂತಪುತ್ರಪೌತ್ರಾಚಾರ್ಯಸುಹೃದರಂ ಬಗೆಬಗೆಯ ಬಾಂಧವರನು ೧೧

ನೋಡಿ ವಿಸ್ಮಿತನಾದ ವಾಸವಾತ್ಮಜನೆದೆಯು
ಪಾಡವಂ ವಾರಿಸಿಧಿಯಂತೆ ಬತ್ತಿಸುತಿರಲು
ಮೂಡಿದಾಂತರಿಕಸಂತಾಪ ಕೃಪೆಯೊತ್ತರವು ಭಾವಂಗೆ ಕೊರಗುತೊರೆದ
ಪಾಡಲರಿಯದ ದೇವಸೇನೆಂಬೆ ರಣಮುಖದಿ
ಕಾಡಿ ಕಾದಲು ನೆರೆದ ಸ್ವಜನರ್ಕಳಂ ಕಂಡು
ಬಾಡಿಹುದು ಮೊಗಮೆನ್ನನ್ನೈಜೋಲ್ಪು ಪೊಂಪುಳಿಸಿ ಹುರಿದಂತೆ ಹದಗೆಟ್ಟುದು

ಗಾಂಡೀವ ಕೈಯಿಂದ ಕುಸಿಯುತಿದೆ ಚಿತ್ತದಿರ
ಪಂಡಲೆದು ನೆಲೆಯೂರಲಾರದಿದೆ ಕಣ್ಣೆದುರು
ತಾಂಡವಿಸಿದಪಶಕುನಶತಗಳಿಂ ವಿಪರೀತವಾಗಿಹುದು ನೈಜಗತಿಯು
ಪುಂಡರೀಕಾಕ್ಷ ಬಂಧುಗಳ ಮಲೆತಾಹವದಿ
ದಿಂಡುಗೆಡೆಯಲು ಬಪ್ಪ ಶ್ರೇಯಂಗಳಂ ಕಾಣೆ
ಮೊಂಡತನದಿಂ ಕ್ಷಣಿಕ ರಾಜ್ಯಭೋಗದಿ ಲೋಲುಪರದಾಗಿ ಪೊಣರಲೆಮಗೆ ೧೩

ಎನಗೆ ವಿಜಯದಿ ಸುಖದಿ ಮೇಣ್ ರಾಜ್ಯದಲಿ ಬಯಕೆ
ಯಿನಿತಿಲ್ಲ ಈ ವಿಪುಲ ರಾಜ್ಯದುಪಭೋಗದೊಳು
ಜನುಮದೊಳಗೇನಿಹುದು ಪುರುಷಾರ್ಥವಾವಾರಿಗಾಗಿ ಹೊಡೆದಾಡಲಿಹೆವೊ
ವಿನುತರಾರಿಂಗಾಗಿ ಈ ವಿಷಯವಿಸ್ತರವ
ನನುಕರಿಪೆವಂಥ ಗುರು ಮಾತುಲನುಜಾದಿಗಳು
ಕನಲಿ ನಿಂದಿಹರು ಯುದ್ಧೋದ್ಯುಕ್ತಮನರಾಗಿ ಧನಪ್ರಾಣದಾಸೆಯೊಡೆದು ೧೪

ಇಂತಿರಲು ಮಧುಸೂದನನೆ ರಕ್ತಬಂಧುಗಳ
ಸಂತತಿಯನೇ ಕೊಲ್ಲಲಾನು ಹೇಸುತ್ತಿಹೆನು
ಪಂತದಿಂದೆನಗೆ ಈ ಮೂಲೋಕದಾಳ್ತನವೆ ದೊರೆಯಲೆನೆ ದಾಯಕಾಗಿ
ಅಂತರದೊಳಳುಕದಲೆ ಮಾರಣವನೆಸಗುವೆನೆ
ಸಂತಸದೊಳೆನ್ನನವರೇ ತರಿದು ತೀರಿಸಿದ
ರಂತರಿಸದೆಲೆ ಧಾರ್ತರಾಷ್ಟ್ರರಂ ಕೊಂದಾವ ಪ್ರೀತಿ ನಮಗಹುದು ಜಗದಿ ೧೫

ಆತತಾಯಿಗಳಾದರೂ ಬಾಂಧವರ ಸದೆಯು
ವಾತರ್ಗೆ ಪಾಪದನುಲೇಪ ತಪ್ಪದು ನೋಡೆ
ಪೂತಪುರುಷನೆ ತಮ್ಮ ತೆತ್ತಿಗರನರಿದಾವದಾವ ಸುಖವಂ ಪಡೆವೆವು
ಈತರ್ಗಳಾರುಮತಿಮಾತ್ಸರ್ಯಲೋಭಹತ
ಚೇತರ್ಗಳಾಗಿ ಕುಲಕ್ಷಯಮಿತ್ರದ್ರೋಹಾದಿ
ಪಾತಕಂಗಳ ಬಗೆಯದಿರ್ದರೂ ನಾವರಿತು ದುಡುಕಲನುಚಿತವಲ್ಲವೇ ೧೬

ಅಕ್ಷಯನೆ ನಾವು ದಾಯಾದರಂತಃಕಲಹ-
ದಕ್ಷಮತೆಯಿಂದ ಕೈಮಿಾರಲಾಹವದೊಳು ಕು
ಲಕ್ಷಯವೆ ಸಂಭವಿಸದಿರ್ದಪುದೆ ಕುಲಧರ್ಮವೆಲ್ಲ ಪಾಳಾಗಿ ಪರೆದು

ವಿಕ್ಷುಬ್ಧವಾಗದಿರ್ಪುದೆ ಧರಾವಲಯ ಧ
ರ್ಮಕ್ಷಯದಿ ಜನತೆಯಾಚಾರವೆಲ್ಲವಧರ್ಮ
ಭಕ್ಷಿಸುತಲೀಡಾಡದಿರ್ಪುದೇ ಶಿಷ್ಟರಿಂಗತಿ ಹೇಯವಾಗಿ ಮೊರಹಿ ೧೭

ಬಿಂಕದಿಂ ಭುವನವನಧರ್ಮವಾವರಿಸೆ ನಿ-
ಶ್ಶಂಕೆಯಿಂ ಕುಲವಧುಗಳೆಲ್ಲರೂ ನಡೆವಳಿಯ
ಕೊಂಕಿ ಕೆಡೆವರು ಹೀಗೆ ಸ್ತ್ರೀಚರಿತೆಯುಡಿಯಲ್ಕೆ ವರ್ಣಸಂಕರವಪ್ಪುದು
ಸಂಕರವು ಕಳಿವರಿಯಲಾ ಕುಲಘ್ನರು ಕುಲಗ
ಳಂಕೆಯಿಲ್ಲದೆ ನರಕಕೀಡಾಗುವರು ನಿರ್ಮ
ಲಾಂಕುರಗಳಿಲ್ಲದರ್ಕಳ ಪಿತಾಮಹರತ್ತ ಪಿಂಡೋದಕಾದಿಯಳಿದು ೧೮

ಕೆಳಗುದುರ್ವರು ಮುಂದೆ ಶಾಶ್ವತದ ಕುಲಧರ್ಮ-
ಗಳು ಜಾತಿಧರ್ಮಗಳು ನಸಿಯುವವು ಬಿಗುವಡಗಿ
ಬಳಿಕಲಾ ಮಾನಿಸರು ನರಕದಲಿ ಸರ್ವದಾ ಕೊಳೆವರೆನ್ನುತೆ ಕೇಳ್ದೆವು
ನಳಿನಾಕ್ಷ ನಾವಿಂದದೆಂತಿರುವ ಪಾತಕ-
ಕ್ಕೆಳಸಿರ್ಪೆವೆಮ್ಮವರನೇ ರಾಜ್ಯವಿಭವದೊಳ-
ಗಳಿವೆತ್ತು ಮಡುಹಲುಜ್ಜುಗಿಸಿ ರಣಧಾರಿಣಿಯ ಸೇರಿ ಬಿರುಸರಮೊನೆಯಲಿರ್ಗೆ

ಅರ್ತಿಯಾವೇಶದಿಂದಳುಪನೆನ್ನಂ ಶಸ್ತ್ರ
ಪರ್ತನೆಗಳಿಲ್ಲದಿರಲೆಮ್ಮ ದಾಯಾದಿಗಳು
ಕರ್ತರಿಸಿದರು ಕ್ಷೇಮತರವಹುದು ಈ ಪಾಪವಾನೆಸಗೆ ಗೆಲ್ಪಿನಿಂದ
ಧರ್ತಿಯಿಂತಿದ ತಳೆಯುತರ್ಜುನಂ ಹರಿಗೆ ಕೈ
ವರ್ತಿಸುತೆ ಬಿಲ್ಪತ್ತಳಿಕೆಯೊಗೆದು ಶೋಕರಸ
ನರ್ತಿಸುವ ಮನದೊರೆಯ ಹೆಬ್ಬೊನಲಿಸಿಂ ಮುದುಡಿ ನಿಜವರೂಥದಿ ಕುಸಿದನು

ಎರಡನೆಯ ಅಧ್ಯಾಯ

ಸೂಚನೆ || ಪಾರ್ಥನಾಹವಮಧ್ಯದೊಳಗೊರೆದ ದೀನತೆಯ
ವ್ಯರ್ಥ ಪ್ರಲಾಪವಂ ಕೇಳ್ದು ಕರುಣೆಯಲಿ ಪರ
ಮಾರ್ಥ ತತ್ತ್ವವನುಸಿರ್ದಂ ಸಾಂಖ್ಯಯೋಗವಂ ದೇವಕೀತನಯನಂದು

ರಣರಂಗದೊಳಗಿಂತು ಬಾಂಧವರ ವಧೆಗಳುಕಿ
ಮಣಿಯುದಂತಸ್ತಾಪದಿಂದ ದುಃಖಿಸುತಶ್ರು
ಕಣಗಳಿಂದಾಕುಲಿತನೇತ್ರನಾಗಿಹ ಧನಂಜಯಗೆ ಕಂಸಾರಿ ನುಡಿದ
ಪಣವೆತ್ತು ಯುದ್ಧ ಮೊಳಗಿರಲುಭಯ ಸೇನೆಯೊಳ-
ಗೆಣಿಸದಿದನೇಕೆ ದುಮ್ಮಾನದಿಂ ಕೊರಗುತೀ
ಚಣಕೆ ಕಲ್ಮಶವಾಂತೆ ನಿಜಕೀರ್ತಿಸ್ವರ್ಗಾದಿಗಳಿಗೆ ಬಾಹಿರನಾಗುತೆ ೧

ಒಳಸೋರದಿರು ಹೃದಯದೌರ್ಬಲ್ಯವಿದ ನೀಗು
ತಿಳಿಗೇಡಿಯಾಗದಿರು ಪೊಡೆಮರಳ್ದಿದ್ದೇಳು
ಪಳಿಯಬೇಡೆನ್ನ ವಚನವನೆನಲ್ಕೆ ಕಿರೀಟಿ ಮರುಕಳಿಸಿದಂ ಶೌರಿಗೆ
ಸುಳಿಗುರುಳ ಚೆಲುವ! ನೀನೆಂದ ತೆರ ನಾನೆಂತು
ಮುಳಿದು ಭೀಷ್ಮದ್ರೋಣ ಮುಂತಾದ ಪೂಜ್ಯರಂ
ತಳುವದರಿಯಾಗಿ ನಿಡುಸರಳಿಂದ ಕೀಲಿಸುವೆ ಬೀದಿವರಿಯುತೆ ಕಣದೊಳು ೨

ಗುರುಪಿತಾಮಹರುಗಳ ಸವರಿ ಬಹ ರಾಜ್ಯಾದಿ
ಸಿರಿತನಗಳಿಂ ತಿರಿದು ತಿಂಬುದೇ ಲೇಸಲ್ತೆ
ತರಿದಿವರ ಹಮ್ಮಿನಿಂದಿಹದೊಳಗೆ ರುಧಿರಾಕ್ತ ಭೋಗಕಾವೆಳಸಬಹುದೆ
ಮುರಿದು ಮುನ್ನುಗ್ಗಲಾವ್ ಗೆಲ್ವೆವೋ ಸೋಲ್ವೆವೆಂ
ದರಿಯೆವಾರಂ ಮಡುಹಿದರೆ ಜೀವಿತವೆ ದುಃಖ
ಕರವಾಗದಿರದಂಥ ರಕ್ತಬಾಂಧವರೆಲ್ಲ ಬಳಸಿ ನಿಂದಿಹರೆದುರಿಗೆ ೩

ಅತಿದೈನ್ಯದಿಂದ ಕಳೆಗುಂದಿರುವ ಭಾವದಿಂ
ಮತಿಹೀನನಾಗಿ ನಾ ಧರ್ಮದಿರವರಿಯದೆಲೆ
ವಿತತಾಕ್ಷ! ಕೇಳುತಿಹೆ ಶಿಷ್ಯನಾದೆನ್ನ ಬಿಡದುದ್ಧರಿಸುತುಪದೇಶಿಸು
ಹಿತದೊಳಿಂದೆನಗಮರಸಂಪದವೆ ರಿಪುವಿರದ
ಕ್ಷಿತಿಯ ಸಾಮ್ರಾಜತನವೇ ದೊರಕಿದರು ಹೃದಯ
ವತಿಶಯದಿ ಕರಣಚಯವುಡುಗಿ ಸುಡುತಿಹ ದುಗುಡದುರಿಯು ಬೇಗುದಿಯಾರದು

ಹೀಗೆನ್ನುತರ್ಜುನಂ ನಾ ಯುದ್ಧವೆಸಗೆನೆಂ
ದಾ ಗರುಡವಾಹನಗೆ ಬಿನ್ನೈಸುತಲಿ ಮೌನ
ವಾಗಿ ಮಂಡಿಸಿದನುನ್ಮೀಳಿಸುತಲಿ ನೋಡುತಿದ ಕಮಲಾಕ್ಷನೆಂದ ನಗುತ

ಸೋಗೇಕೆ ಪಾರ್ಥ ಪ್ರಾಜ್ಞನ ತೆರದೊಳೊರಲಿದರು
ಬೀಗರೆಂದವರ ಬಗೆಯುಳಲೇಕೆ ತೊಡೆಯುದಿಹೆ
ಆಗಮಜ್ಞರು ಸಾಯಲಿರಲಿ ಶೋಚಿಪರಲ್ಲ ಜಡ ಭೌತಿಕದ ಬಾಳ್ಕೆಗೆ ೫

ಇಲ್ಲಿರುವ ನಾನ್ನೀನು ಈ ನೃಪರು ಹಿಂದಕಿರ
ಲಿಲ್ಲವೆಂದಿಲ್ಲ ಮೇಣಾವೆಲ್ಲ ಮುಂದಕಿರ
ಲೊಲ್ಲೆವೆಂದಿಲ್ಲ ತನುವೊಂದರಲೆ ಬಾಲ್ಯತಾರುಣ್ಯ ಯೌವನ ಜರೆಗಳು
ಭುಲ್ಲವಿಸಿ ಬದಲುತಿರುವಂತೆ ದೇಹಾಂತರವ
ನುಲ್ಲಾಸದಿಂ ಕೊಂಬ ಜೀವಕಂ ಧೀರರೀ
ಸೊಲ್ಲಿನಲಿ ಮೋಹಗೊಳ್ಳರು ಪಂಚಕರಣದಿಂ ವಿಷಯ ಸಂಕುಲವೆಳಸಲು ೬

ತುಹಿನ ಸೋಕಲು ಶೈತ್ಯವನಲ ಮುಟ್ಟಲಿಕೌಷ್ಣ್ಯ
ಸಹಜವಿಪ್ಪಂತೆ ಮನದಲಿ ದುಃಖಸುಖ ಭಾವ
ಬಹುದು ತನ್ನಂತದರ ತಾಳು ನೀನದು ಕ್ಷಣಿಕ ಭಂಗುರವು ನಿತ್ಯವಲ್ಲ
ಇಹದಿ ಸಮ ಸುಖದುಃಖನಾಗಿ ಈ ಬಾಧೆಗಳ
ಸಹಿಸುತಿಹ ವೀರನೇ ಮೋಕ್ಷಪದಕಧಿಕಾರಿ
ಯಹನು ಅಸತಾದ ವಸ್ತುಪ್ರತತಿಗೆಂದಿಗಿರುವಿಕೆ ಸಲ್ಲದಿರುವಾತ್ಮಗೆ ೭

ಕೌಂತೇಯ! ಇಲ್ಲದಿರುವಿಕೆ ಸಲ್ಲದೀ ತತ್ತ್ವ
ದಂತವನ್ನಾತ್ಮಜ್ಞಯತಿಗಳರಿತಿಹರು ಜಗ-
ದಂತರಾಲವ ಹರಡಿ ಹಬ್ಬಿಹುದೆ ನಾಶವಿಲ್ಲದ ಪರಮವಸ್ತುವೈಸೆ
ಅಂತಿಪ್ಪ ನಿತ್ಯಾಪ್ರಮೇಯ ಚಿನ್ಮಯನಂಶ
ನಂತರೀಯಕವಾದ ದೇಹವಿದು ಜಡಜಂತ್ರ
ದಂತೆ ನಶ್ವರವಿಹುದು ನೋಡಲದರಿಂ ಯುದ್ಧಗೈಯಲುದ್ಯುಕ್ತನಾಗು ೮

ಯಾರು ಕೊಲ್ಲುವೆನೆಂದು ಮತ್ತೆ ಕೊಂದಿರುವನೆಂ
ದೇರಿ ತಿಳಿವರೊ ಮೂಢರವರಿಬ್ಬರೂ ಸತ್ಯ
ಸಾರವರಿಯರು ಜೀವನೆಂದಿಗೂ ಕೊಲ್ವುದಿಲ್ಲವು ಕೊಲಿಸಿ ಕೊಳ್ವುದಿಲ್ಲ
ಆ ರಿಕ್ತಪುರುಷನಿಗೆ ಹುಟ್ಟು ಸಾವುಗಳಿಲ್ಲ
ವಾರೈವರಿಲ್ಲವನ ನಿತ್ಯಶಾಶ್ವತನಜಂ
ಶಾರೀರಪಾತದಿಂ ಸಾವನಲ್ಲವು ಜೀವತತ್ತ್ವವಿಂತರಿವಾತನು ೯

ಕೊಡದೊಳಗಿನಾಕಾಶದಂತಾತ್ಮ ಸ್ವಸ್ಥನಿರೆ
ಹೊಡೆವುದಾರಂ ಕೊಲ್ವುದಾರ ಹೇಗೆಂದರುಹು
ತೊಡುಗೆಗಳು ಹಳಸೆ ಹರಿದೆಸೆದು ಪೊಸದುಡುಗೆಗಳ ನರರು ಸ್ವೀಕರಿಸುವಂತೆ
ತೊಡುತಿರುವನಾತ್ಮ ನವದೇಹಗಳ ಪಳೆಯುದ
ನ್ನುಡಿಯಲಾತನ ಕೈದುಗಳು ಕೀಲಿಸವು ಬೆಂಕಿ
ಸುಡದು ನೀರ್ನೆನೆಯದೆಲರೊಣಗದವ ಸ್ಥಿರಸತ್ಯ ಸರ್ವಗತನಚಲನಿಹನು ೧೦

ಅವನಿಂದ್ರಿಯಾಗೋಚರಂ ಚಿಂತನೆಗೆ ನಿಲುಕ
ದವ ವಿಕಾರಗಳನೊಳಗೊಳ್ಳದ ಸನಾತನಂ
ಜವಗುಂದದವನಿರವ ತಿಳಿದು ನೀನೀರೀತಿ ಮರುಗಲನುಚಿತಮಪ್ಪುದು
ಅವಗಡಿಸುತಾತನಂ ಜನನಮರಣಂಗಳು
ಳ್ಳವನೆಂದೆ ನೀ ನೆನ್ನಿದರು ಶೋಕವನುಚಿತವೆ
ಭವದಿಪುಟ್ಟಿರೆಸಾವು,ಮೃತಿಯ್ಯೆದೆಮರುಜನುಮವಪರಿಹಾರ್ಯವು ಮನುಜಗೆ

ತಪ್ಪಿಸಲ್ಕಳವಲ್ಲದೀ ಬಗೆಗೆ ನೀನರಿತು
ಜೆಪ್ಪಿನಿಂ ಬೇಯಲನುಚಿತವಲ್ತೆ ಯೋಚಿಸಲಿ
ಕುಪ್ಪರಿಸಿ ಕುಣಿವ ನೀರ್ವನಿಯಾಟದಂದದೊಳಗಾದ್ಯಂತಶೂನ್ಯವಾಗಿ
ಒಪ್ಪುವುದು ಮಧ್ಯದೊಳಗೀ ಭೌತಸೃಷ್ಟಿಯೆನ-
ಲಿಪ್ಪ ಪರಿವೇದನೆಯದೇನದರ ವೃತ್ತದಲಿ
ನೆಪ್ಪಿನಿಂದೋರೋರ್ವರಕ್ಕಜದೊಳವನ ವಿಷಯದಲಿ ಪಲವೆಣಿಸುತಿಹರು ೧೨

ಓರ್ವನಾಶ್ಚರ್ಯದಿಂ ಕಾಂಬನಿವನಂ ಮಗುಳ
ದೋರ್ವ ಪೇಳ್ವಂ ಕೇಳ್ವ ನಿನ್ನೋರ್ವನಾದರೂ
ಉರ್ವರೆಯೊಳಿವನ ವೃತ್ತಾಂತವರಿತವರಿಲ್ಲ ಸರಿಯಾಗಿ ಸೋಜಿಗವಿದೇ
ಸರ್ವಕಾರ್ಯಗಳಂತರದಿ ಮಿರುಗಿ ಮೆರೆಯುತಿಹ
ಖರ್ವಜೀವಂ ವಧ್ಯನಲ್ಲವದರಿಂ ನೀನು-
ಸಿರ್ವ ಬೇಳಂಬ ಪುರುಡಿಲ್ಲದುದೆ ಸುವಿವೇಕವಾಂತಾವು ಪರಿಶೀಲಿಸೆ ೧೩

ಕುಲಧರ್ಮವೀಕ್ಷಿಸಿದರೂ ನಿನಗೆ ಈ ವಿಷಯ
ದಲಿ ಮರುಕಕೆಡೆಯಿಲ್ಲ ಧರ್ಮಸಮ್ಮತಯುದ್ಧ
ದೊಲವಿನಿಂ ಮಿಕ್ಕ ಶ್ರೇಯಗಳಿಲ್ಲ ಕ್ಷತ್ರಿಯಗೆ ತಾನಾಗಿ ಗಂಟಿಕ್ಕಿದ

ಮಲೆತು ಮಡಿಯಲ್ತೆರೆದ ಸಗ್ಗದಗಸೆಯ ಪುಣ್ಯ
ಬಲದಿಂದಲೊದಗಿರ್ಪುದಾಹವಂ ಭೂಭುಜರಿ
ಗೊಲೆಯೆ ನಿಜತೇಜದಿಂ ನೀ ತೆಗಳಲಿದ ಮೌನದಿಂ ಸ್ವಧರ್ಮದ ಕೀರ್ತಿಯ ೧೪

ಕೋಳುಗೊಂಡತಿ ಪಾಪ ಹೊದ್ದದಿರಲಾರೆ ಮುಂ-
ದಾಳವಾಡುವರೆಲ್ಲ ಜನರು ನಿನ್ನಯ ಚರಿತೆ
ಪಾಳಾಗಿ ಸಾವಿನಿಂ ತವೆ ದುಗುಡಕಿಂಬುಗೊಡದಿರದು ಸಂಭಾವಿತರ್ಗೆ
ಕಾಳಾದ ಜಸವೆ ಮೃತಿಯಿಂ ದುಃಖಕರವಿಹುದು
ಸೂಳುನಗೆಯುಗಿಯದಿರಲಾರರೀ ನೆರೆದ ಕಾ
ದಾಳುಗಳು ನಿನ್ನ ಬವಣೆಗೆ ಹೆದರಿ ಹಿಮ್ಮೆಟ್ಟಿರುವನೆಂದು ಹೀನೈಸುತೆ ೧೫

ಯಾರಿಂದ ನೀ ಮನ್ನಣೆಯ ಪಡೆಯುತೀವರೆಗೆ
ಧಾರಿಣಿಯೊಳತ್ಯಂತ ಬಹುಮತನದಾಗಿರ್ದೆ
ಆ ರಥಿಕರೊಗ್ಗಿನಲಿ ಲಾಘವವನೈದದಿರಲಾರೆ ನಗೆಗೇಡಿಯಾಗಿ
ಮೀರಿದತಿನಿಂದೆಯಿಂ ನಿನ್ನ ರಿಪುಗಳು ಸತತ
ದೂರುವರು ನಿನ್ನ ನಿಡುದೋಳಬಲ್ಪಂ ದುಃಖ-
ಕಾರಿ ಪ್ರಸಂಗವೇತರದಿಲ್ಲಿ ಮಾನಿಸಂಗಿದರಿಂದ ಜೀವಿಸುತಿರೆ ೧೬

ಸತ್ತರಡರುವೆ ನಾಕಲೋಕವಂ ಜಯಿಸಿದೊಡೆ
ಉತ್ತಮ ಮಹೀತಳದ ಭೋಗಗಳನನುಭವಿಪೆ
ಬಿತ್ತರಿಸಲಿನ್ನೇನು ನಿಶ್ಚಯದ ಮನದಿ ನೀನೆದ್ದೇಳು ಯುದ್ಧಕಾಗಿ
ಕುತ್ತವಿಲ್ಲದೆ ಜಯಾಜಯಗಳಂ ಸುಖದುಃಖ
ಮೊತ್ತಗಳ ಲಾಭನಷ್ಟಗಳ ಸಮತೆಯೊಳಿರಿಸಿ
ಹೊತ್ತುಗಳೆಯದೆ ರಣವ ಕೈಗೊಳ್ಳು ನೀನಿಂತೆಸಗೆ ಪಾಪವಡೆಯಲಾರೆ ೧೭

ಇದು ಸಾಂಖ್ಯಯೋಗದೊಳು ಬಣ್ಣಿಸಲ್ಪಟ್ಟಿರುವ
ಸದುಪಾಯವೇತರರಿವಿಂದ ನೀ ಕರ್ಮವೆಸ
ಗಿದರೆ ಬಂಧನವೊಂದಲಾರೆ ಬೇಹಾರದೊಳಗಿದರಿಂದ ದೋಷವಿರದು
ಸದರವಾಗಿದ್ದರೀ ಧರ್ಮವೆಮ್ಮಂ ವಿಗಡ
ಬೆದರಿಂದ ಕಾಯ್ವುದಿಂತಿರುವ ವ್ಯವಸಾಯಾತ್ಮ-
ಕದ ಬುದ್ಧಿಯೊಂದೆ ವಿಪರೀತ ಮತಿಗಳನಂತಶಾಖೆಗಳನಾಂತಿರುವವು ೧೮

ಹಳುವರಾರೀ ಪಲಿತಮಾತನೆಂಬರೊ ವೇದ
ಗಳ ಕರ್ಮಕಾಂಡದಲಿ ರತರಾಗಿ ಕರ್ಮದಿಂ
ದುಳಿದುದೇನಿಲ್ಲವೆನ್ನುತೆ ಕಾಮ ಸ್ವರ್ಗಭೋಗಾದಿಯೇ ಸರ್ವವೆನುತೆ
ತಳುವದೈಹಿಕಜನ್ಮ ಸುಖಸಂಪದಾದಿ ಫಲ
ಗಳನೀವ ಕರ್ಮವೇ ಸರ್ವಸ್ವವೆನುತವರು
ಪೇಳವರಂಥವರ ಚೇತವು ಕರ್ಮಯೋಗದೊಳವರಿತು ನೆಲೆಯೂರದಿಲ್ಲಿ ೧೯

ವೇದಗಳು ಸತ್ತ್ವ ರಜ ತಮವೆಂಬ ತ್ರಿಗುಣಗಳ-
ನಾದರಿಸಿಹವು ನೀನವುಗಳವಧಿಯುಂ ದಾಟು
ಮೋದದಿಂ ಸುಖದುಃಖ ಮೊದಲಾದ ದ್ವಂದ್ವಗಳ ನೀಗಿ ಸತ್ತ್ವಸ್ಥನಾಗಿ
ಕಾದಲಿಂದಿಲ್ಲದುದ ಪೊಂದುವಿದ್ದುದ ಕಾವ
ವಾದವಿರದಾತ್ಮಪರನಾಗುತ್ತಲಲ್ಪ ಕೂ-
ಪಾದಿಯಿಂದೊಡರುವರ್ಥವು ವಿಪುಲಸಲಿಲಾಶಯಗಳಿಂದಲೊದಗುವಂತೆ ೨೦

ನಿಜಸ್ವರೂಪವನರಿತ ದ್ವಿಜಗೆ ವೇದಾದಿಗಳು
ಗಜಬಜಿಪ ಫಲಶ್ರುತಿಯು ತಾನಾಗಿ ದೊರಕುವುದು
ಸುಜನರಿಂ ವಿಹಿತವಾಗಿಹ ನೈಜಕರ್ಮದೊಳಗಧಿಕಾರಿ ನೀನವುಗಳ
ಗಜರುವ ಫಲಂಗಳನ್ನಂಗೈಸದಿರು ಕರ್ಮ
ವ್ರಜದ ಫಲಗಳಿಗೆ ಕಾರಣನಾಗದಿರು ಸಿಕ್ಕಿ
ದಜರುಹಿ ಕರ್ಮವೆಸಗಲೆ ಮಾಣದಿರು ಪಾರ್ಥ! ವ್ಯವಹಾರದೊಳಗದ್ದಿರೆ ೨೧

ಕರುಮಗಳ ಯೋಗಸ್ಥನಾಗಿ ನೀ ಮನಬಂದ
ತೆರ ಚರಿಸು ಸಂಗವಡೆಯದೆ ಬವಸೆಯೊಸಗೆಯಲಿ
ವಿರಚಿಸಲು ಕಾರ್ಯ ಸಿದ್ಧಿಸಲಿ ಸಿದ್ಧಿಸದಿರಲಿ ಸಮತೆಯೇ ಯೋಗವಿಹುದು
ಚಿರವಾದ ಜ್ಞಾನವೇ ಮೇಲು ಫಲವಾಶಿಸುವ
ಕಿರುಕರ್ಮದಿಂದೆನಲು ತುಚ್ಛಫಲಹೇತುಗಳ
ತೊರೆದಮಲ ಬುದ್ಧಿಯೊಳೆ ಶರಣಾಗು ಸರ್ವದಾ ಹಿತವಪೇಕ್ಷಿಸುತಿದ್ದರೆ ೨೨

ತಿಳಿದರಿವಿನಿಂ ಮನುಜ ಸುಕೃತ ದುಷ್ಕೃತ ಹೊರೆಗ
ಳಿಳುಹುವಂ ಕೊಳ್ಳದಂತಿಹ ಯೋಗಮನನಾಗಿ
ಬಳಿಬಂದುದೆಸಗುತಿರು ಕರ್ಮದಲಿ ಜಾಣತನದರಿತವೇ ಯೋಗವಿಹುದು

ಅಳುಕವರುಹಿನ ಜ್ಞಾನಿಗಳು ಕರ್ಮಗಳ ಗೈಯು
ಲಳವಡಿಪ ಫಲದಾಸೆಯೊಡೆದು ಮರುಜನುಮಾದಿ
ಗಳ ಕಟ್ಟ ಕಳೆದು ಪರಪದವಿಯಂ ಪೊದ್ದುತಿಹರಾತಂಕವಿಲ್ಲದಿರ್ದು ೨೩

ಎಂದು ನಿನ್ನಯ ಶುದ್ಧಬುದ್ಧಿ ತಪ್ಪರಿವೆಂಬ
ಕುಂದ ತಿದ್ದುವುದೊ ನೀನಂದು ಫಲಶ್ರುತಿಗಳೊಳ
ಗೆಂದ ಮಾತುಗಳಲ್ಲಿ ತಿರುಳಿಲ್ಲವೆಂದರಿವೆ ವೇದದಲಿ ಹೊಯ್ದಾಡುವ
ಮಂದಮತಿಯೆಂದು ನಿಶ್ಚಲವಾಗಿ ವಿಷಯಗಳ
ವೃಂದದಿಂ ಕಡಿದಾತ್ಮತತ್ತ್ವದೊಳು ನೆಲೆನಿಲ್ವ
ದಂದು ಯೋಗವ ಪಡೆವೆ ಕೌಂತೇಯನೆನೆ ಕೊಸರಿ ಕೃಷ್ಣನಂ ಕೇಳ್ದನಾಗ ೨೪

ಪಕ್ಷಿವಾಹನ! ನೀನುಸಿರ್ದ ಸ್ಥಿರಪ್ರಜ್ಞಕನ
ಲಕ್ಷಣಗಳೇನಾತನಾತ್ಮನೊಳ್ ಬೇರೂರ್ದ
ದಕ್ಷಮತಿಯಿಂದೇನ ಪೇಳ್ವ ಹೇಗಿರುವನೇಗೈವ ಬೇಹರದೊಳೆನಲು
ಅಕ್ಷಯಂ ಮುಂದೊರೆದನಾರು ತನ್ನಯ ಮನದ-
ಪೇಕ್ಷೆಗಳನೆಲ್ಲ ತಡೆಗಡಿದಿಹನೊ ಕುಡಿವಡೆದು-
ಪೇಕ್ಷೆಯಿಂದಾತ್ಮನೊಳಗಾತ್ಮನಿಂ ತುಷ್ಟನಿಹನಾತನೇ ಸ್ಥಿರಪ್ರಜ್ಞನು ೨೫

ದುಗುಡ ಬಂದಾಗ ಕುಗ್ಗದೆ ಸುಖದಿ ಹಿಗ್ಗದಲೆ
ವಿಗತರಾಗದ್ವೇಷಭಯನೆ ಸ್ಥಿರಮತಿಯೈಸೆ
ಸೊಗಯಿಸುವನಾರಿಗೆಲ್ಲೆಡೆಯೊಳತಿ ನೇಹವಿಲ್ಲದೆ ಶುಭಾಶುಭವಡೆಯಲು
ಮೊಗೆಯದಿವೆ ಮೋದಶೋಕಗಳಂಥ ನರನಮತಿ-
ಬಿಗಿದು ಪ್ರತಿಷ್ಠಿತವು ಮೇಣಾಮೆಯಂತಿಂದ್ರಿ
ಯಂಗಳನೊಳಸೆಳೆದಾರು ಬಲಿಯುವರೊ ವಿಷಯದಿಂದವರ ಮತಿಯು ಸ್ಥಿರವಿದೆ

ಉಕ್ತವಿಷಯಗಳೆಲ್ಲ ದೇಹಿಯನ್ನವುಗಳಾ
ಸಕ್ತಿಯಿಲ್ಲದೆ ಚರಿಸುತಿರೆ ಬಿಡುವವನೊಳನು
ರಕ್ತನಾಗದೆ ಮರುತಲದಿ ಸಸ್ಯ ಬೆಳವಿನಂತುಳಿದ ರಸದೊಸರಾದರೂ
ಸೂಕ್ತಪರನಂ ಕಾಣೆ ಮರಳುವುದು ಯತ್ನಪ್ರ
ಸಕ್ತ ಪಂಡಿತನಾದರೂ ವಿಕಟಕರಣಗಳು
ಯುಕ್ತಿಯಿಂ ಹದಗೆಡಿಸುತಿಹವು ಚಿತ್ತವ ಕದಡಿ ದೆಸೆದೆಸೆಗೆ ಕೆದರುತಿಹವು ೨೭

ಅವುಗಳಂ ನಿಗ್ರಹಿಸಿ ನನ್ನನೇ ಗತಿಯೆಂದು
ಕವಿದು ಕಾಣುತಲಾರ ವಶದೊಳಿಂದ್ರಿಯಗಳಿಹ
ನವನ ಪ್ರಜ್ಞೆಯೆ ಪ್ರತಿಷ್ಠಿತವು ಲೋಕದಿ ನರಗು ವಿಷಯಗಳನೆಣಿಸುತಿರಲು
ಅವುಗಳಲಿ ಕೂರ್ಮೆಯುಂಟಾಗುವುದು ಕೂರ್ಮೆಯಿಂ
ತವೆ ಹಂಬಲುದಿಸುವುದು ಹಂಬಲಿಂ ಮುನಿಸೊಡ [ಮಸಳುತಿಹುದು
ರ್ಚುವುದು ಮುನಿಸಿಂ ಭ್ರಾಂತಿಯೊದಗುವುದು ಭ್ರಾಂತಿಯಿಂ ನೆನಪಾರಿ

ಸ್ಮೃತಿಭ್ರಂಶದಿಂ ಬುದ್ಧಿನಸಿಯುವುದು ಬುದ್ಧಿ ತಾ
ಗತಿಗುಂದೆ ತಾನೆ ನಶಿಸುವ ರಾಗದ್ವೇಷಾದಿ
ಯತಿಭಾವಕಲನೆಯಿಲ್ಲದೆ ತನ್ನ ವಶದೊಳಿಹ ಕರಣಂಗಳಿಂ ವಿಷಯದಿ
ಸತತ ಚರಿಸುವ ಜೀವಕನ ಮನವು ತಿಳಿದಹುದು
ಚತುರ ಚಿತ್ತವು ತಿಳಿಯೆ ಸಕಲ ದುಃಖಗಳಡಗಿ
ಮತಿಯು ಸ್ಥಿರವಾಗುವುದು ಚೇತವಿಕಸಿತವಾಗಿ ಪರಮಾತ್ಮನಿರತವಾಗಿ ೨೯

ಮನವಿಂತು ಪಳಗದಿರಲೊಂದಾಗಿ ಪರತತ್ತ್ವ-
ವನುಚರಿಪ ಬುದ್ಧಿ ಬಾರದು ತತ್ತ್ವದಲಿ ಪ್ರೀತಿ-
ಯನು ಗೈಯಲಾರದಂತಿರೆ ಶಾಂತಿಸೊಸಲಾರದಶಾಂತಗೆಲ್ಲಿ ಸುಖವು
ತೊನೆಯುವಿಂದ್ರಿಯಗಳೊಂದಿಸಿ ಮನವ ಹರಿದಾಡ
ಲನಿಲನುಬ್ಬೇರೆ ಮುನ್ನೀರಿನಲಿ ನಾವೆಯೋ-
ಲನುಗೆಡಿಸದಿರದಿಲ್ಲಿ ಪ್ರಜ್ಞೆಯಂ ನೆಲೆಯಿಲ್ಲದೆಲರ ಸುತ್ರಾಟದಂತೆ ೩೦

ಎಂದೆ ಯಾರಿಂದ್ರಿಯಗಳೀ ವಿಷಯ ತಿಂಥಿಣಿಗ
ಳಿಂದ ಬಿಗಿಹಿಡಿದಿದ್ದು ಸುಸ್ಥಿತವೊ ಅವನ ಮತಿ
ಯಂದಗೆಡದೆ ಪ್ರತಿಷ್ಠಿತವು ಸರ್ವರಿಗಾವುದಿಲ್ಲಿ ನಿಶೆಯದುವೆ ಯತಿಗೆ
ಚೆಂದದಿಂ ಜಾಗರವು ಮಿಕ್ಕವರ ಜಾಗರವೆ
ಮಂದದೃಷ್ಟಿಯ ನಿಶೆಯು ತತ್ತ್ವ ನಿರುಕಿಸುತಿರಲು
ಕಂದದುಕ್ಕದೆ ನಿಂತ ನೀರಕಡಲಲಿ ಹೊರಗಣಿಂದ ವಾರಿಪ್ರಸರವು ೩೧

ಸೇರ್ವತೆರದೊಡಗಲಸಿ ಯಾರೊಳಗೆ ಬಯಕೆಗಳು
ಸರ್ವದಾ ಪೊಳೆತರೊಡಗೂಡುತಡಗುತ್ತಿಹವೊ
ಪಾರ್ವನವ ಶಾಂತಿಯೊಂದುವ ಕಾಮಗಳ ಸತತ ಕಾಮಿಸುವ ನರ ತಪಿಸುವ

ಸರ್ವ ಚಿಂತಾವಳಿಯ ತ್ಯಜಿಸುತಾರೀ ಜಗದಿ
ಸೇರ್ವ ಮಮತಾಹಂತೆಗಳ ಕೊಳೆಯ ತೊಳೆದು ತಾ
ನಿರ್ವೇಗ ಪರನಾಗಿ ಪರಪದವ ಭಾವಿಸಲಿಕಾತ ವಿಶ್ರಾಂತಿಪಡೆವ ೩೨

ಇದುವೆ ಪರಬೊಮ್ಮನೊಳ್ ನೆಲೆಗೊಂಡ ನೈಜಸ್ಥಿತಿ
ಯಿದೆ ಹೊಂದಲಿದನಾವ ಭ್ರಮೆಯೊದವದಿನ್ನು ಬೆಳೆ [ವಾಗಲು
ಯದು ಹಲವು ಕೊಂಬೆಗಳನೊಳಗೊಂಡು ಮುಂದದರೊಳೇ ಮುಡಿಪಿಲಯ
ಸದಮಲ ಬ್ರಹ್ಮನಿರ್ವಾಣವೈದುವ ಜೀವ-
ನದುಭುತದ ಬವದುರುವ ಬೆಮೆಯ ಬೆಳ್ಪಾರದಿಂ
ಬಿದಿರಿ ತನ್ನುವ ಧನಂಜಯ! ಸಲಿಲದುಲ್ಲೋಲ ಸಲಿಲದೊಳಗಡಗುವಂತೆ ೩೩

ಮೂರನೆಯ ಅಧ್ಯಾಯ

ಸೂಚನೆ || ವಸುದೇವತನಯ ವಿವರಿಸಿದನಾ ಕೌಂತೇಯ
ಗಸಮ ಕರ್ಮದ ಯೋಗಮಂ ದೇಹಿಕರ್ಮಗಳ
ನೆಸಗುತಿದ್ದರು ತನ್ನ ವ್ಯವಹಾರ ಪದವಿಯಲಿ ಬಂಧವಡೆಯದ ಬಗೆಯನು

ಎನೆ ಧನಂಜಯ ಕೇಳ್ದ ಗೋಪಾಲನಂ ಮಣಿದು
ಅನಘ! ನಿನ್ನಯ ಮತದಿ ಕರ್ಮದಿಂ ಜ್ಞಾನವೇ
ವಿನುತವಾಗಿರಲೇಕದಿಂತಿಪ್ಪ ಘೋರತರ ಕರ್ಮದೊಳಗೆನ್ನನೆಳೆವೆ
ಮನವರಿತೆ ನೀನಿಂತು ಬೆರಕೆಯಿಬ್ಬಗೆಯ ಮಾ-
ತಿನಸರಣಿಯಿಂ ಮೋಹಿಸಿರುವೆನ್ನ ಚಿತ್ತಮಂ
ಎನಗೆ ಶ್ರೇಯಪದಾವರೀತಿಯಾಶ್ರೈಸೆ ಬಹುದೆಂಬ ನಿರ್ಣಯವನರುಹು ೧

ಕೋಕನದನಿಭ ಪೇಳ್ದನೆರಡು ವಿಧದ ಸ್ಥಿತಿಯ
ಲೋಕದೊಳಗೊರೆದೆ ಸಾಂಖ್ಯರಿಗೆ ಜ್ಞಾನದ ಯೋಗ
ವಾ ಕರ್ಮಯೋಗಮಂ ಸಾಧಕರಿಗೆಂದು ಕೆಲಸಕ್ಕೆ ಕೈಹಾಕದುಳಿಯೆ
ಸೋಕಲಾರದು ಕರ್ಮಶೂನ್ಯತೆಯು ಸಂನ್ಯಾಸ
ಸ್ವೀಕಾರದಿಂ ಸಿದ್ಧಿಯೊದವದಾರಿಗು ಕ್ರಿಯೆಗ
ಳೋಕರಿಸಿದರು ನಿಮಿಷವಾದರಾರೂ ಕರ್ಮವೆಸಗದಿರಲಳವಲ್ಲವು ೨

ಸಹಜ ಪ್ರಕೃತಿಯ ಗುಣಗಳಿಂದೆಲ್ಲರೂ ಕರ್ಮ
ವಹಿಸುವರು ವಿವಶರಾಗಿದ್ದು ಯಾರಿಲ್ಲಿ ನಿ-
ಗ್ರಹಿಸುತಲಿ ಕರ್ಮೇಂದ್ರಿಯವ್ರಜವ ಮನದಿಂದ ವಿಷಯಗಳನೆಳಸುತಿರುವ
ಪಿಹಿತನಾಗಿದ್ದರವ ಪೊರಗೆ ಮಿಥ್ಯಾಚಾರ
ನಿಹನು ಯಾರಿಂದ್ರಿಯಂಗಳ ಮನಸಿನಿಂ ಪಳಂ
ಕಿಹದೊಳಾಸಕ್ತಿಯಿಲ್ಲದೆ ಕರ್ಮವಾಚರಿಸುವಾತನೆ ವಿಶಿಷ್ಟನಿಹನು ೩

ವಿಹಿತಕರ್ಮವ ಮಾಡುತಿರು ಕರ್ಮಗಳನೆಸಗ
ದಿಹುದರಿಂ ಕರ್ಮತತ್ಪರತೆ ಲೇಸಿದೆ ನೋಡೆ
ಮಹಿಯ ಮಾನಿಸವಾಳು ಗೆಯ್ಯದಿರಸಂಗತವು ಪರಮೇಶಗರ್ಪಿಸದಲೆ
ವಿಹಿತಕರ್ಮಗಳೆಲ್ಲ ಬಂಧಕಾರಿಗಳು ಭವ
ದಿಹುದಿದಾಸಕ್ತಿಯಿಲ್ಲದೆ ನೈಜ ನಡೆವಳಿಯ
ಮಹಿಮಗೆ ನಿವೇದಿಸುತಲದರಿಂದ ನಡೆಸು ನೀ ಬಂಧನಕ್ಕಿಂಬುಗೊಡದೆ ೪

ಪ್ರಜೆಗಳಂ ಯಜ್ಞವಿಧಿಯೊಡನೆ ಪ್ರಜಾಪತಿಯು
ಸೃಜಿಸುತಲಿ ಪೇಳಿದ್ದನಿದರಿಂದ ನಿಮ್ಮೇಳ್ಗೆ
ಯುಜುರಲಿದುವೇ ನಿಮಗೆ ಸರ್ವಾರ್ಥವೀಯುತಿಹ ಕಲ್ಪಪಾದಪವಾಗಲಿ
ಋಜುಭಾವದಿಂದವುಗಳಿಂದಮರರಂ ನೀವು
ಭಜಿಸುತಿರಲವರು ನಿಮ್ಮವ ಭಾವಿಸಲಿ ಮುಂದ
ಕಜರರೂ ನೀವೂ ಪರಸ್ಪರ ಪ್ರೀತಿಯಿಂ ಪರಮ ಶ್ರೇಯವನೈದಿರಿ ೫

ವಿನುತಯಾಗಾದಿ ಕರ್ಮದಿ ಸಂತಸವ ತಳೆದಿ-
ಹನಿಮಿಷರು ಕೊಡುತಿಹರು ಬಯಸಿದುದನೆಲ್ಲವವ
ರನುವಿಂದ ದೊರಕಿದುದನವರಿಗೀಯದೆ ತಿನುವ ಮನುಜ ಕಳ್ಳಗೆ ಸಮನಿಹ
ಅನುಗೈವ ಯಜ್ಞಗಳ ಶಿಷ್ಟವುಣ್ಣಲು ಪಾಪ
ದನುಲೇಪದಿಂ ಮುಕ್ತರಾಗುವರು ಮೇಣಾರು
ಸನಗುಗಳ ಹೊಟ್ಟೆಪಾಡಿಂಗಾಗಿ ಬೇಯಿಸುವರವರು ಕಿಲ್ಬಿಷವುಂಬರು ೬

ಅನ್ನದಿಂ ಪ್ರಾಣಿಗಳು ಪುಟ್ಟುವವು ಮಳೆಯಿಂದ
ಲನ್ನವುದ್ಭವಿಸುವುದು ಮಳೆಯು ಯಜ್ಞಾದಿಯಿಂ
ದುನ್ನತಿಸುವುದು ಯಜ್ಞಯಾಗಾದಿಗಳು ಕರ್ಮದಿಂದ ಸಂಭವಿಸುತಿಹವು

ಸನ್ನುತದ ಕರ್ಮಗಳು ವೇದಾದಿಯುಲಿ ವಿಹಿತ
ವಿನ್ನು ವೇದಗಳು ಪರಮಾತ್ಮನಿಂ ವರ್ಣಿತಗ
ಳುನ್ನಿಸಲಿಕದರಿಂ ಶ್ರುತಿಯು ಸರ್ವವಿಷಯುವೊರೆದರು ಯಜ್ಞವಾದರಿಪುದು ೭

ಚಕ್ರವೀರೀತಿಯಿಂದುರುಳುತ್ತಲಿರಲಾರು
ವಕ್ರನಾಗುತೆ ಸಾಗಿಸುತ್ತಿಲ್ಲವದನವಂ
ಶಕ್ರಸಮನಾದರೂ ಪಾಪವಾಳಿಂ ವಿಷಯುಲೋಲುಪ್ತಿಯಿಂ ವ್ಯರ್ಥದಿ
ನಕ್ರದೋಲ್ ಬದುಕುತಿಹ ಯಾರಾತ್ಮರತನಾಗು-
ಪಕ್ರಮಿಸುತಾತ್ಮನಿಂ ತೃಪ್ತನಾಗಾತ್ಮನೊಳೆ
ವಿಕ್ರಮದಿ ವಿಹರಿಸುತೆ ಸಂತುಷ್ಟನಿಹನವಗೆ ಕರ್ತವ್ಯಮೇನಿಲ್ಲವು ೮

ಅಂತಿಪ್ಪ ಮನುಜನಿಗೆ ಕರ್ಮಗೈದರು ಗೈಯ
ದಂತರಿಸಿದರು ಬಪ್ಪ ಪುರುಷಾರ್ಥಮೇನಿಲ್ಲ
ದಂತುರಿತ ಸರ್ವಭೂತಂಗಳೊಳಗವಗರ್ಥಲೇಶವಿಲ್ಲವು ನೆರವಿಗೆ
ಸಂತತದರಿಂದಸಕ್ತನದಾಗಿ ತನ್ನ ಕಾ
ರ್ಯಾಂತರಗಳಂ ಮಾಡುತಿರು ಸಂಗವಿಲ್ಲದಲೆ
ಸಂತಸದಿ ನಿಜಕರ್ಮಗಳ ನಡೆಸೆ ಸುಲಭದಿಂ ಪರಪುರುಷನಂ ಪಡೆವನು ೯

ಜನಕನೇ ಮೊದಲಾದವರು ಕರ್ಮದೊಳೆ ಸಿದ್ಧಿ
ಯನುಗೈದರಂತೆಯೇ ನೀನಾದರೂ ತಿಳಿದು
ಜನತೆಗೀ ಮೇಲ್ದಾರಿಯಂ ತೋರಿಸಲಿಕುಚಿತಕರ್ಮಗಳನೆಳಸಬೇಕು
ಸನುಮತದೊಳಾವುದುತ್ತಮರು ಚರಿಸುತ್ತಿಹರ-
ದನೆ ಮಿಕ್ಕ ಸಾಮಾನ್ಯರುಗಳು ಮಾಡುವರವರ
ನನುಕರಿಸಿ ಸರಿತಪ್ಪುಗಳು ಜನರ ವ್ಯವಹಾರಪಥದಿ ನಿರ್ಣೀತವಹವು ೧೦

ಮೂರುಲೋಕದೊಳೆನಗೆ ಮಾಡಲೆಂದಿಹ ವಿಹಿತ
ಪಾರುಪತ್ಯಗಳಿಲ್ಲವೆನಗೆ ಪೊದ್ದಲಿಕುಳಿದ
ಸಾರವಸ್ತುಗಳಿಲ್ಲವಾದರೂ ನಿಜಕರ್ಮವೆಸಗುತಲೆ ನಡೆಯುತಿಹೆನು
ಆರೈಸದಾನೆನ್ನ ಕರ್ಮಗಳನಾಲಸ್ಯ-
ಭಾರದಿಂ ಸುಮ್ಮನಿದ್ದೊಡೆ ಜನರ ಜಂಗುಳಿಯೆ
ದೂರುತೆನ್ನಯ ದಾರಿಯನ್ನೆ ಹಿಂಬಾಲಿಪರು ತುದಿಮೊದಲನರಿಯದಿದ್ದು ೧೧

ನಾ ಕರ್ಮಗಳ ಗೈಯದಿರ್ದರೀ ಪದಿನಾಲ್ಕು
ಲೋಕಗಳೆ ಪಾಳಾಗದಿರವು ಸಂಕರಕಿಹದಿ
ನಾ ಕರ್ತೃವಾಗದಿರಲಾರೆ ಬಡಪ್ರಜೆಗಳಂ ತಾರುತಟ್ಟಾಗಿಸದಿರೆ
ಕಾಕುಬುದ್ಧಿಯುಂ ಕರ್ಮಗಳನೆಸಗುವಂತೆ ಫಲ-
ದಾಕಾಂಕ್ಷೆಯಿಂ ಜ್ಞಾನಿಯಾದರೂ ಕರ್ತವ್ಯ
ಮೋಕರಿಸದೆಲೆ ನಡೆಸುತಿರಬೇಕು ಮಂದಮತಿಗಳಿಗೆ ಮಾದರಿಯಾಗುತೆ ೧೨

ತಿಳಿವಿಲ್ಲದಧಮ ಕರ್ಮಗಳ ಗೈಯುವ ಮನುಜ
ರೊಳವನಲುಗಿಸಬಾರದೆಂದಿಗೂ ತಿಳಿದಿರಲು
ಬಳಿವ ಫಲದಾಸೆಯಿಲ್ಲದೆ ಸ್ವೀಯಕರ್ಮಗಳ ಚರಿಸಿ ತಿದ್ದಲು ಬೇಹುದು
ಸುಳಿವ ಪ್ರಕೃತಿಯ ಸತ್ತ್ವರಜತಮೋಗುಣಗಳಿಂ
ತಳುವದಾಗುವ ಸರ್ವಕರ್ಮಜಾಲಕೆ ದೇಹ-
ದೊಳಗಿನಭಿಮಾನದಿಂ ಬೆರೆವ ಜೀವಂ ತನ್ನನೇ ಕರ್ತೃವೆಂದೆಣಿಸುವ ೧೩

ಗುಣಕರ್ಮಗಳ ಮರ್ಮವರಿತ ತತ್ತ್ವಜ್ಞಾನಿ
ಸೆಣೆಯದಿಹ ಕರ್ಮದ ವಿಪಾಕದೊಳಗವ ಪ್ರಕೃತಿ-
ಗುಣಗಳೇ ತಾವ್ ತಮ್ಮೊಳೇ ರಮಿಸುತಿಹವೆಂದು ನಿರ್ಲಿಪ್ತನಿರುವ ಜಗದಿ
ಅಣಗದಿಹ ಹಂತೆಯಿಂ ಕಾಯಾದಿಯಭಿಮಾನ
ವೆಣಿಸಿ ಚರಿಸುವ ಜನರು ಬಂಧನವ ಕೊಂಡಿಹದಿ
ಪೊಣರುವರು ಭವರಂಗದೊಳಗಂಥ ಮೂಢರಂ ಸುಜ್ಞ ಕದಲಿಸಬಾರದು ೧೪

ನಾನೆಲ್ಲರೊಳಗೆ ಬೆಳಗುವೆನೆಂದು ತಿಳಿಯುತಭಿ
ಮಾನವಡೆಯದೆ ಹಂಬಲಿಡಿಯದೆಲೆ ಕರ್ಮಗಳ
ಸಾನುರಾಗದೊಳೆನಗೆ ಮಾಣದರ್ಪಿಸಿ ಯುದ್ಧವೆಸಗು ತಳಮಳಗೊಳ್ಳದೆ
ಈ ನನ್ನ ಮತವನಾರೆನ್ನ ವಿಶ್ವಾಸದಿಂ
ದಾನುತಿಹರನಸೂಯಕರದಾಗಿ ಮುಂದಕವ
ರೂನವಿಲ್ಲದೆ ಪಾಪಪುಣ್ಯಾದಿ ಜಾಲದಿಂ ಬಿಡುಗಡೆಯ ಪೊಂದದಿರರು ೧೫

ಈ ವಿಷಯಗಳ ಮತ್ಸರಗ್ರಸ್ತರಾಗಾರು
ನಾ ವಿವೇಚಿಸಿದಂತೆ ಯೋಚಿಸದೆ ಹಳಿಯುವರೊ
ಅವಿದ್ಧಮತಿಯವರು ಸರ್ವಜ್ಞಾನ ವಿಮೂಢರಾಗಿ ತಿಳಿ ನಷ್ಟರೆಂದು

ಕೋವಿದರದಾದರೂ ನಡೆಯುವರು ತಮ್ಮ ಸಹ
ಜಾವಸ್ಥೆಗನುಸರಿಸಿ ಸಕಲ ಪ್ರಾಣಿಗಳೂ ಸ್ವ
ಭಾವವನುಕರಿಸುವವು ಹೀಗಿರಲು ನಿಗ್ರಹವದೇಗೆಯ್ಯೆ ಶಕ್ತವಿಹುದು ೧೭

ತಮ್ಮ ತಮ್ಮಯ ವಿಷಯಗಳೊಳಿಂದ್ರಿಯವ್ರಜವು
ಹೊಮ್ಮುವುದು ರಾಗದ್ವೇಷವನದರ ವಶವಾಗು
ತುಮ್ಮಳಿಸಬಾರದವುಗಳೆ ನಮ್ಮ ಶುಭಪಥದೊಳೆಡರಾದ ಕಂಟಕಗಳು
ಬಿಮ್ಮಿಡಿದ ಪರರ ಧರ್ಮಗಳಿಂದ ತಾವೆಳಸು
ವೆಮ್ಮ ಧರ್ಮವೆ ಲೇಸು ನ್ಯೂನತರವಾದರೂ
ದಮ್ಮುಗಿದು ಸಾಯ್ವುದಾದರು ಸ್ವಧರ್ಮವೆ ಲೇಸು ಭಯಕಾರಿ ಪರಧರ್ಮದಿಂ

ಎನಲರ್ಜುನಂ ಕೇಳ್ದ ವೃಷ್ಣಿವಂಶಲಲಾಮ!
ತನಗೆ ಬೇಡಾದರಾರಿಂದ ಪ್ರೇರಿತನಾಗು
ತನಿಶ ಪಾಪಗಳೆಸಗುತಿಹ ಪುರುಷನನ್ಯರಿಂ ಬಲದೊಳಾಸಕ್ತನಂತೆ
ಸನಕಾದಿವಂದ್ಯನೆಂದಂ ರಜೋಗುಣದಿಂದ
ಜನುಗುತಿಹ ಕಾಮಕ್ರೋಧಗಳೆ ಪ್ರೇರಕಗಳಿಹ
ವನವರತವೂಡಿದರು ತಣಿಯದತಿ ಪಾಪಿಗಳವರ ರಿಪುಗಳೆಂದು ತಿಳಿಯು ೧೮

ಜೆಂಕಿಯಂ ಪೊಗೆಯು ಕನ್ನಡಿಯ ಕೊಳೆ ಗರ್ಭವಂ
ಕೊಂಕಿದ ಜರಾಯುವಾವರಿಸಿ ಮುಚ್ಚಿರುವಂತೆ
ಬಿಂಕದಿಂ ಜೀವಕನನೀ ಕೊಲೆಗಳುರುಬಿ ಹತ್ತಿಕ್ಕುತುರುವಣಿಸುತಿಹವು
ಅಂಕೆಯಿರದೊಡಲನಲ ಕಾಮರೂಪದ ಜ್ಞಾನಿ
ಯಂಕಿತದ ವೈರಿಯಿಂದೆಮ್ಮ ಜ್ಞಾನವು ಸತತ
ಕಿಂಕಿರಿದಡರ್ದು ಮುಚ್ಚಿಹುದು ತಿಳಿವಿಲ್ಲದಿರೆ ಸಾಮಾನ್ಯರರಿಯದಂತೆ ೧೯

ಆದಕೆ ನೆಲೆವೀಡೆಮ್ಮ ಮನಮತೀಂದ್ರಿಯಗಳಿಹ
ವದರ ಮೂಲಕ ಜೀವಕನ ಕವಿದು ತಿಳುವಳಿಕೆ
ಯುದುರುಡುಗಿ ಮಂಕುಬೂದಿಯನೆರಚುತಿಹವಿಲ್ಲಿ ದುರ್ಮಾರ್ಗಕೆಳೆಯುತವನ
ಆದರಿಂದ ನೀ ಮೊದಲು ತನ್ನಿಂದ್ರಿಯಾದಿಗಳ
ತಡೆದು ನಿಯಮಿಸಿ ಪಾಪಕೂಪವಾಗಿರುವ ಈ
ಅದುಭುತದ ಶತ್ರುವಂ ಜ್ಞಾನಾನುಭವನಾಶಕನನೊಡೆದು ಜಯಿಸುತಳಿಸು ೨೦

ಕರಣೆಗಳೆ ಹಿರಿಮೆಯುವು ಕರಣದಿಂದಲಿ ಮನವು
ಹಿರಿದಿಹುದು ಮನದಿಂದಲೂ ಬುದ್ಧಿ ಹೆಚ್ಚಿನದು
ಸರಳವಾಗಿಹ ಬುದ್ಧಿಯಿಂದಲೂ ಜೀವಾತ್ಮನತ್ಯಂತ ಪರನಿರುಪನು
ಅರಿದಿಂತು ಸುಮತಿಯಿಂ ಹಿರಿದಾದ ವಸ್ತುವಂ
ಪಿರಿದುಜ್ಜುಗದಿ ತನ್ನುವಂ ತಾನೆ ದೃಢವಾಗು-
ತಿರಿಸುತದರೊಳೆ ಕಷ್ಟಸಾಧ್ಯರಾದರು ಪೇಳ್ದ ಶತ್ರುಗಳ ಬಿಡದೆ ಮಡುಹು ೨೧

ನಾಲ್ಕನೆಯ ಅಧ್ಯಾಯ

ಸೂಚನೆ ॥ ಸಂದೇಹವಡಗದಲೆ ಕಳವಳಿಪ ಪಾರ್ಥಂಗೆ
ಕಂದೆರೆಯುಲೆಂದದನೆ ವಿವರಿಸಿದ ದೇವಕೀ
ನಂದನಂ ತನೆ ಜ್ಞಾನ ಕರ್ಮಸಂನ್ಯಾಸಯೋಗವನು ವಿಸ್ತಾರದಿಂದ

ಮುಂದೊರೆದ ಶ್ರೀಕೃಷ್ಣನೀ ಯೋಗವಿಸ್ತರವ
ನೆಂದಿಗೂ ಮುಸಕದುದ ನಾ ಪೂರ್ವದಲಿ ಸೂರ್ಯ
ಗೆಂದೆನವ ಮನುವಿಗರುಹಿದನಾತನಿಕ್ಷ್ವಾಕುಭೂಪರಗೆ ಬಿತ್ತರಿಸಿದ
ಇಂದನಕವಿಂತು ಪಾರಂಪರ್ಯದಿಂದುಗಿದು
ಬಂದುದಿದ ರಾಜರ್ಷಿವರ್ಯರರಿತಿಹರದುವೆ
ಕುಂದಿ ಕುಸಿಯಿತು ಬಹಳ ಕಾಲದಿಂ ಕೇಳ್ಪರೇ ಭೂತಳದೊಳಿಲ್ಲವಾಗಿ ೧

ಬಹು ಪುರಾತನದ ರಹಸ್ಯೋತ್ತಮದ ಯೋಗವಿದ
ವಹಿಲದಿಂದುಸಿರಿದೆನು ನೀನೆನಗೆ ಭಕ್ತಸುಹೃ
ದಿಹೆಯೆಂದು ಗಾಂಡೀವಿ ಕೇಳ್ದನಾಗಲೆ ದೇವ! ನಿನ್ನ ಜನ್ಮದ ಕಾಲವು
ಇಹದೊಳಪರವು ವಿವಸ್ವಂತ ಪುಟ್ಟಿದುದು ಪರ
ವಿಹುದೆನಲು ನೀನವಂಗೀ ಯೋಗವನ್ನೊರೆದ
ಮಹಿಮನೆಂದಾನೆಂತು ನಂಬಲಿದೆ ನರಹರಿಯು ನಗುತಾಗಲೆಂದ ನರಗೆ ೨

ನಿನಗೆನಗೆ ಹಲವಾರು ಜನ್ಮಗಳೆ ಕಳೆದಿರುವ
ವನಿತೆಲ್ಲವಾನರಿತಿರುವೆ ಪೂರ್ಣನಾಗಿಪ್ಪ
ವನು ನೀನು ತಿಳಿದಿಲ್ಲವಲ್ಪಜ್ಞನಿದ್ದು ನಾ ಹುಟ್ಟಿಲ್ಲದವನಾದರೂ

ವಿನುತ ಪರಮಾತ್ಮನಾದರುಃ ಸಕಲ ಪ್ರಾಣಿಗಳ-
ನನುಗೊಳಿಸುತಾಳ್ವನಾದರು ತನ್ನಯ ಪ್ರಕೃತಿ
ಯನೆ ಮಾಣದವಲಂಬಿಸುತೆ ತನ್ನ ಮಾಯೆಯಿಂದೀ ಭವದಿ ಸಂಭವಿಸುವೆ ೩

ಎಂದೆಂದು ಧರ್ಮಸಾರದ ಹೊನಲು ಬರಿದಾಗಿ
ಕುಂದುವುದಧರ್ಮ ಕೌರಿಡಿದು ರಿಂಗಣಗುಣಿವು
ದಂದು ನಾನೆನ್ನ ಸೃಜಿಸುತ್ತಿರುವೆನೀ ಜಗದಿ ಸಾಧುಗಳ ಕಾಪಾಡಲು
ದಂದುಗವನೊಡ್ಡುತಿಹ ದುಷ್ಟರಂ ಮಡುಹೆ ನಲ-
ವಿಂದ ಧರ್ಮವ ಮಗುಳಿ ನೆಲೆಗೊಳಿಸೆ ನಾನು ಮನ
ಬಂದ ತೆರ ಪ್ರತಿಯುಗದೊಳೂ ಪುಟ್ಟುವೆಂ ಪ್ರಕೃತಿಯಾಶ್ರಯಿಸಿ ವಿಧವಿಧದಲಿ

ದಿವ್ಯವಾಗಿರುವೆನ್ನ ಜನ್ಮಕರ್ಮಗಳ ನಾ-
ರವ್ಯಸನಭಾವದಿಂದರಿತು ಪಳಗಿಹರವರು
ಸುವ್ಯವಸ್ಥಿತರಾಗಿ ಜಡದೇಹಮಂ ತೊರೆಯೆ ಮರಳಿ ಜನ್ಮವ ಪೊಂದರು
ಅವ್ಯಯವನೈದುವರು ವಿಗತರಾಗದ್ವೇಷ
ರವ್ಯಗ್ರಮನದೊಳೆನ್ನಾಶ್ರಯಿಸಿ ಭಾವಿಸುವ
ರು ವ್ಯಥಿಸದೆಲೆ ಜ್ಞಾನವೆಂಬ ತಪದಿಂ ಶುದ್ಧರಾಗೆನ್ನ ಪೊದ್ದುತಿಹರು ೫

ಯಾರೆನ್ನನೆಂತು ಶರಣಾಗುತಿಹರವರಂತೆ
ನಾ ರಕ್ಷಿಸುವೆನೊಲಿದು ಸರ್ವರೂ ನಾ ಪಿಡಿದ
ದಾರಿಯನೆ ಹಿಂಬಾಲಿಸುವರು ವ್ಯವಹಾರದಲಿ ತಾವ್ ಗೈವ ಕರ್ಮಗಳಿಗೆ
ಪೂರಾಯ ಫಲವ ಬಯಸುವರು ವೃಂದಾರಕರ
ನಾರಾಧಿಸುವರು ಲೋಕದಲಿ ವರ್ಣಾಶ್ರಮಾ
ಚಾರಾದಿ ಕರ್ಮಗಳ ಫಲವು ತ್ವರಿತದಿ ಲಭಿಸುವುದು ಕಷ್ಟಕರವಲ್ಲವು ೬

ಚಾತುರ್ವರ್ಣ್ಯವ ನಾನು ಗುಣಕರ್ಮಗಳಿಗುಚಿತ
ರೀತಿಯಲಿ ಸೃಜಿಸಿದೆನು ನಾ ಮಾಡಿದವನಾದ
ರೂ ತಾನೆ ಕರ್ತೃವೆನ್ನುತೆ ತಿಳಿಯದಿರು ತನ್ನ ಮಾಯೆಯಿಂದಾದುದಿರಲು
ಆತತದ ಕರ್ಮಜಂಜಡವೆನ್ನ ಸೋಕದಿಹು
ದಾತೆರದ ಕರ್ಮಫಲದಾಸೆ ಸಲದೆನ್ನುತಾ
ವಾತ ತಿಳಿಯುವನವಂ ಕರ್ಮಗಳ ಬಂಧನಕ್ಕೊಳಗಾಗನೀ ವಿಶ್ವದಿ ೭

ಮುಕ್ತಿ ಬಯಸಿದ ಹಿಂದಣವರಿಂತು ಕರ್ಮಗಳ
ಯುಕ್ತಿಯಿಂ ಚರಿಸಿದ್ದರಂತೆ ನೀ ಕರ್ಮದಾ
ಸಕ್ತಿಯಿಲ್ಲದೆ ನಡೆಸು ಜೇಹರಪ ಹಿರಿಯರಾಚರಣೆಯನೆ ಹಿಂಬಾಲಿಸಿ
ಸೂಕ್ತವಾದೇನಮಾಡಲಿ ಮಾಡದಿರಲೆನ್ನು
ವುಕ್ತಿಯಲಿ ವಿದ್ವಾಂಸರೂ ಮೋಹಿತರೆನೆ ಪ್ರ
ಸಕ್ತಿಯಿಂದೊರೆವೆನದನೇತರರಿವಿಂ ಅಶುಭದಿಂದ ಬಿಡುಗಡೆಯಾಗುವೆ ೮

ಮಾಡಲಿಹ ಕರ್ಮಗಳು ತಿಳಿಯತಕ್ಕವು ಮುಂದೆ
ಮಾಡಬಾರದುದಂತೆ ತಿಳಿಯತಕ್ಕುದದೇನ
ಮಾಡದಿಹುದಾದರೂ ತಿಳಿಯತಕ್ಕುದೆ ಕರ್ಮಗಳ ಗತಿಯು ಗಹನವಿಹುದು
ಮಾಡದಿಹ ದೇಹಾದಿಗೈಯುವುದನಾರು ತಾ
ಮಾಡದಿಹೆನೆಂದವುಗಳೆಸಗದುದ ತಾನಾಡೆ
ಮಾಡುತಿಹೆನೆಂದರಿವನವ ಜಾಣ ಜೋಗಿಯಹನಖಿಳಕರ್ಮವ ಗೈದರು ೯

ಯಾರೆಲ್ಲ ಕೆಲಸಗಳನಿಲ್ಲಿ ಫಲದಾಸೆಯಹಂ
ಕಾರವಿರದಾಚರಿಪನವನ ಕರ್ಮವು ಜ್ಞಾನ
ಸಾರಾಗ್ನಿಯಿಂ ದಗ್ಧವಾಗಿ ಪರಿಶುದ್ಧವಹುದವನ ಪಂಡಿತನೆಂಬರು
ಈ ರೀತಿಯಿಂ ನಿತ್ಯ ತೃಪ್ತನಾಗುತೆ ನಿರಾ
ಧಾರನಾಗುತೆ ಸಂಗವಿಡದೆ ಸ್ವಕರ್ಮಗಳ
ನಾರಂಭಿಸುವ ಮನುಜನೇಗೈದರೂ ಗೈಯದಂತಿರುವ ವಿಮಲನಾಗಿ ೧೦

ಆಸೆಯಿಲ್ಲದೆ ಚಿತ್ತಕಾಯಗಳನೊತ್ತಿಡಿಯು
ತೋಸರಿಸುತಖಿಳ ವಿಷಯಪ್ರಜವ ತಾ ಭವದೊ
ಳೋಸರದೆ ಬಾಳುಳಿಯಲೆಂದು ಕರ್ಮವನೆಸಗುವಾತ ಪಾಪವ ಪೊದ್ದನು
ವಾಸಿ ಪುರುಡುಗಳಿರದೆ ಸುಖದುಃಖ ಮೊದಲಾದ
ಜೇಸಭಾವಗಳಿರದೆ ತಾನಾಗಿ ದೊರಕಿರುವು
ದೈಸೆ ಸಾಕೆಂದು ಸಮಸಂತುಷ್ಟನಿಹ ಕರ್ಮ ಗೈದರೂ ಬದ್ಧನಲ್ಲ ೧೧

ಹೊಮ್ಮಿ ಹಬ್ಬುವ ಸಂಗವಿಲ್ಲದಲೆ ಮಾಡುತಿಹ
ಕರ್ಮಗಳ ಕಟ್ಟ ಕಳಚುತೆ ಜ್ಞಾನದಲಿ ಮನವ
ನೊಮ್ಮೆ ನೆಲೆಗೊಳಿಸುತೀಶ್ವರಗರ್ಪಿಸುತೆ ಗೈವ ಕರ್ಮವೇ ತಾ ನಸಿವುದು

ಬೊಮ್ಮನರ್ಪಣವು ಬೊಮ್ಮನೆ ಹವಿಯು ಪಾವಕಂ
ಬೊಮ್ಮನೇ ಬೇಳುವಾತಂ ಬೊಮ್ಮನೆಂದರಿತು
ನೆಮ್ಮಿರಲಿಕವನ ಕರ್ಮಗಳೆಲ್ಲ ಬ್ರಹ್ಮವಿರುತವ ಬ್ರಹ್ಮನನೆ ಪಡೆಯುವ ೧೨

ಕೆಲರು ಕರ್ಮಠರಾಗಿ ದೇವತೆಗಳಂ ಪ್ರೀತಿ
ಸಲು ಯಾಗವೆಸಗುವರು ಕೆಲಬರು ಬ್ರಹ್ಮಾಗ್ನಿ [ತಿರುವರು
ಯಲಿ ಹೋಮಗೈವವೋಲ್ ನಿಜಕರ್ಮಗಳನೆಲ್ಲವರಿತು ಹೋಮಿಸು
ಕೆಲರು ಶ್ರೋತ್ರಾದೀಂದ್ರಿಯಗಳನವುಗಳ ಚಲನೆ
ವಲನೆಗಳ ಸಂಯಮಾನಲದಿ ಹೋಮಿಸುತಿಹರು
ನಿಲದನ್ಯರಿಲ್ಲಿ ಶಬ್ದಾದಿ ವಿಷಯಗಳಿಂದ್ರಿಯಾಗ್ನಿಯಲಿ ಹೋಮಿಸುವರು ೧೩

ಪಳಗಿರುವ ಕೆಲರಿಂದ್ರಿಯಗಳ ಕರ್ಮವ ಪ್ರಾಣ
ಗಳ ಕರ್ಮವಂ ಜ್ಞಾನದಿಂದಲುಜ್ಜ್ವಲಿಸುತಲಿ [ಸುವರು
ಸುಳಿದುರಿಯುವಾತ್ಮಸಂಯಮವೆಂಬ ಯೋಗಾಗ್ನಿಯೊಳಗೆರಚಿ ಹೋಮಿ
ಕಳುನೇಮಗಳ ಚರಿಸುತಿರುವ ಸಾಧಕರಿಹದೊ
ಳಳುಕದೆ ದ್ರವ್ಯವಂ ವ್ಯಯಿಸುವರು ಪಲವ್ರತಾ
ವಳಿಗಳಂ ನಡೆಸುವರು ಯೋಗ ವೇದಾಭ್ಯಾಸವಿಜ್ಞಾನರತರಪ್ಪರು ೧೪

ಹೊರಗುಗಿವ ವಾಯುವಿನೊಳೊಳಗೆಳೆವ ವಾಯುವ
ನ್ನಿರಿಸಿ ಹೋಮಿಪರಂತೆ ಪ್ರಾಣದೊಳಪಾನಮಂ
ಬರಿಗೈವರೀ ಶ್ವಾಸಗತಿಯ ನಿಗ್ರಹಿಸಿ ಪ್ರಾಣಾಯಾಮಪರರಾಗುತೆ
ಚರಿಸುತಾಹಾರಗಳ ಮಿತದಲ್ಲಿ ಪ್ರಾಣಗಳ
ನುರಿಸಿ ಪ್ರಾಣಗಳಲ್ಲಿ ಹೋಮಿಸುವರವರೆಲ್ಲ
ರರಿತಿಹರು ಯಜ್ಞಗಳ ತಿರುಳನಾ ಯಜ್ಞದಿಂ ನಿಜಪಾಪಗಳ ಕಳೆವರು ೧೫

ಯಾಗಶಿಷ್ಟಗಳೆಂಬ ಸುಧೆಯ ಭುಂಜಿಸುವವರು
ಬೇಗದಿಂದೈದುವರನಾದಿ ಬ್ರಹ್ಮವನಿಹದ
ಭೋಗವೇ ಸಲ್ಲದಿರೆ ಪರಲೋಕವೆಲ್ಲಿಯದು ಯಜ್ಞಾದಿಗೈಯದರ್ಗೆ
ಹೀಗೆ ಹಲಬಗೆಯ ಯಜ್ಞಗಳು ವೇದದ ಮೊದಲು
ಭಾಗದಲಿ ವಿವರವಾಗಿರುವವವು ಕರ್ಮದಿಂ
ದಾಗುತಿಹನೆಂದರಿಯು ತಿಳಿಯಲಿದ ಕರ್ಮಬಂಧನದಿಂದ ಮುಕ್ತಿಪಡೆವೆ ೧೬

ಶ್ರೀಯುತರವಿದೆ ದ್ರವ್ಯಮಯವಾದ ಯಾಗದಿಂ
ದಾಯತದ ಜ್ಞಾನಯಜ್ಞವು ತಾನದೇನನೂ
ಗೈಯುದಿಹೆನೆಂಬ ಭಾವನೆಯು ಕರ್ಮಗಳೆಲ್ಲ ಜ್ಞಾನದೊಳೆ ಲಯಿಸುತಿಹವು
ಮಾಯೆಯೊಗರೊಡೆದ ನಿರ್ಮಲ ತತ್ತ್ವದರ್ಶಿಗಳ
ನಾಯಾಸದಿಂದರಸಿ ವಂದಿಸುತೆ ಪ್ರಶ್ನಿಸಲು
ಕಾಯುವಂ ಸೇವೆಯೊಳಗೀಡಾಡಲವರೊಲಿದು ಜ್ಞಾನವಿದ ನೀಡುತಿಹರು ೧೭

ಅದನೊಮ್ಮೆ ತಿಳಿದೆಯೆಂದರೆ ಮತ್ತೆ ನಿನಗಿಂಥ
ಪುದುಕುಳಿಗಳೇಳಲಾರವು ಮುಂದೆ ನೀನದ್ಭು
ತದ ಭೂತಸಂಘವೆಲ್ಲಿನ್ನೊಳೇ ನಿನ್ನ ಯ್ಯಂತರದೊಳೇ ಕಾಣುತಿರುವೆ
ಬದಗ ಪಾಪಿಗಳೊಳಗ್ಗಳಿಯು ನೀನಾದರನಿ
ತೊದವಿದೇನಪರಧಿಯನ್ನಾತ್ಮನೇಗೈಯು
ದಮರದಿಹನೆಂಬರಿವ ಹಡಗಿನಿಂದುರವಣಿಸಿ ದಾಟಿ ದಡವಂ ಸೇರುವೆ ೧೮

ಒಟ್ಟಿರುವ ಕಟ್ಟಿಗೆಯ ರಾಸಿಯನ್ನುರಿಗೊಳಿಸೆ
ದಟ್ಟುರಿಯು ಕ್ಷಣದಿ ಸ್ವೀಕರಿಪಂತೆ ಜ್ಞಾನಾಗ್ನಿ
ಯಿಟ್ಟಣಿಸಿ ತಿಗುರಿರುವ ಕರ್ಮಗಳ ಲೇಪವನೆ ಸುಟ್ಟು ಬಯಲಾಗಿಸುವುದು
ದಿಟ್ಟತನದಿಂ ಯೋಗದಲಿ ಮನವ ನೆಲೆಗೊಳಿಸು
ತಟ್ಟುಳಿಯಸೀಗಲೀ ಜ್ಞಾನದರಿವಾಗುವುದು
ಪುಟ್ಟಿರುವಿನೊಳಗಿದಕೆ ಸರಿಯಾದ ತತ್ತ್ವಾಂತರಗಳಿಲ್ಲ ಯೋಚಿಸಲ್ಕೆ ೧೯

ಗುರುಶಾಸ್ತ್ರಗಳಲಿ ವಿಶ್ವಾಸವಿರಿಸುತೆ ದೈವ
ಪರನಾಗಿ ಸಂಯತೇಂದ್ರಿಯನಾಗಿರಲು ಜ್ಞಾನ
ಝರಿಯನೀಂಟುವ ಜ್ಞಾನಿಯಾಗೆ ಚಿರಶಾಂತಿಯಂ ಬಿಡದೈದುವಂ ಸುಲಭದಿ
ಪರಮಾತ್ಮರೂಪವರಿಯದವಾರೊಳು ಶ್ರದ್ಧೆ
ಯಿರದವತಿ ಸಂಶಯಾತ್ಮಕನಿಹದಿ ನಶಿಸುವಂ
ಪರೆಯುದಿಹ ಸಂಶಯಗಳಿಂದಾವಿಲಂಗಿಹವ ಸುಖವಿಲ್ಲ ಪರವಿಲ್ಲವು ೨೦

ತನ್ನಾತ್ಮನೇಗೈವುದಿಲ್ಲವೆಂದರಿತವನ
ಛಿನ್ನ ಸಂದೇಹವ್ರಾತಕನ ಸುಜ್ಞಾನದಿಂ
ಸನ್ನುತಾತ್ಮನೊಳೆ ರವಿಘನ ಜಗದಿ ಕರ್ಮಗಳು ಬಂಧಿಸವು ತಾ ಗೈದರೂ

ಎನ್ನಲವಿವೇಕದಿಂ ಬುದ್ಧಿಯಲಿ ಮೊಳೆಯುತಾ
ಸನ್ನಸಂಶಯವಲ್ಲಿಯಿದ ಜ್ಞಾನದಸಿಯಿಂದ
ಪನ್ನದಿಂ ಕುಸುರಿದರಿ ಕರ್ಮಯೋಗವನೆಳಸಿ ಘುರಕೆ ಸನ್ನದ್ಧನಾಗು ೨೧

ಐದನೆಯ ಅಧ್ಯಾಯ

ಸೂಚನೆ ॥ ಮುಂಬರಿದನುಪದೇಶಸಾರವರ್ಜುನಗೆ ಕನ
ಕಾಂಬರಂ ಸಹಜ ಕರ್ಮಾವಳಿಗೆ ಜೀವ ತಾ
ನಿಂಬುಗೊಟ್ಟರು ಬಂಧನವಲೇಪಕೊಳ್ಳದೋಲ್ ಜ್ಞಾನಯೋಗದ ವಿವರವ

ಪಾರ್ಥನೆನೆ ಶಂಕಿಸಿದ ಕರ್ಮಗಳ ತ್ಯಜಿಸೆಂದು
ಅರ್ಥಿಸದೆ ಫಲಗಳಂ ಗೈಯೆಂದು ನೀನೆಂಬೆ
ಸಾರ್ಥಕವದಾವುದಿದರೊಳು ಪೇಳು ನಿಶ್ಚಯಿಸುತೆನಲು ಮುರಮಥನನೆಂದ
ವ್ಯರ್ಥವಲ್ಲವು ಕರ್ಮ ತ್ಯಾಗ ಯೋಗಗಳೆರಡ-
ಪಾರ್ಥ ಕಲ್ಪಿಸಬಾರದುಭಯವೂ ಮೋಕ್ಷಕೆ ಸ
ಮರ್ಥವಿಹವವುಗಳಲಿ ನಿಷ್ಕಾಮಕರ್ಮವೇ ಶ್ರೇಷ್ಠತರವಿದೆ ನೋಡಲು ೧

ವೈಷಯಿಕ ಚರಣೆಯೊಳಗಾರಾಸೆಬಡುತಿಲ್ಲ
ತ್ವೇಷಗೊಳ್ಳುವುದಿಲ್ಲವವ ಕರ್ಮಸಂನ್ಯಾಸಿ
ದ್ವೇಷರಾಗಾದಿ ದ್ವಂದ್ವಗಳಿಲ್ಲದವ ಸುಖದಿ ಬಂಧದಿಂ ಪಾರಾಗುವ
ಆಷಾಢಭೂತಿಗಳೆ ಸಾಂಖ್ಯಯೋಗಗಳೆರಡು
ದೂಷಿಸುವರಲ್ಲದೇ ಬೇರೆಂದು ಪಂಡಿತರು
ಪೋಷಿಸರದಂ ಚರಿಸುತಿರಲು ಚೆನ್ನಾಗೊಂದನುಭಯ ಫಲವಂ ಪಡೆವರು ೨

ನಿಜಕರ್ಮಗಳ ತೊರೆಯಲಾವ ಫಲವೊಂದುವರೊ
ಭುಜಿಪರದನೇ ಫಲವನಾಶಿಸದೆ ಕರ್ಮಗಳ
ಗುಜರಿಸಲು ಸಾಂಖ್ಯಯೋಗಗಳೆರಡನೊಂದೆಂದು ಕಾಂಬನೇ ಸುಜ್ಞಾನಿಯು
ಅಜನ ಸೇರಲಿಕಾಳ್ವ ಕರ್ಮಸಂನ್ಯಾಸವೂ
ಋಜುವಾಗದಿಲ್ಲಿ ಯೋಗವನುಳಿಯೆ ದುಃಖವೇ
ಗಜಮುಪ್ರದು ಕರ್ಮಯೋಗವ ಕೊಂಡ ಮುನಿಯುಚಿರದಿಂದಾತ್ಮಜ್ಞಾನವಡೆವ

ಯೋಗದಿಂ ಪರಿಶುದ್ಧನಾಗಿ ಮಾರ್ಜಿತಚಿತ್ತ
ನಾಗಿ ಜಿತದೇಹೇಂದ್ರಿಯಕನಾಗಿ ಸಕಲಭೂ
ತಾಗಾರದೊಳಗೆ ತನ್ನಾತ್ಮನಿಹನೆಂದರಿವವಂ ಗೈಯೆ ಲಿಪ್ತನಲ್ಲ
ಆಗಮಜ್ಞನ ರೂಪವಂ ತಿಳಿದು ಮನವ ಬಿಗಿ
ಯಾಗಿ ಹಿಡಿಯುತೆ ಕಂಡು ಕೇಳಿ ಸ್ಪರ್ಶಿಸಿ ಮೂಸಿ
ಹೋಗುಂಡು ನಿದ್ದೆಗೈದುಸಿರು ಬಿಡುತಿರಲವಂ ಜಡನಂದದೊಳಗಿರುವನು ೪

ಮಾತನಾಡುತೆ ಮೂತ್ರಮಲ ಬಿಡುತೆ ಕಣ್ಣೆವೆಯ
ತಾ ತೆರೆದು ಮುಚ್ಚುತ್ತೆ ನಿಖಿಲವ್ಯವಹಾರಗಳ
ನಾತಂಕವಿರದಿಂದ್ರಿಯವ್ರಜವು ವಿಷಯದೊಳು ತನ್ನಂತೆ ನಡೆವವೆಂದು
ತಾತಗುಳ್ಳ ಕ್ರಿಯೆಗಳೆಲ್ಲ ಬೊಮ್ಮನೊಳಿರಿಸು-
ತಾತಿವಾಹಿಕ ಸಂಗವಿಡದೆ ಕರ್ಮಗಳೆಸಗ
ಲಾತ ಪಾಪವ ಪೊದ್ದಲಾರ ಜಲದೊಳಗದ್ದಿರುವ ಜಲಜಪತ್ರದಂತೆ ೫

ಕಾಯದಿಂ ಬುದ್ಧಿಯಿಂ ಚಿತ್ತೇಂದ್ರಿಯಂಗಳಿಂ
ಮಾ ಯತಿಗಳಿಹದೊಳಗೆ ನೈಜ ಕರ್ಮಗಳೆಲ್ಲ
ಗೈಯುತಿಹರದರೊಳಗೆ ಸಂಗವಿನಿತಿರಿಸದಲೆ ತಮ್ಮ ನೈರ್ಮಲ್ಯಕಾಗಿ
ಈ ಯುಕ್ತಿಯಿಂ ಫಲವನಿಚ್ಛಿಸದೆ ನಿಜಕರ್ಮ
ವಾಯತಿಕೆಯಿಂ ಮಾಡೆ ಚಿರಶಾಂತಿ ಪೊಂದುವರು
ಜೇಯುತ್ತೆ ಬಯಕೆಗಳ ಶತದೊಳೆಸಗಲು ಕರ್ಮ ಬಂಧನಕ್ಕೀಡಪ್ಪರು ೬

ಸರ್ವಕರ್ಮಾವಳಿಯ ಮನದಿಂ ಪರಿತ್ಯಜಿಸಿ
ಚರ್ವಿಸದೆ ವಿಷಯಗಳ ವಶಿಯು ಸುಖದಿಂದಿರುವ
ನುರ್ವ ನವದ್ವಾರಗಳ ದೇಹಪುರದೊಳಗೇನನಂ ಗೈಯದೇ ಗೈಸದೆ
ಉರ್ವರೆಯೊಳಾರಿಗೂ ಕರ್ಮಕರ್ತೃತ್ವಗಳ
ಸರ್ವಸಾಕ್ಷಿಯು ಸೃಜಿಸುತಿಲ್ಲವಂತೆಯೆ ಫಲದ
ಸೇರ್ವೆಯಿಹುದಿವುಗಳೆಲ್ಲವು ಸ್ವಭಾವದಿ ತನ್ನತಾನಾಗಿ ವರ್ತಿಸುತಿವೆ ೭

ಎಲ್ಲೆಡೆಲಿ ತುಳುಕಿರುವ ಪರಮಾತ್ಮ ಕೊಳ್ಳುತಿಹು
ದಿಲ್ಲವುಂಕಿಸಲಾರ ಪಾಪಪುಣ್ಯದ ಹೊರೆಯ
ನುಲ್ಲಸಿತ ಜ್ಞಾನವಜ್ಞಾನದಿಂದಾವೃತವದಾಗಿ ಮೋಹಿಸುತಿರುವುದು

ಮಲ್ಲರಾರರಿಯಮಿಕೆಯೊಡೆದು ತಿಳುವಳಿಕೆಯು
ತ್ಫುಲ್ಲವಾಗಿಹುದು ಹೃದಯಾಂಬರದೊಳಾದಿತ್ಯ
ಭುಲ್ಲವಿಸುವಂತದುವೆ ಪರತತ್ತ್ವವಂ ಬಿಡದೆ ಬೆಳಗಿ ವ್ಯೆದೋರಿಸುವುದು ೮

ಪರಮದೊಳು ಚಿತ್ತವಂ ನಿಲಿಸುತವ ತಾನೆನ್ನು
ತರಿಯುತಾತನ ಭಾವಿಸುವರು ಪಾಪಾದಿಗಳ
ನೊರಸುತಲಿ ಜ್ಞಾನದಿಂ ಮಗುಳಿ ಜನಿಸದ ಸ್ಥಿತಿಯನಡರುವರು ಸುಲಭದಿಂದ
ಉರುವ ವಿದ್ಯಾವಿನಯವುಳ್ಳ ಪಂಡಿತ ಬ್ರಾಹ್ಮ
ಣರಲಿ ಪೊಲೆಯರಲಿ ನಾಯಾನೆಯಾಕಳುಗಳಲಿ
ಸರಿಯುತಿರುವಾತ್ಮನೊಂದೆಂದು ತಿಳಿಯುತ್ತಿಹರು ಭೇದವಿನಿತೆಣ್ಣದಿರುತೆ ೯

ಯಾರ ಮನವೆಲ್ಲೆಡೆಗಳಲ್ಲೇಕರೀತಿಯಿಂ
ದೂರಿ ಬೊಮ್ಮನೊಳಿರುವುದವರು ಭವ ಜಯಿಸಿಹರು
ಸಾರತರ ಪರತತ್ತ್ವ ದೋಷವಿಲ್ಲದ ವಸ್ತುವಿನೊಳವರು ನೆಲೆಗೊಂಬರು
ಪೂರಬ್ರಹ್ಮವನರಿತ ಸ್ಥಿರಮತಿಯು ಭ್ರಾಂತಿಯನು
ವಾರೈಸದಿಹ ಪ್ರಿಯವ ಪೊಂದೆ ಹರುಷವಗೊಳ್ಳ
ಲಾರನೆಂದಪ್ರಿಯವು ಲಭಿಸಲುದ್ವೇಗಗೊಳಲಾರ ಬೇಹರದ ಪಥದಿ ೧೦

ತನ್ನ ಮನ ಬಾಹ್ಯವಿಷಯದೊಳನಾಸಕ್ತವಿರ
ಲುನ್ನತಿಕೆಯಾತ್ಮಸುಖವಡೆವನಾಂತರದೊಳೀ
ಚೆನ್ನಾದ ಬ್ರಹ್ಮಯೋಗದಿ ಯುಕ್ತನಾದಾತನಕ್ಷಯದ ಸೊಗವೊಂದುವ
ಮುನ್ನ ವಿಷಯಗಳ ಸಂಬಂಧದಿಂ ಬಹ ಸುಖಗ
ಳುನ್ನಿಸಲಿಕಾದ್ಯಂತವಿದ್ದು ಬಹು ದುಃಖಗಳಿ
ಗಿನ್ನು ಕಾರಣವಹವು ಸುವಿವೇಕಿಯವುಗಳಲಿ ಬಿನದಿಸುವುದಿಲ್ಲೆಂದಿಗು ೧೧

ಆವಾತ ಹೃದಯದಲಿ ಕಾಮಕ್ರೋಧಾದಿ ಭಾ
ವಾವೇಶಗಳ ಸಹಿಸೆ ಶಕ್ತನೋ ಬಳುಕದಲೆ
ಸಾವನುಂಚಿತವಾತ ಯೋಗಯುಕ್ತಂ ಸುಖವ ತನ್ನಂತೆ ಪೊದ್ದುತಿಹನು
ಯಾವನೊಳಗೇ ತೋಷಗೊಳುತೆ ವಿಹರಿಸುತೆ ಮನ
ನೇವರಿಸುತೊಳಗಣ ಜ್ಯೋತಿಯಾಗಿಹನವನೆ
ಕೋವಿದಂ ತಾನು ಬ್ರಹ್ಮಸ್ವರೂಪಕನಾಗಿ ಬ್ರಹ್ಮನಿರ್ವಾಣವಡೆವ ೧೨

ಪಾತಕಂಗಳ ತೊಡೆದು ಭೇದಭಾವನೆಯೊಡೆದು
ಪೂತಾತ್ಮವೃತ್ತಿಯುಂ ನಿಗ್ರಹಿಸಿ ಸರ್ವದಾ
ಭೂತಹಿತತತ್ಪರರು ಬ್ರಹ್ಮಕೈವಲ್ಯವಂ ಸುಲಭದಿಂ ಪೊಂದುತಿಹರು
ವೀತಕಾಮಕ್ರೋಧರಾಗಿ ನಿಯಮಿತವಾದ
ಚೇತಸದ ಯತಿಗಳಿಂಗಿಹಪರದೊಳೆಲ್ಲಿಯೂ
ಸಾತಿಶಯ ಪರಪದವೆ ಮಿನುಗುತಿದೆ ಬಾಹ್ಯವಿಷಯಗಳ ಹೊರಗೊಗೆದು ತನ್ನ

ತರಲ ತಾರಕವ ಭ್ರೂಮಧ್ಯದಲಿ ನೆಲೆಗೊಳಿಸಿ
ಹರಿವ ಪ್ರಾಣಾಪಾನಗಳ ಗತಿಯ ಬಿಗಿದೊತ್ತಿ
ಕರಣಮತಿ ಮನಗಳಂ ನಿಗ್ರಹಿಸಿ ಕ್ರೋಧಾದಿಯಳಿಸಿ ಮೋಕ್ಷಾಪೇಕ್ಷೆಯ
ವಿರತಮುನಿ ಸತತ ಮುಕ್ತನು ಯಜ್ಞತಪಫಲಗ
ಳಿರದುಣ್ಣುವವನೆಂದು ಸರ್ವಪ್ರಾಣಿಗಳಿಂಗೆ
ನೆರೆಯೆಂದು ಸಕಲಲೋಕೇಶ್ವರನದೆಂದೆನ್ನ ತಿಳಿಯಲವ ಶಾಂತಿವಡೆವ ೧೪

ಆರನೆಯ ಅಧ್ಯಾಯ

ಸೂಚನೆ ॥ ಕುಂತೀಕುಮಾರಕಗೆ ನಗಧರಂ ಮುಂದೊರೆದ
ಶಾಂತಮನದಿಂ ಧರ್ಮಬೋಧೆಯುಂ ಸತ್ಪಥದೊ
ಳಂತರಿಸದಾಚರಿಸಲಿಹ ಧ್ಯಾನಯೋಗವಂ ಬಗಿದು ಮುಂದಟ್ಟುಗೊಳಿಸಿ

ಭಗವಂತನೆಂದ ಕರ್ಮದ ಫಲದೊಳಾಸಕ್ತಿ
ಯೊಗದೆ ಕರ್ತವ್ಯಗಳನೆಸಗುವನೆ ಸಂನ್ಯಾಸಿ
ಮಿಗೆ ಯೋಗಿಯಿಹ ಮುನ್ನ ಹವನಾದಿ ಸತ್ಕರ್ಮಗಳನೆ ತೊರೆದವನಲ್ಲವು
ಒಗುಮಿಗೆಯ ಸಂನ್ಯಾಸವನೆ ಯೋಗವೆಂದು ತಿಳಿ
ಯೊಗೆಯದಿರೆ ಸ್ವೀಯಸಂಕಲ್ಪಗಳ ವ್ಯೂಹವ
ನ್ನಗವಡದು ಯೋಗವಾರಿಗು ಭವದಿ ಮೋಕ್ಷಪಥವೇರುತಿಹ ಮುನಿವರ್ಯಗೆ

ವಿಹಿತ ಕರ್ಮಾಚರಣೆಯೇ ಸಾಧನವು ಮುಂದೆ
ಮಹಿತಪದವಾರೋಹಿಸಿರಲು ಕರ್ಮತ್ಯಾಗ
ವಹುದು ಸಾಧಕವಾತನಿಂಗೆ ಯಾವಾತ ನಿಜಕರ್ಮದಲಿ ವಿಷಯಚಯದಿ

ವಹಿಸದನುಷಂಗವಂ ಸಂಕಲ್ಪವೆಲ್ಲ ಪರೆ
ಯಹಿಯುಂದದೊಳಗುಚ್ಚುವಾತ ಯೋಗಾರೂಢ
ನಿಹನು ತನ್ನಾತ್ಮವನ್ನಾತ್ಮನಿಂದುದ್ಧರಿಸಬೇಕು ನಾಶಿಸಬಾರದು ೨

ತನಗೆ ತಾನೇ ಬಂಧು ತಾನೆ ಶತ್ರುವು ಯಾರು
ಕನವನಿಪ ದೇಹೇಂದ್ರಿಯಾದಿಗಳ ಜಯಿಸಿಹನ-
ವನು ತನಗೆ ತಾ ನಂಟನವುಗಳಿಂ ವಿಕಲಿತಂ ತನಗೆ ತಾ ಹಗೆಯಾಗಿಹ
ಜುನುಗಿ ಬಹ ಶೀತೋಷ್ಣ ಸುಖದುಃಖಗಳಲಿ ಮೇಣ್
ತೊನೆಯುತಿಹ ಮಾನಾಪಮಾನಾದಿಯಲಿ ಶಮಿತ
ಮನಗೆ ವಿಜಿತೇಂದ್ರಿಯಗೆ ಪರಮಾತ್ಮನೆಂದುಂ ಪ್ರಸನ್ನನಾಗಿರುತಿರುವನು ೩

ಅನುಭವದಿ ಶಾಸ್ತ್ರಾದಿಯರಿವಿನಲಿ ತೃಪ್ತಾತ್ಮ-
ಕನು ಸರ್ವದೇಕಸಮನಾಗಿಹಂ ವಿಜಿತೇಂದ್ರಿ- [ಯೋಗಿಯು
ಯನು ಲೋಷ್ಟಕಾಂಚನವನೊಂದಾಗಿ ಕಾಣುವಂ ಯುಕ್ತನಾಗಿಹ
ದನಿಗೊಡುವ ಸುಹೃದ ಬಾಂಧವರಲ್ಲಿ ಮಿತ್ರರಲಿ
ಬಿನುಗು ಶತ್ರುಗಳಲ್ಲಿ ಮಧ್ಯಸ್ಥರಲಿ ಶುಭವ
ನನುಚರಿಪರಲಿ ಪಾಪಿಗಳಲಿ ಸಮಬುದ್ಧಿಯಿಂದೀಕ್ಷಿಪನೆ ಸುವಿಶಿಷ್ಟನು ೪

ಏಕಾಂತವಾಶ್ರಯಿಸಿ ಯೋಗಮಾರ್ಗವನೆಳಸ
ಬೇಕು ಚಿತ್ತೇಂದ್ರಿಯಾದಿಗಳ ನಿಗ್ರಹಿಸುತ್ತ
ಲೇಕಾಕಿಯಾಗುತುಪಕರಣದಾಸೆಗಳಿಲ್ಲದಿರುತಾತ್ಮ ಪರನಾಗುತೆ
ತೂಕದೇ ಶುಚಿಯಾದ ಸ್ಥಳದಿ ತನ್ನಾಸನವ
ನಾಕರಿಸಬೇಕು ಬಹಳೇರುತಗ್ಗಿಲ್ಲದೆಲೆ
ವ್ಯಾಕೀರ್ಣದರ್ಭೆಗಳ ಮೇಲಜಿನವಸನಗಳ ಕ್ರಮದಿಂದ ಹರಹಿ ಹಾಸಿ ೫

ಅಲ್ಲಾಸನದಿ ಕುಳಿತು ಮನವನೇಕಾಗ್ರದೊಳ-
ಗುಲ್ಲಾಸದಿಂದಿರಿಸಿ ಕರಣಾದಿಗಳ ವೃತ್ತಿ
ಯೆಲ್ಲವಡಗಿಸುತಾತ್ಮ ಶುದ್ಧಿಗಾಗುತೆ ಮನೋನಿಗ್ರಹವನೆಳಿಸಬೇಕು
ಅಲ್ಲಾಡದಂತೆ ಮೈತಲೆಕೊರಳುಗಳ ಸಮತೆ
ಯಲ್ಲಿರಿಸಿ ನೆಲೆನಿಂತು ತನ್ನ ನಾಸಾಗ್ರವಂ
ನಿಲ್ಲದೀಕ್ಷಿಸಿ ಬದಿಯ ದಿಕ್ಕುಗಳನೆತ್ತಲೂ ನಿಟ್ಟಿಸದೆ ವಿಚಲನಾಗಿ ೬

ಶಾಂತಾಶಯನದಾಗಿ ಬ್ರಹ್ಮಚಾರಿವ್ರತವ
ನೋಂತು ಭಯವಿಡದೆ ಚಿತ್ತವನೊತ್ತಿ ಸಂಯಮಿಸು
ತಾಂತರದೊಳೆನ್ನ ಪರನಾಗೆನ್ನನೇಕಶರಣೆಂದು ಧ್ಯಾನಿಸಬೇಹುದು
ಇಂತು ತನ್ನಯ ಮನವ ಬಿಗಿಹಿಡಿದು ಧ್ಯಾನಮಂ
ಸಂತತಾಚರಿಪ ಯೋಗಿಯು ಮೋಕ್ಷರೂಪಕದ
ಶಾಂತಿವೊಂದುವ ನನ್ನೊಳೇ ನೆಲೆಯನೂರಿರುವ ಕಂದುಕುಂದುಗಳಿಲ್ಲದೆ ೭

ಅಳತೆಗೆಟ್ಟು ಪೊತ್ತು ತಿಂಬುವಂಗೇನನೂ
ಮುಳಿದು ತಿನದಗೆ ಬಹಳ ನಿದ್ದೆಯಿಂ ವಿಕಲಿತಂ-
ಗಳಿ ನಿದ್ದೆಯಿಂ ಜಾಗರಿಪಗೆ ಯೋಗವು ಸಲ್ಲದೆಂದಿಗೂ ಭವದೊಡಲಲಿ
ಪಳಿತಯೋಗವು ದುಃಖಕರವಲ್ಲ ಮಾನಿಸನಿ
ಗಿಳೆಯೊಳಗೆ ಮಿತವಾದ ಕರ್ಮ ಜಾಗೃತಿ ನಿದ್ರೆ
ಗಳಲಿ ಯುಕ್ತಾಹಾರ ವಿಹಾರಗಳಲಿ ವೃತ್ತಿಗಳಲ್ಲಿ ನಿರತನಿರಲು ೮

ಎಂದೊಮ್ಮುಖದ ಚೇತ ತನ್ನಾತ್ಮನಲಿ ನೆಲಸಿ
ನಿಂದಿಹುದೊ ಸರುವ ಬಯಕೆಗಳೊತ್ತಡವ ನೀಗು
ತಂದಂಥ ಕೆಚ್ಚೆದೆಯ ಸಾಧಕಂ ಸುಜ್ಞಾನನಿಷ್ಠನೆನಿಸುವ ಲೋಕದಿ
ಮುಂದೆಲರ ಸುಳಿವಿಲ್ಲದಿಹ ಕಡೆಲಿ ದೀಪಶಿಖೆ
ಯಂದಗೆಡದಲೆಯದಿಹ ತೆರದಿ ಯೋಗಾಭ್ಯಾಸ
ವಂದಮಿತ ಚಿತ್ತದಲಿ ಗೆಯ್ಯುತಿಹ ಯತಿಯಿರುವನೆಂದು ಬಲ್ಲರು ಪೇಳ್ವರು ೯

ಎಲ್ಲಿ ಧ್ಯಾನದ ಬಲದೊಳೊತ್ತಿಡಿದ ನಿಜಮನವು
ನಿಲ್ಲುವುದೊ ಶಮವೈದಿ ಯಾವ ಸ್ಥಿತಿಯೊಳಗಾತ್ಮ
ನಲ್ಲಿ ಸ್ವಾತ್ಮಸ್ವರೂಪವ ಕಂಡು ಮಿರುಗುತಲಿ ಸಂತೋಷಬಡುತಿರುವನೋ
ಸೊಲ್ಲಿಗೆಟಕದ ಕರಣಚಯಕೆ ನಿಲುಕದ ಬುದ್ಧಿ
ಯಲ್ಲಿ ಗೋಚರಿಪ ಪರಸುಖವನೀಂಟುತ್ತಿರುವ
ನೆಲ್ಲಿ ತಾನಾ ತತ್ತ್ವದೊಳಗೆ ರಮಿಸುತಲಿದ್ದು ಕದಲದಲೆ ಚಿರನಿರುವನೋ ೧೦

ಆವ ಗತಿಯಂ ಪಡೆದ ಮೇಲನ್ಯಲಾಭವ
ನ್ನಾವುದಕ್ಕಿಂತ ಹೆಚ್ಚಿನದೆಂದು ತಿಳಿಯನೋ
ಯಾವ ಸ್ಥಿತಿಯಲ್ಲಿರಲು ಬಲುದೊಡ್ಡ ಸಂಕಟಗಳಾದರೂ ಕದಡದಿಹವೊ

ಆ ವಿಮಲಪದವಿಯನೆ ಯೋಗವೆನ್ನುತೆ ತಿಳಿಯು
ಕೋವಿರುವ ದುಃಖಗಳ ದೂರವಮಾಡುವುದದನೆ
ಕೋವಿದರ ಮುಖದಿಂದಲರಿತು ನಿಶ್ಚಯಮತಿಯೊಳಾಚರಿಸಬೇಕು ಭುವಿಲಿ

ಸಂಕಲ್ಪದಿಂದೊಡರ್ಚುವ ಕಾಮಗಳನೆಲ್ಲ
ವಂಕುರಿಸದಂತೆ ತಡೆಗಡಿಯುತಲಿ ಚಿತ್ತದಿಂ
ದಂಕೆಯೊಳಗಿರಿಸುತ್ತಲಿಂದ್ರಿಯಗಳಂ ಕಮಠನಂಗವೊಳಗೆಳೆಯುವಂತೆ
ಬಿಂಕದಿಂದಿಹ ಮತಿಯೊಳೊಯ್ಯನೆ ವಿರಾಮವ
ನ್ನಂಕಿಸಲುಬೇಕು ಚಿತ್ತವನೊತ್ತುತಾತ್ಮನೊಳು
ಶಂಕೆಯಿಲ್ಲದೆ ನೆಲಸಬೇಕು ಬೇರೇನನೂ ಚಿಂತಿಸದೆ ತೂಷ್ಣಿಯಾಗಿ ೧೨

ಚಂಚಲದ ಮನವೆಂತು ವಿಷಯಗಳ ಬೆಂಬತ್ತಿ
ಸಂಚರಿಸುತಿರುವುದಸ್ಥಿರವಾಗುತದ ಬಿಡದೆ
ಹೊಂಚಿ ಹಿಂದೆಳೆಯುತಾತ್ಮಸ್ವರೂಪದೊಳಮುಕಿ ನಿಯಮಿಸುತೆ ತಿದ್ದಬೇಕು
ಸಂಚಿತದ ಪಾಪಗಳ ತೊಳೆಯುತೆ ರಜೋಗುಣದ
ಸಂಚಯವನಳಿಸಿ ಬ್ರಹ್ಮಸ್ವರೂಪಕನಾಗಿ
ಸಂಚುವ ಮುನೀಶ್ವರಂ ಪರಮಸುಖವಂ ಪಡೆವ ಭವದಿ ಬಿನದಿಸುತಿದ್ದರೂ ೧೩

ಯಾವಾಗಲೂ ತನ್ನ ಯೋಗದಭ್ಯಾಸದೊಳ
ಗಾವೇಶದಿಂ ಹಚ್ಚಿ ನಡೆಸುತಿಹ ಯತಿವರ್ಯ
ಕೋವಿರುವ ಪಾತಕಂಗಳ ಕಳೆದು ಬೊಮ್ಮನೊಡಗೂಡುತತಿ ಸುಖವೊಂದುವ
ಈ ವಿಧದ ಯೋಗದಿಂ ಕಲಿತ ಚಿತ್ತಂ ಸರ್ವ
ದಾ ವಿಷಯಗಳನೆಲ್ಲವೊಂದಾಗಿ ನಿಟ್ಟಿಸುವ
ನೀ ವಿಪುಲಭೂತಂಗಳೆಲ್ಲಾತ್ಮನೊಳಗಾತ್ಮನೆಲ್ಲ ಭೂತಗಳೊಳೆಂದು ೧೪

ಯಾರೆನ್ನನೆಲ್ಲೆಡೆಲಿ ನಿಟ್ಟಿಸುವನೆಲ್ಲವಂ
ಮೀರದೆನ್ನೊಳೆ ಕಾಂಬನವನ ಪಾಲಿಂಗಾನು
ಸೋರಿ ಮಾಜುವುದಿಲ್ಲನಾತನೆನಗೆಂದಿಗೂ ಮಸಳಿ ಮಾಯುವುದಿಲ್ಲವು
ಭೂರಿಭೂತಗಳಂತರದೊಳೆನ್ನನಾವಾತ
ನೋರಂದ ಕಂಡು ಭಕ್ತಿಲಿ ಭಜಿಸುತಿಹನಾತ
ದಾರುಣದ ಭವಗರ್ತದೊಳು ಬಿದ್ದು ತಾ ಪೊರಳುತಿದ್ದರೆನ್ನೊಳಗಿರುವನು ೧೫

ತನ್ನಂತೆ ಸಮತೆಯಿಂ ಸಕಲ ಪ್ರಾಣಿನಿಕಾಯ
ವನ್ನಾರು ಕಾಂಬ ಸುಖದೊಳು ದುಃಖದೊಳು ಬೆರೆಯು
ತುನ್ನತದ ಪದವೇರ್ದ ಯೋಗಿಯುವನೆಲ್ಲರಿಂ ಶ್ರೇಷ್ಠತಮನಾಗಿರುವನು
ಮುನ್ನ ಪಾರ್ಥಂ ಕೇಳ್ದ ನೀನು ಪೇಳಿದ ಯೋಗ
ವೆನ್ನ ಮನಸಿಗೆ ನಿಲುಕದಿಹುದು ಸಾಮ್ಯದೊಳಿರುವ
ದುನ್ನಿಸಲಿಕತಿಕಷ್ಟ ಸಾಧ್ಯವಿದೆ ನರಗವನ ಸ್ಥಿತಿಯೆ ಚಂಚಲವಾಗಿರೆ ೧೬

ಚಿತ್ತವತಿ ಚಪಲವಿಹುದಿಂದ್ರಿಯವ್ರಜವನೊಲೆ
ದೊತ್ತಿ ಕೆಡಿಸುವುದು ಬಲವಂತವಿದೆ ಸುದೃಢವಿದೆ
ಸುತ್ತಿ ಸುಳಿಯುವ ವಾಯುವಂತದರ ನಿಗ್ರಹವು ದುಷ್ಕರವೆ ಮಾನಿಸನಿಗೆ
ಚಿತ್ತಜಯ್ಯನುಸಿರ್ದನಹುದು ಮನವತಿ ಚಲವು
ಬತ್ತಿಸುತೆ ನಿಯಮಿಸಲಸಾಧ್ಯವಿಹುದಾದರೂ
ಪೊತ್ತಿರುವ ವೈರಾಗ್ಯದಿಂದುಚಿತ ಯತ್ನದಿಂದದ ಬಿಗಿಯಲಳವಪ್ಪುದು ೧೭

ಮನವ ಸಂಯಮಿಸದಗೆ ಯೋಗಪದವಿಯಲಭ್ಯ
ವೆನುವ ವಚನವು ಸತ್ಯವಿಹುದು ವಿಜಿತೇಂದ್ರಿಯಗೆ
ಸನುಮತದೊಳಾಚರಿಸಲದು ಶಕ್ಯವಿದೆ ಸುಯುಕ್ತಿಗಳಿಂದ ಸುಲಭದಿಂದ
ಎನಲರ್ಜುನಂ ಕೇಳ್ದ ಶ್ರದ್ಧೆಯುಳ್ಳವನಾದ
ರನುಸರಿಸಲಾರದಲೆ ಯೋಗಪಥದಿಂ ಗಲಿತ
ಮನನಾಗಿ ಸಿದ್ಧಿವಡೆಯದಿರಲ್ಕೆ ಯತಿ ಯಾವ ಗತಿಯ ಪೊದ್ದುವನಿಹದಲಿ ೧೮

ಗುರಿಯನಡಸದೆ ಬ್ರಹ್ಮಸಾಧನೆಲಿ ಮೋಣ್ ಕರ್ಮ
ದಿರವನಾಶ್ರಯಿಸದುಭಯವ ಕಳಚಿ ಬಿಟ್ಟವಂ
ಮುರಿದುಗಿದ ಮುಗಿಲಂತೆ ಬ್ರಹ್ಮಾಂಬರದ ಪಥದಿ ಪಾಳಾಗನೇ ಮೂಢನು
ಕುರುಳಿಡುವ ಸಂದೇಹವಿದ ನೀನು ಸರಿಯಾಗಿ
ಪರಿಹರಿಸಬೇಕು ನಿನ್ನನ್ನುಳಿಯೆ ಸಂಶಯಗ
ಳರಿಯುತೆ ನಿವಾರಿಸುವರಿಲ್ಲವೆನೆ ಕಮಲಾಕ್ಷ ಬಿತ್ತರಿಸಿದಂ ನಗುತಲಿ ೧೯

ಮಲ್ಲ ಸಾಹಸಿಯವಗೆ ನಾಶವೀಲೋಕದೊಳ
ಗಿಲ್ಲ ಪರದೊಳಗಿಲ್ಲ ಕಲ್ಯಾಣಕರ ಕ್ರಿಯೆಗ
ಳುಲ್ಲಾಸದಿಂ ಗೈವನೆಂದಿಗೂ ದುರ್ಗತಿಯ ಪೊದ್ದಲಾರನು ವತ್ಸನೆ

ಬಲ್ಲಿದಂ ಯೋಗದಿಂ ಚ್ಯುತನಾಗುತೀಲೋಕ
ದಲ್ಲಿ ಸಾಯಲು ಪುಣ್ಯಕೃತರ ಸ್ವರ್ಗಾದಿಯಲಿ
ಭುಲ್ಲವಿಸಿ ಹಲವರುಷ ಮಗುಳಿಹದಿ ಭಾಗ್ಯಶಾಲಿಗಳ ಗೇಹದಿ ಜನಿಸುವ ೨೦

ಅವನಲ್ಲದಿರೆ ಬಧ್ಧಿವಂತರಿಹ ಯೋಗಿಗಳ
ಪ್ರವರದೊಳೆ ಜನಿಸುವಂ ಪೂರ್ವಕರ್ಮದ ಸಂಚಿ-
ತವನನುಸರಿಸಿ ಜಗದೊಳಂಥ ಜನ್ಮವು ದುರ್ಲಭವೆ ಮನುಷ್ಯರ ಯೋನಿಲಿ
ಭವದೊಳಂಥವ ಪುಟ್ಟಿ ತನ್ನ ಹಿಂದಿನ ಜನುಮ
ವಿವರದೊಳು ಗಳಿಸಿದ್ದ ಬುದ್ಧಿಯಂ ಪಡೆಯುತಿಹ
ನವಘಡಿಸುತಲಿ ಮುಂದೆ ಪೂರ್ಣಸಿದ್ಧಿಗೆ ಪ್ರಯತ್ನವ ಗೈವನುತ್ಸವದಲಿ ೨೧

ಪೂರ್ವದಭ್ಯಾಸಬಲದಿಂದ ತನ್ನಂತವಂ
ಸಾರ್ವ ವೈವಶ್ಯದಿಂ ಧ್ಯೇಯಮಂ ಪೂರೈಸ
ಲುರ್ವಯೋಗದ ಮಾರ್ಗವೆಳಸುತಿಹನಾದರೂ ಕರ್ಮಗತಿ ಮೀರಿರುವನು
ಪಾರ್ವಧೃತಿಯಿಂದಲತಿಯತ್ನಗಳ ಗೆಯ್ಯುತಿರ
ಲುರ್ವ ಪಾಪದ ಹೊರೆಯ ಕಳಚಿ ಬಹು ಜನ್ಮಗಳ
ಚರ್ವಿಸುತೆ ಚರಿಸೆ ಸಂಸಿದ್ಧನಾಗುತೆ ಪರಮಪದವಿಯಡರುವ ಸುಖದಲಿ ೨೨

ಯೋಗಿಯುಪವಾಸಾದಿ ತೀವ್ರತಪ ಗೈವರಿಂ
ದಾಗಮ ಸ್ಮೃತ್ಯಾದಿ ಶಾಸ್ತ್ರಾರ್ಥವರಿತರಿಂ
ದೇಗಳಾಯಾಸವಿಲ್ಲದೆ ಕರ್ಮಠರದಾಗುತಿರ್ಪರಿಂ ಹೆಚ್ಚಿನವನು
ಆಗು ನೀನದರಿಂದ ಯೋಗಿಯಂಥರೊಳಾರು
ಬಾಗಿ ಶ್ರದ್ಧಾಯುಕ್ತ ಚಿತ್ತದೊಳಗೆನ್ನನಾ
ವಾಗಲೂ ಭಜಿಸುವವನಾತನೇ ಶ್ರೇಷ್ಠನಿಹನೆನ್ನ ನಚ್ಚಿನ ಭಕ್ತನು ೨೩

ಏಳನೆಯ ಅಧ್ಯಾಯ

ಸೂಚನೆ || ಮಾನನಿಧಿ ಕಪಿಕೇತನಿಂಗೆ ಮಾಧವನೊರೆದ
ಜ್ಞಾನವಿಜ್ಞಾನಯೋಗವ ಮಥಿಸಿ ವಿಸ್ತರದೊ
ಳಾನಂದಘನವಾದ ಚಿನ್ಮಯ ಸ್ವರೂಪಾನುಭವದ ಸಾರಾಂಶಗಳನು

ಪನ್ನಗಶಯನನೆಂದ ಚಿತ್ತದಾಸಕ್ತಿಯಂ
ಯೆನ್ನೊಳೇ ವಹಿಸಿ ಶರಣೆಂದು ಕರಣಗಳ ಬಿಗಿ
ದುನ್ನತಿಕೆಯಿಂ ಸಾಧನೆಯ ನಡೆಸಲೆನ್ನ ಸರಿಯಾಗರಿವ ಬಗೆಗುಸಿರುವೆ
ಸನ್ನುತ ಜ್ಞಾನವಾವುದ ತಿಳಿಯಲುಳಿದ ಸಂ
ಪನ್ನ ಜ್ಞೇಯಾಂತರಗಳಿಲ್ಲ ಜಗದೊಳಗದನೆ
ಮನ್ನಿಸುತಲನುಭವದ ಕೂಡೆ ಪೇಳುವೆ ನಿನಗೆ ಬೋಧಾಭಿವೃದ್ಧಿಗಾಗಿ ೧

ಸಾವಿರಾರ್ಜನರ ಜಂಗುಳಿಯಲ್ಲಿ ವಿಹಿತಮತಿ
ಯಾವನೊಬ್ಬನು ಜ್ಞಾನವಡೆಯೆ ಪ್ರಯತ್ನಿಸುವ
ಕೋವಿತನುಮನಗಳನ್ನದರೊಳೇ ಹೆಣಗುವವನೊಬ್ಬಾತನೆನ್ನ ಕಾಂಬ
ಪಾವನದೊಳಿರುವಂತೆ ಭುವಿಯು ಸಲಿಲವು ವಹ್ನಿ
ಯಾವಾಯು ನಭಬುದ್ಧಿಮನವಹಂಕಾರಗಳೆ
ಕೇವಣಿಸುತಿರುವೆನ್ನ ಪ್ರಕೃತಿಯೊಳಗೆಂಟುವಿಧವಾದ ವಿಕೃತಿಗಳಿರುವವು ೨

ಪೇಳಿದುದೆ ವಿಶ್ವವಂ ರಚಿಸಿ ಹೆಣೆದಿರುವೆನ್ನ
ಕೀಳುಭಾಗದ ಪ್ರಕೃತಿ ಮೇಣದನೆ ಧರಿಸುತಿರು
ವ್ವೋಗದ ಚೇತನಾಂಶಕವೆ ಜೀವಕನೆನ್ನುವುದು ನಿಧಾನದಿ ಯೋಚಿಸೆ
ಸೂಳುನುಡಿಯುವಧರಿಸಲೀ ಕಾಂಬ ಸಕಲ ಭೂ
ತಾಳಿ ಬಿಡದವುಗಳಿಂ ಜನಿಸಿಹವು ಮುಂದಕವ
ರಾಳವಾಲೋಚಿಸಲಿಕೆಲ್ಲದರ ಸರ್ಗಲಯಕಾನೆ ಕಾರಣನಾಗಿಹೆ ೩

ಕೌಂತೇಯನೆನ್ನ ಹೊರತಾವ ನೈಜತೆಯುವ
ಸ್ತ್ವಂತರಗಳಿಲ್ಲವೀ ಲೋಕದೊಳಗೆಲ್ಲವೂ
ತಂತುವಿಲಿ ಮಣಿಗಣವ ಪೋಣಿಸಿದ ತೆರವೆನ್ನೊಳೇ ಹೊಕ್ಕು ಹಾಸಾಗಿವೆ
ನಾಂ ತಳುವದಾಪದಲಿ ರಸವಾಗಿ ಶಶಿಸೂರ್ಯ
ರಂತರದಿ ಪ್ರಭೆಯಾಗಿ ನಭದಿ ಶಬ್ದಗಳಾಗಿ
ಕಾಂತವೇದಾದಿಯಲಿ ಪ್ರಣವವಾಗುತೆ ನರರೊಳುದ್ಯೋಗವಾಗಿ ಮೆರೆವೆ ೪

ಭುವಿಯೊಳಗೆ ಗಂಧವಾಗಿಹೆ ವಿಭಾವಸುವಿನೊಳು-
ರಿವ ತೇಜವಾಗಿಹೆನು ಸರ್ವ ಜಂಗಮ ಜಂತು
ನಿವಹದಲಿ ಜೀವನಾಗಿಹೆ ತಪಸ್ವಿಗಳಲ್ಲಿ ವಿಮಲ ತಪವಾಗಿರುವೆನು

ಕವಿದೆನ್ನನೀ ಚರಾಚರ ವಿಶ್ವಗಳ ಬೀಜ
ಪ್ರವರವೆನ್ನುತ ತಿಳಿಯು ಬುದ್ಧಿವಂತರೊಳಾನು
ಸುವಿವೇಕ ಶಕ್ತಿಯಾಗಿಹೆ ತೇಜಸ್ವಿಗಳಲ್ಲಿ ತವೆ ತೇಜವಾಗಿರುವೆನು ೫

ಬಲವಂತರಲಿ ಕಾಮರಾಗವರ್ಜಿತವಾಗು
ತೊಲೆವ ಬಲವಾಗಿರುವೆ ಸಕಲ ಭೂತನಿಕಾಯ
ದಲಿ ಧರ್ಮಕವಿರುದ್ಧವಾಗಿರುವ ಕಾಮವಾಗಿರುವೆ ಪಾರ್ಥನೆ ಪರಿಕಿಸೆ
ಫಲಿತವಾಗಿಹ ಸತ್ತ್ವರಜತಮೋಗುಣಗಳಿಂ
ದಲೆವ ಭಾವಗಳೆಲ್ಲ ನನ್ನಿಂದಲೇ ಹುಟ್ಟಿ
ಬಲಿದಿಹವು ನಾನವುಗಳೊಳಗಿಲ್ಲವಾದರವು ನಿಲವೂರಿರುವವೆನ್ನೊಳೇ ೬

ಈ ಮೂರುಗುಣಗಳಿಂದುಂಟಾದ ಭಾವಗಳ
ಸ್ತೋಮದಿಂದಾವೃತದ ಜಗವು ಮೋಹದೊಳಿವುಗ
ಳಿಂ ಮೀರಿ ಪರವಾದ ವಿಮಲರೂಪವನೆನ್ನ ಕಾಣದಲೆ ಕಳವಳಿಪುದು
ಈ ಮಾಯೆಯತ್ಯಂತ ದುಸ್ತರವು ದಿವ್ಯಗುಣ
ದಾಮದಿಂ ಜಟಿಲವಿಹುದಾರೆನ್ನನೋಲಗಿಸಿ
ಕೈಮರೆಯುತಾಶ್ರಯಿಪರವರದರ ಪಾರಮಂ ಸುಲಭದಿಂ ಪೊಂದುತಿಹರು ೭

ಭ್ರಾಂತಿಯಿಂ ಸುವಿವೇಕಶಕ್ತಿಯಂ ಮುಸುಳಿರುವ
ಸ್ವಾಂತದೊಳಗಾಸುರೀಭಾವಗಳ ತುಂಬಿರುವ
ಹೊಂತದಿಂದಲನೇಕ ಪಾಪವೆಸಗುವ ಮೂರ್ಖರೆನ್ನ ಶರಣೈದದಿಹರು
ಸಂತರಾಗಿಹ ಚತುರ್ವಿಧದ ಸುಕೃತಿಗಳೆನ್ನ
ನಂತರಿಸದಾಸರಿಪರಾರ್ತನೊಬ್ಬ ವಿಚಾರ
ವಂತನಿನ್ನೊಬ್ಬನರ್ಥಾರ್ಥಿಯೊಬ್ಬಂ ಬ್ರಹ್ಮರೂಪವರಿತವನೊಬ್ಬನು ೮

ಅತಿಶಯದೊಳಾ ನಾಲ್ವರೊಳಗೇಕಭಕ್ತಿಯಿಂ
ಸತತ ಸೇವಿಪ ಜ್ಞಾನಿಯೇ ಶ್ರೇಷ್ಠತಮನಿರುವ
ನತಿಪ್ರೀತಿಕರನವಂಗಾನು ನನಗವ ಪ್ರಿಯಂ ಮಿಕ್ಕೆಲ್ಲರಿಂ ಧರೆಯುಲಿ
ಮತಿವಂತರವರೆಲ್ಲರೂ ಹೆಚ್ಚಿನವರಾದ
ರತುಲಜ್ಞಾನಿಯೆ ನನ್ನ ನಿಜರೂಪವೆಂದು ತಿಳಿ
ಯು ತನ್ನ ಮನವನವನದುಮೊಬ್ಬುಳಿಸಿ ಬೊಮ್ಮನೊಳೆ ರಮಿಸುತಿರುವನಿಲ್ಲಿ ೯

ಬಹು ಜನ್ಮಗಳ ತೊಳಲಿ ಕಡೆಗೆ ಜ್ಞಾನವ ಪಡೆಯು
ಲಿಹದಿ ನಾರಾಯಣನೆ ಸರ್ವವೆನ್ನುತೆ ತಿಳಿವು
ಬಹುದಾದರಂಥಾ ಮಹಾತ್ಮ ದುರ್ಲಭನಿರುವನಿಳೆಯೊಳಗೆ ಸಾಮಾನ್ಯರು
ವಿಹಿತ ಸ್ವಭಾವಕೊಳಗಾಗಿ ತಮ್ಮಯ ಹಲವು
ಸಹಜ ಹಂಬಲುಗಳಿಂ ಸ್ವವಿವೇಕ ಕಾಳ್ಗೆಡವಿ
ವಹಿಸುತಲಿ ಹಲನೇಮನಿಷ್ಠೆಗಳನನ್ಯದೇವತೆಗಳಾರಾಧಿಸುವರು ೧೦

ಆವಾವ ಭಕ್ತ ವಿಶ್ವಾಸದಿಂದಾವಾವ
ದೇವತೆಯ ಪೂಜಿಸಲು ಬಯಸುತಿಹನಾತನೊಳ
ಭಾವಕನುಸರಿಸುತಾ ದೇವತೆಯ ಮೇಲೆ ದೃಢಶ್ರದ್ಧೆಯಾನ್ನೆಲೆಗೊಳಿಸುವೆ
ಆ ವಿನೀತಂ ಮುಂದಕವರನಾರಾಧಿಸುವ
ನೋವಿರುವ ನೇಮನಿಷ್ಠೆಯಲಿ ಬಳಿಕುಚಿತ ಸುಫ
ಲಾವಳಿಯ ಪೊಂದುವಂ ನನ್ನಿಂದಲೇ ವಿಹಿತವಾದಂತೆ ಭವಿತವ್ಯದಿ ೧೧

ಅಳಿಮತಿಯ ಮೂಢರಿಂಗದರಿಂದ ಬಹ ಫಲಗ
ಳಳಿವುಳ್ಳವನ್ಯ ದೇವತೆಗಳಂ ಭಾವಿಪರು
ಪಳಗಲವರನೆ ಪೊಂದುವರು ನನ್ನ ಕಿಂಕರರು ನನ್ನ ಪದವನೆ ಪಡೆವರು
ಸುಳಿವಿಂದ್ರಿಯಗಳಿಗವ್ಯಕ್ತವಾಗಿರುವೆನ್ನ
ಪಳಿತ ಪರರೂಪವನ್ನರಿಯದಿಹ ದುರ್ಬುದ್ಧಿ
ಗಳು ಕಣ್ಣಿಗೆಟಕುತಿಹ ಹಲವಾರುರೂಪಿನಿಂದರಿತು ಮೋಹದೊಳಿರುವರು ೧೨

ಯೋಗಮಾಯಾಸಮಾವೃತನಾದ ನಾ ಸರ್ವ
ಜಾಗತಿಕ ಜಂತುಗಳಿಗಿಹದಿ ಗೋಚರನಲ್ಲ
ವಾಗಿರಲು ಜನನಮರಣಗಳಿಲ್ಲದೆನ್ನಿರವ ಮೂರ್ಖರರಿಯರು ಸುಲಭದಿ
ಈಗ ಜರಗುತ್ತಿಹುದ ಹಿಂದಣದ ಮುಂದಣದ
ಸೋಗೆಲ್ಲವಾನರಿತು ಕರತಲಾಮಲಕದೋಲ್
ಮಾಗಿರುವೆನಾದರೆನ್ನಯ ನೈಜತೆಯನಿಲ್ಲಿ ಬಗೆಹರಿಸಿದವರಿಲ್ಲವು ೧೩

ಬೇಕು ಬೇಡೆಂಬ ಭಾವನೆಗಳಿಂ ಪುಟ್ಟಿರುವ
ಕಾಕು ಸುಖದುಃಖಾದಿ ದ್ವಂದ್ವಭಾವಾವೇಶ
ವಾಕರಿಸಿ ಸರ್ಗಾದಿಯಿಂದಲೇ ಪ್ರಾಣಿಗಳು ಸಮ್ಮೋಹವೈದುತಿಹವು

ಲೋಕದೊಳಗಾರು ಶುಭಕರ್ಮಗಳನೆಸಗುತ್ತ
ಲೋಕರಿಸುವರೊ ಪಾಪಭರವನವರದರ ನಿ
ರ್ಮೋಕವಂ ಕಳಚಿ ಮಬ್ಬನ್ನೊರಸಿ ದೃಢವ್ರತದೊಳೆನ್ನನಾರಾಧಿಸುವರು ೧೪

ಮುಪ್ಪು ಸಾವುಗಳಿಂದಲೆನ್ನನಾಶ್ರಯಿಸುತಲಿ
ತಪ್ಪಬೇಕೆಂದಾರು ಯತ್ನಿಸುವರವರು ಪರ
ಬೊಪ್ಪನ ಸ್ವರೂಪವನ್ನಾತ್ಮವಿಷಯುವ ಕರ್ಮಗಳ ಬಗೆಯನರಿತಿರುವರು
ಕುಪ್ಪರಿಸದೆನ್ನೊಳೇ ನೆಲಸಿರುವ ಮನದೊಳೈ
ತಪ್ಪ ಸಾವಿನ ಸಮಯದೊಳಗಾದರೆನ್ನ ತಿಳಿ
ದಪ್ಪವರು ಯಾರರಿವರಧಿಭೂತ ದೈವಯಜ್ಞಗಳಿಂದ ಯುಕ್ತನೆಂದು ೧೫

ಎಂಟನೆಯ ಅಧ್ಯಾಯ

ಸೂಚನೆ || ಪಕ್ಷೀಂದ್ರವಾಹನಂ ವಿತತಮಾಯಾತೀತ
ನಕ್ಷತಾಂತರನಾದ ಮಧ್ಯಪಾಂಡವಗೊರೆದ-
ನಕ್ಷರಬ್ರಹ್ಮಯೋಗವ ವಿವರದೊಳಗನುಪಮದ ಪರಮಧ್ಯಾನದಿರವ

ಸವ್ಯಸಾಚಿಯು ಕೇಳ್ದನಧ್ಯಾತ್ಮವೆಂದರೇ
ನವ್ಯಯ ಬ್ರಹ್ಮವೆಂದರದೇನು ಕರ್ಮವೇ
ನು ವ್ಯಷ್ಟಿಯಾಗಿ ಮೆರೆವಧಿಭೂತವೆಂದರೇನಧಿದೈವವೆಂದರೇನು
ಅವ್ಯವಚ್ಛಿನ್ನಾಧಿಯಜ್ಞವೆಂದರದೇನು
ಭವ್ಯ ಪುರುಷೋತ್ತಮನೆ! ದೇಹಮಂದಿರದೊಳಗೆ
ಸುವ್ಯವಸ್ಥೆಯೊಳಿರುವರಿಂಗೆ ಮೃತಿಕಾಲದೊಳಗೆಂತು ಗೋಚರಿಸುತಿರುವೆ ೧

ಶ್ರೀಪತಿಯು ಮುಂದೊರೆದ ನಾಶವಿಲ್ಲದ ಪರದ
ರೂಪವೇ ಬ್ರಹ್ಮವಿದೆ ಪ್ರತಿತನುವಿನೊಳಪುದಿದಿ
ಹಾ ಪಾವನಾತ್ಮವಧ್ಯಾತ್ಮವಿದೆ ಸಕಲ ಪ್ರಾಣಿಗಳ ಭವಜನ್ಮಾದಿಯು
ರೂಪಿಸುವುದೇ ಕರ್ಮವಿದೆ ನಶಿಪ ಭಾವದಾ
ವಾಪವಧಿಭೂತವಿದೆ ಪುರುಷನಧಿದೈವತವು
ಲೇಪವಿಲ್ಲದೆ ಮಿರುಗುತಿರುವ ನಾನಧಿಯಜ್ಞನಿಹೆನು ದೇಹಿಗಳೊಡಲಲಿ ೨

ಅಂತಕನ ಪೊರೆಯ್ಗೈದುಪಂದಾರು ನನ್ನನೇ
ಚಿಂತಿಸುತೆ ನಿಜ ಶರೀರವ ಬಿಡುವರವರೆನ್ನ
ಸಂತಸ್ವರೂಪವಂ ಪೊಂದುವರು ಈ ಜಗೆಯೊಳೆನಿತು ಸಂದೇಹವಿಲ್ಲ
ಇಂತು ನರರಾವಾಗಲಾವಭಾವಗಳಲ
ತ್ಯಂತ ಪ್ರೀತಿಯೊಳಸುವ ಸೀಗುತಿಹರವರದರ
ಸಂತತಾನುಧ್ಯಾನ ಸಂಸ್ಕಾರಬಲದಿಂದಲದರನೇ ಪೊದ್ದುತಿಹರು ೩

ಅದರಿಂದಲೆಲ್ಲ ಸಮಯದೊಳೆನ್ನನೇ ಸ್ಮರಿಸು
ಬೆದರದಾಹವ ಹೂಡು ನಿನ್ನ ಮನಬುದ್ಧಿಗಳ
ಮುದದೊಳೆನಗೊಪ್ಪಿಸಿದೆಯಾದರೆನ್ನಯ ಪದವ ಪೊಂದುವೆರಡಿಲ್ಲದಿರುತೆ
ಚದುರಯೋಗಾಭ್ಯಾಸದಿಂದ ಚಿತ್ತವನೊತ್ತಿ
ಬದಲೆಣಿಕೆಗೊಳದಿರುತೆ ದಿವ್ಯಪರಪುರುಷನನೆ
ಸದರದಿಂದನವರತವಾಲೋಚಿಸುತ್ತಿರಲಿಕವನ ಪೊಡೆ ಪೊಗುವ ನರನು ೪

ಭೂಗೋಲದನುಶಾಸಕನ ಪುರಾಣನ ಕವಿಯ
ಸೋಗಿನೊಳಗಣುವಿಂದ ಸೂಕ್ಷ್ಮಕನ ಚಿಂತಿಸಲಿ
ಕಾಗದಿಹ ರೂಪಕನ ಸರ್ವಫಲವೀಯುವನ ತಮದಿಂದಲಾಪಾರದಿ
ಮಾಗಿ ನೇಸರತೆರದಿ ಬೆಳಗುವನ ನಿಚ್ಚಟದ
ಯೋಗದಿಂ ಬಿಗಿದ ಮನದಲಿ ಭಕ್ತಿಯಿಂ ಸಾಯು
ವಾಗ ಭ್ರುಕುಟಿಲಿ ಪ್ರಾಣವಂ ನೆಲಸಿ ಪರವ ನೆನೆಯಲಿಕವನ ಪದವೊಂದುವ ೫

ಯಾವಕ್ಷರವ ವೇದವೇತ್ತರೊರೆಯುತ್ತಿರುವ
ರಾವುದಂ ವೀತರಾಗದ ಯತಿಗಳರಿಯುತಿಹ
ರಾವುದಿಚ್ಛಿಸಿ ಬ್ರಹ್ಮಚರ್ಯವುಂ ಚರಿಸುತಿಹರಾಪದವ ನಿನಗುಸಿರುವೆ
ತೀವಿ ಸಂಕ್ಷೇಪದಿಂ ತನ್ನ ತನುದ್ವಾರಗಳ
ನಾವರಿಸಿ ಮುಚ್ಚುತಲಿ ಮನವ ಹೃದಯದಿ ನಿಲಿಸಿ
ಕೇವಣಿಸಿ ಪ್ರಾಣವಂ ನಡು ನೆತ್ತಿಯೊಳು ಯೋಗಧಾರಣೆಯನಳವಡಿಸುತೆ ೬

ಓಂಕಾರವೆಂಬ ಬ್ರಹ್ಮನನುಚ್ಚರಿಸುತೆನ್ನ
ಶಂಕೆಯಿಲ್ಲದೆ ಸ್ಮರಿಸುತಲಿ ಮರಣಕಾಲದೊಳ
ಗಂಕಿತದ ಜಡದೇಹ ಕಳಚುತಿಹನವ ಪರಮಗತಿಯನಡರುತ್ತಿರುವನು

ಅಂಕೆಯೊಳಗಿಹ ಮನದೊಳನ್ಯವಿಷಯದ ಬಗೆಯ
ನುಂಕಿಸದೆ ನನ್ನನೆಡೆಬಿಡದೆ ಭಾವಿಸುತಿರುವ
ಕಿಂಕರೋತ್ತಮ ಯೋಗಿವರ್ಯನಿಂಗಾನು ಬಹುಸುಲಭನಿಹೆನೀ ಲೋಕದಿ ೭

ಎನ್ನ ಸೇವಿಸಿ ಪರಾತ್ಪರ ಸಿದ್ಧಿಯನ್ನೇರಿ
ದುನ್ನತಾತ್ಮರು ಮೂರುದಿನದ ಬಾಳಾಗಿರುವ
ಬನ್ನಗಳ ಬೀಡಾದ ಮರುಜನುಮವೀಭವದೊಳೆಂದಿಗೂ ಕೊಳ್ವುದಿಲ್ಲ
ಮುನ್ನ ಬೊಮ್ಮನ ಭುವನದನಕಖಿಲ ಲೋಕಗಳ
ಸನ್ನುತ ತಪಾದಿಯಿಂದಾರ್ಜಿಸಿದ ಮಾನಿಸ
ಗಿನ್ನೊಮ್ಮೆ ಜನನ ಸಿದ್ಧವದಾದರೆನ್ನ ಪಡೆದಿರೆ ಮಗುಳಿ ಪುಟ್ಟದಿಹರು ೮

ಕಾಲ ಪರಿಣಾಮವನ್ನರಿತ ಪಂಡಿತರೆಮ್ಮ
ಸಾಲಾಗಿ ಹೆಣೆದಿರುವ ಯುಗಸಹಸ್ರವ ಬ್ರಹ್ಮ
ನೋಲಗಿಪ ಪಗಲೆಂದು ಮೇಣನಿತೆ ನಿಶಿಯೆಂದು ತಿಳಿದಿಹರು ಶ್ರುತ್ಯಾದಿಯಿಂ
ಓಲಾಡುತಿಹ ವ್ಯಕ್ತವಾದ ಸಚರಾಚರಗ
ಳಾಲಿಯವ್ಯಕ್ತದಿಂ ಕಮಲಜನ ದಿನವುದಿಸ
ಲೋಲೈಸುವವು ತಳ್ತು ತಿರುಗದರೊಳೇ ಲಯಿಸುವವು ರಾತ್ರಿಯಾಗಮಿಸಲು ೯

ಈ ವಿಶ್ವವಿಸ್ತರವು ಮಗುಮಗುಳಿ ಹಿಂದಿನೋ
ಲಾವಿರ್ಭವಿಸಿ ರಜನಿಯೊದವೆ ಲಯಿಸುತ್ತಿರುವು
ದಾವಿಷ್ಟದಿವಸದೊಳು ತಿರುಗಿ ಜನಿಸುತ್ತಿಹುದು ತಮ್ಮ ಸರ್ಗದ ನೇಮವಿ
ಆವನ್ಯಪುರುಷಶಾಶ್ವತನಿಹದೊಳೇ ಸಕಲ
ಭಾವ ಸಾಮಾನ್ಯದಿಂ ಪರನಿರುವನಾ ಪರಮ
ಪಾವನನ ಪದವೆಂದಿಗೂ ನಶಿಸುತಿಲ್ಲಿಲ್ಲವೂ ನಷ್ಟವಾಗುತಿರಲು ೧೦

ಓಂಕಾರವೆಂಬ ಪೆಸರುಳ್ಳದುದು ಕರಣಚಯ
ದಂಕೆಗೊಳಗಾಗದುದೆ ಕೈವಲ್ಯಗತಿಯಿಹುದು
ಸೋಂಕಲಾವುದ ತಿರುಗಿ ಬರಲಾರದದುವೆನ್ನ ಧಾಮವೆನ್ನುತೆ ತಿಳಿದಿರು
ಬಿಂಕದಿಂದೀ ಚರಾಚರವಸ್ತುತತಿಯಾರೊ
ಳಂಕಿತವೊ ಯಾರಿಂದಲಿದು ತುಂಬಿತುಳುಕಿಹುದೊ
ಕೊಂಕಿಲ್ಲದಾ ಪರಮಪುರುಷನೆರಡೆಣಿಸದಿಹ ಭಕ್ತಿಮಾತ್ರದಿ ಲಭ್ಯನು ೧೧

ತನು ತೊರೆಯುತಾವ ಕಾಲದಿ ಪೋಗುತಿರೆ ಮಾನಿ
ಸನು ಹಿಂದಿರುಗಲಾರ ಹಿಂದೈದುತಿಹ ನಿಂತಿ
ಹನಿವಾರ್ಯವಾದೆರಡು ಕಾಲಭೇದವನೊರೆವೆನಭಿಮಾನಿದೇವರೊಡನೆ
ಅನುವರ್ತಿಸುವ ದಿವಸ ಶುಕ್ಲಪಕ್ಷೋತ್ತರಾ-
ಯಣದಾರು ತಿಂಗಳಧಿದೇವತೆಗಳಿಹ ಪಥದೊ
ಳನಲಜ್ಯೋತಿಯು ಬ್ರಹ್ಮವೇತ್ತರದರಲಿ ಗತಿಸೆ ನಿರ್ವಾಣಪದ ಪಡೆವರು ೧೨

ದಕ್ಷಿಣಾಯನದ ಷಣ್ಮಾಸಗಳು ನಿಶೆ ಕೃಷ್ಣ
ಪಕ್ಷ ಮುಸ್ಸಂಜೆಗಳಭಿಮಾನಿ ದೇವರ್ಕಳ
ಕಕ್ಷದಲಿ ಚಾಂದ್ರಮಸ ಜ್ಯೋತಿಯಿಹುದದರೊಳಗೆ ಮೃತನಾಗೆ ಹಿಂದೈದುವ
ಪಕ್ಷಭೇದಗಳಿದುವೆ ಶುಕ್ಲ ಕೃಷ್ಣಗಳೆನ್ನು-
ತೆ ಕ್ಷಿತಿಯೊಳಿಹವು ಶಾಶ್ವತವಾಗುತೊಂದರೊಳ
ಗುಕ್ಷಿಪ್ತವಾಗೆ ಮರುಜನ್ಮವಿಲ್ಲವು ಮತ್ತೊಂದರಲಿ ನರ ಹಿಂದಿರುಗುವ ೧೩

ಎರಡು ದಾರಿಗಳಿವಂ ಮನವರಿತ ಮುನಿಯೆಂದು
ಮರುಳಾಗನದರಿಂದಲರ್ಜುನನೆ ನೀ ಯೋಗ
ಪರನಾಗು ವೇದಾದಿ ಪಠನೆಯುಲಿ ತಪಶ್ಚರ್ಯೆಯಲಿ ಯಜ್ಞದಾಚರಣೆಲಿ
ತೆರುವ ದಾನಾದಿಯೊಳಗೇತರದ ಪುಣ್ಯ ಫಲ
ವೊರಲಿರುವುದದನೆಲ್ಲ ತಿಳಿದು ಮಿಗಿಸುತೆ ಪೊಳೆವ
ಪರಪದವಿಯಡರುವಂ ಯೋಗಿ ತನ್ನಯ ಯೋಗದಭ್ಯಾಸ ಬಲದಿಂದಲಿ ೧೪

ಒಂಭತ್ತನೆಯ ಅಧ್ಯಾಯ

ಸೂಚನೆ ॥ ರಾಜಧರ್ಮಜನನುಜನಿಂಗೆ ಕಂಸಾಂತಕಂ
ಮಾಜದಲೆ ಪಲವಾರು ಜ್ಞಾನಗಳ ಸಾರಮಂ
ರಾಜವಿದ್ಯೆಯ ರಾಜಗುಹ್ಯಯೋಗವನೆಂದ ದೈನ್ಯಮುತ್ತರಿಸುವಂತೆ

ಭಗವಂತ ಮುಂಬರಿದನಾವುದಂ ತಿಳಿಯಲಶು
ಭಗಳಿಂದ ಮುಕ್ತನಾಗುವೆ ಗುಹ್ಯವಾಗುತೊಗು
ಮಿಗೆಯ ವಿಜ್ಞಾನ ಸಹಿತದ ಜ್ಞಾನವದ ನಿನಗೆ ಪುರುಡಿಸದಗಾನೊರೆಯುವೆ

ಬಗೆಯ ಬಿಜ್ಜೆಯೊಳರಸನಿರುವುದತಿ ಗುಪ್ತವಿದೆ
ಮಿಗೆ ಪವಿತ್ರವು ಧರ್ಮಕರವಿಹದೊಳನುಭವಕೆ
ಸಿಗುವುದಿದ ನಡೆಸಲತಿ ಸುಲಭವಿಹುದೆಂದಿಗೂ ನಾಶವಾಗದ ವಿಷಯವು ೧

ಈ ಧರ್ಮದಲಿ ಶ್ರದ್ಧೆಯಿನಿತಿಡದ ಜನರಿದ
ನ್ನಾದರಿಸದೆನ್ನ ಪೊಂದದೆ ಮೃತ್ಯುವಿಂದುರಿದು
ಬಾಧೆಗಳ ಶತವಾಂತು ಸಂಸೃತಿಯ ಪಥದಿ ಮರಮರಳಿ ಹಿಂದೈದುತಿಹರು
ಈ ಧರಾಗೋಲವೆಲ್ಲವು ನನ್ನಯ ವ್ಯಕ್ತ
ದಾಧಿದೈವಿಕಮೂರ್ತಿಯಿಂ ತುಂಬಿಹುದು ಸಕಲ
ವಾಧರಿಸುತಿಹವೆನ್ನನಾದರೂ ನಾನವುಗಳೊಳಗಡಕವಾಗಿಲ್ಲವು ೨

ಎನ್ನಾಳಿಕೆಯ ಸಮರ್ಥತೆಯ ನೀ ನೋಡು ಸಂ
ಪನ್ನ ವಸ್ತುಗಳಾವುವೆನ್ನೊಳಿಲ್ಲವು ವಿಶ್ವ
ವನ್ನು ಪುಟ್ಟಿಸುವೆನ್ನ ವಿಮಲಾತ್ಮನದನೆತ್ತಿ ಹಿಡಿದಿಹುದು ಭವದೊಳದುವೆ
ಎನ್ನೊಳಳವಟ್ಟಿಲ್ಲ ಸರ್ವತ್ರ ವ್ಯಾಪಿಸಿಹ
ಪನ್ನಗಾಶನ ವಿತತ ಗಗನದೊಳಗೊಲಿವಂತೆ
ನನ್ನ ಮಡಿಲೊಳಗಿಹುದು ಸಕಲ ಭೂತಪ್ರತತಿಯೆಂದು ನೀನರಿಯಬೇಕು ೩

ಕಲ್ಪಾವಸಾನದಲಿ ಸರ್ವಭೂತಗಳೆನ್ನ
ಕಲ್ಪಿತದ ಮಾಯೆಯೊಳಗಡಕವಾಗುತ್ತಲಿಹ
ವಲ್ಪಪ್ರಯಾಸದಿಂದವನೆ ಕಲ್ಪಾದಿಯಲಿ ಸೃಜಿಸಿ ಹೊರಗೆಡಹುತಿರುವೆ
ಕಲ್ಪನಾತೀತವಾಗಿಹ ಮಾಯೆಯಾವರಿಸಿ
ಸ್ವಲ್ಪವಲ್ಲದ ಚರಾಚರ ವಸ್ತುತತಿಯ ಸಂ
ಕಲ್ಪಮಾತ್ರದಿ ವಿವಶವಿರೆ ಪ್ರಕೃತಿಯನುಕರಿಸಿ ಮಗುಮಗುಳಿ ಹೊರಗುಗಿಯುವೆ

ಕೆಮ್ಮನೇ ಕುಳ್ಳಿರುತುದಾಸೀನನಾಗಿರುತೆ
ಕಮ್ಮದೊಳಗಾಸಕ್ತಿ ವಹಿಸದಿರಲೆನ್ನನವು
ತಮ್ಮ ಬಂಧನಕೊಳಗು ಮಾಡದಿವೆ ನಾನಿಂತು ವ್ಯಾಪಿಸಿರಲೆನ್ನ ವಶದಿ
ಬಿಮ್ಮನಿಂ ಪ್ರಕೃತಿ ಸಚರಾಚರದ ವಿಶ್ವಗಳ
ಹೊಮ್ಮುತಿಹುದೀ ಹೇತುವಿಂದಲೇ ವಿಪುಲ ಜಗ
ಕಮ್ಮಟವು ಕೈಗೈದು ರೂಪುಗೊಳ್ಳುತ್ತಿಹುದು ಬಗೆಬಗೆಯ ಮಿರುಗುಗಳಲಿ ೫

ಎಲ್ಲಕೂ ಹಿರಿದಾದ ನನ್ನ ಶ್ರೇಷ್ಠಸ್ವರೂ
ಪವೆಲ್ಲವನರಿಯದವಿವೇಕಿಗಳು ನನ್ನನಿಹ
ದಲ್ಲಿ ಮಾನುಷಕಾಯವವಲಂಬಿಸಿಹೆನೆಂದು ಸಾಮಾನ್ಯನೆನೆ ಹಳಿವರು
ಪಲ್ಲಟಿತ ಚಿತ್ತದವರಾಸೆ ಕರ್ಮರಿಪುಗಳ
ಗಲ್ಲಣೆಯ ವ್ಯರ್ಥದೊಳಗಾಂತು ನಡೆಯುತಲಿ ಜಗ
ದಲ್ಲಾಸುರಿಯು ರಾಕ್ಷಸಿಯ ಮೋಹಕಾರಕದ ಪ್ರಕೃತಿಯಾಶ್ರೈಸುತಿಹರು ೬

ಪರಮಹಾಂತರು ದೈವಿಕಪ್ರಕೃತಿಯಾವರಿಸಿ
ಮರೆಯದೆನ್ನುವನೆಂದಿಗೂ ನಾಶವಾಗದವ
ನುರುವ ವಿಶ್ವಕೆ ಮೂಲನೆಂದು ನಿಶ್ಚಲಮನದಿ ಸಾರಿ ಭಜಿಸುತ್ತಿರುವರು
ಚಿರವ್ರತಗಳಂ ಚರಿಸಿ ವಿಮಲ ನಾಮಾವಳಿಯ
ನೊರೆದೊರೆದು ಕೊಂಡಾಡಿ ನಮಿಸಿ ನಿರ್ಮಲಭಕ್ತಿ
ಯೊರವಿನಿಂದೆನ್ನನಾವಾಗಲೂ ಸ್ಮರಿಸುತಿಡೆಬಿಡದುಪಾಸನೆ ಗೈವರು ೭

ಕೆಲಬರೀ ಜಗದ ಮೂಲವು ಪರಮವೊಂದೆಂಬ
ಪಲವು ರೂಪಗಳೊಳವನೇ ಬೆಳಗುತಿಹನೆಂಬ
ಹಲವಾರು ವಿಧಗಳಿಂದಿಹನೆನ್ನ ಜ್ಞಾನಮಯ ಯಜ್ಞದಿಂ ಪೂಜಿಸುವರು
ಲಲಿತ ಶ್ರುತಿಯು ಕ್ರತುವು ಸ್ಮೃತಿಯು ಯಜ್ಞವು ಪಿತರು
ಗಳಿಗೀವ ಸ್ವಧೆಯೆಲ್ಲರುಂಬನ್ನವೂ ಘೃತವ-
ನಲನು ಮಂತ್ರವು ಹೋಮಕರ್ಮಗಳು ನಾನಿಹೆನು ಈ ವಿತತ ಬ್ರಹ್ಮಾಂಡದ

ಧಾತಾರ ತಂದೆತಾಯಿಯು ಪಿತಾಮಹ ಪವಿ-
ತ್ರಾತುಮನು ಋಗ್ಯಜುಸ್ಸಾಮಾದಿ ವೇದಗಳು
ಸೈತರಿಯಲಿಹ ವಸ್ತುವೋಂಕಾರಕನು ಕರ್ಮಸಾಕ್ಷಿ ಸುಹೃದನೆ ನಾನಿಹೆ
ಪೂತಸ್ವರ್ಗಾದಿ ಗತಿಯೊಡೆಯ ಕಾಪಾಡುವವ
ಭೂತಗಳ ಸರ್ಗವು ಪ್ರಲಯವು ಸ್ಥಿತಿಗತಿಯು
ಸಾತಿಶಯದ ನಿಧಾನ ಶರಣವು ನಿವಾಸನವ್ಯಯದ ಬೀಜವೆ ನಾನಿಹೆ ೯

ನಾ ತಪಿಸುತಿಹೆ ಮಳೆಯ ಬಿಗಿಹಿಡಿವೆನೊಡ್ಡುತಿಹೆ
ಜಾತರಿಗೆ ಮೃತ್ಯುವಾಗಿಹೆನಮೃತನಾಗಿರುವೆ
ತಾತನೇ! ಇಲ್ಲದಿರುವಿಕೆಯಿರುವಿಕೆಗಳೆಲ್ಲ ಭುವನದೊಳು ನಾನಾಗಿಹೆ

ಬೀತು ಮೂರ್ವೇದಗಳನರಿತವರು ಯಜ್ಞದಿಂ
ಜಾತವೇದನನರ್ಚಿಸುತೆ ಸೋಮರಸವೀಂಟಿ
ಪಾತಕಂಗಳ ತೊಳೆದು ಸ್ವರ್ಗವಿಚ್ಛಿಸುವವರು ದೇವೇಂದ್ರಲೋಕವಡರಿ ೧೦

ದಿವಿಯ ಭೋಗವನುಂಡು ತಮ್ಮ ಪುಣ್ಯದ ಭರವು
ಸವೆಯೆ ಹಿಂದಿಳಿಯುವರು ಮರ್ತ್ಯಲೋಕವನಲ್ಲಿ
ತವೆ ಧರ್ಮಕಾಮಾರ್ಥಗಳನಪೇಕ್ಷಿಪರಿಂತು ತಿರುತಿರುಗಿ ಸುತ್ತುತಿಹರು
ತವಿವೇಕನಿಷ್ಠೆಯಿಂದಾರೆನ್ನ ಭಾವಿಸುತಿ-
ರುವರರ್ಚಿಪರು ಸಂತತೆನ್ನೊಳಾಸಕ್ತಮನ
ರವರ ಯೋಗಕ್ಷೇಮವಾನು ವಹಿಸುತ್ತಿರುವೆನೆಂದೆಂದು ಬೆಂಬಿಡದೆಲೆ ೧೧

ಯಾರು ಶ್ರದ್ಧಾಯುಕ್ತರಾಗನ್ಯದೇವತೆಗ
ಳಾರಾಧಿಪರು ಭಕ್ತಿಯಿಂದಲಂಥವರೆನ್ನ-
ನೇ ರೀತಿಗೆಟ್ಟು ಪೂಜಿಸುತಿಹರು ತಿಳಿಯದಲೆ ನಾನೆಲ್ಲ ಯಾಗಾದಿಯ
ಚಾರುಹವಿರ್ಭಾಗವುಂಬುವ ಫಲಗಳೀಯುವವ-
ನಾರೆನ್ನನಿದ್ದಂತೆ ವಿಮಲರೂಪದೊಳರಿಯು
ಲಾರರವರೀ ತತ್ತ್ವದಿಂದ ಕೆಳಜಾರಿ ಬೀಳುವರು ನಿರ್ಗತಿಕರಾಗಿ ೧೨

ಸುರರನರ್ಚಿಸುವವರು ಸುರರ ಪಿತೃಗಳ ಭಾವಿ-
ಪರು ಪಿತೃಗಳಂ ಮರುಳ್ಗಳನುಪಾಸಿಸುವವರು
ಮರುಳುಗಳನೇ ಪಡೆಯುತಿಹರೆನ್ನ ಪೂಜಿಸುವರೆನ್ನನೇ ಪೊಂದುತಿಹರು
ಜುರಿವ ಭಕ್ತಿಯ ರಸದಿ ಹಣ್ಣುಹೂವೆಲೆನೀರ
ನಿರದಾರು ನನಗರ್ಪಿಸುವರು ವ್ರತಗಳ ಚರಿಪ
ವರು ತೆತ್ತುದೆಲ್ಲವಂ ನಾ ತೆಗೆದುಕೊಳ್ಳುತಿಹೆನತಿಪ್ರೀತಿಯಿಂದವರಲಿ ೧೩

ಏನ ಮಾಡುವೆಯೇನನುಣ್ಣುತಿಹೆಯೇನ ನೀ
ದಾನ ಗೆಯ್ಯುವೆಯೇನ ಹೋಮಿಸುವೆಯಿನ್ನೇನ
ಸೂನವಿಲ್ಲದೆ ತಪದೊಳೆಸಗುತಿಹೆಯವನೆಲ್ಲ ಮರೆಯಬೇಡೆನಗರ್ಪಿಸೆ
ತಾನಾಗಿ ಬೆಳೆಯುವ ಶುಭಾಶುಭದ ಫಲಗಳಿಂ
ತಾನದವುಗಳ ಬಂಧದಿಂದ ಬಿಡುಗಡೆವಡೆವೆ
ಗ್ನಾನದಿಂ ಸಂನ್ಯಾಸಯೋಗವೆಸಗಲು ಮೋಕ್ಷವೊಂದುತೆನ್ನಂ ಪೊದ್ದುವೆ ೧೪

ಸರ್ವಪ್ರಾಣಿಸಮೂಹದೊಳಗಾನು ಸಮನಿಹೆನು
ದುರ್ವಾರಶತ್ರುವೆನಗಿಲ್ಲವತಿ ಪ್ರಿಯನಿಲ್ಲ
ಸಾರ್ವರಾರೆನ್ನ ಭಕ್ತಿಯಲಿ ಭಜಿಸುತಲವರು ನನ್ನೊಳಿಹರಾನವರೊಳು
ಪರ್ವಿರುವೆನತಿನೀಚ ನಡೆವಳಿಕೆಯುವನಾದ
ರಾರ್ವಿನಯದಿಂದೆನ್ನನೇಕಗತಿಯೆಂದೊಲಿಸೆ
ಪಾರ್ವನವ ಸಾಧುವೆಂದರಿಯಬೇಕವನ ಮನದಿರವು ಸುಸ್ಥಿತವಿಹುದರಿಂ ೧೫

ಅವನು ಬಲು ಬೇಗ ಧರ್ಮಾತ್ಮನಾಗುವನಾತ
ನವಗಡಿಸದಲೆ ಚರಮಶಾಂತಿಯಂ ಪಡೆಯುವಂ
ಕವಲಿಲ್ಲದೆನ್ನನರ್ಚಿಪ ಭಕ್ತನೆಂದಿಗೂ ಕೆಡಲಾರನೆಂದರಿತುಕೋ
ಭುವಿಯೊಳತ್ಯಂತ ಪಾಪದ ಕೂಪದಲಿ ಮುಳುಗಿ
ದವರು ವನಿತೆಯರು ವೈಶ್ಯರು ಶೂದ್ರರಾದರೂ
ಸವೆಯದಿಹ ಕೂರ್ಮೆಯಿಂದೆನ್ನನೇ ಮರೆಹೊಗಲಿಕುತ್ತಮದ ಪದ ಪಡೆವರು

ಹೀಗಿರಲು ಪೂಜ್ಯ ರಾಜರ್ಷಿ ಬ್ರಾಹ್ಮಣರ ಬಗೆ
ಗಾಗೇನನರುಹಲಿದೆ ನಿತ್ಯವಲ್ಲದ ಸುಖದ
ಸೋಗಲವವಿಲ್ಲದಿಹ ಭೂಲೋಕವೈದಿರಲು ನೀನೆನ್ನ ಸೇವಿಸುತಿರು
ತಾಗಿ ನಿಲಿಸೆನ್ನೊಳೇ ಮನವನೆನ್ನಯ ಭಕ್ತ
ನಾಗೆನ್ನನೇ ಪೂಜಿಸೆನ್ನನೇ ನಮಿಸುತಿರು
ಬಾಗೆನ್ನ ಶರಣೆಂದು ನೀನುಪಾಸಿಸತೊಡಗಲೆನ್ನ ಪದವನೆ ಪೊಂದುವೆ ೧೭

ಹತ್ತನೆಯ ಅಧ್ಯಾಯ

ಸೂಚನೆ ॥ ನಗಧರಂ ಮುಂಬರಿದನುಪದೇಶವಿಸ್ತರವ
ಭಗವಂತನುರ್ವ ಮಹಿಮೆಗಳುಳ್ಳ ವಸ್ತುಗಳ
ನಗಣಿತವಿಭೂತಿಯೋಗವ ಬಣ್ಣಿಸಿದ ನರಂ ಕಾತರಿಸಿ ಕೇಳಲಂದು

ಗೋವರ್ಧನೋದ್ಧಾರಿ ಪೇಳ್ದನುತ್ಸಾಹದಿಂ
ದಾವ ಮಾತಂ ನಿನ್ನ ಹಿತಗೈಯಲೆಂದೊರೆದೆ
ನಾ ವಿಮಲವಚನ ವಿವರವನೆ ನಾ ಮುಂದರಿವೆ ಪ್ರಿಯನಾಗಿ ಕೇಳ್ವ ನಿನಗೆ

ಯಾವ ಸುರಗಣ ಮಹರ್ಷಿಗಳಾದರೆನ್ನ ಜನ
ನಾವಸ್ಥೆ ತಿಳಿಯಲಾರರು ಸಕಲ ಮುನಿಗಳ್ಗೆ
ದೇವರ್ಕಳಿಗೆ ನಾನೆ ಮೂಲಪುರುಷಂ ನೋಡಲಾರೆನ್ನ ಭುವನದಲ್ಲಿ ೧

ಅಮಿತ ಮಹಿಮನನಾದಿಯಜನೆಂದು ಮೂಲೋಕ
ದ ಮಹೇಶನೆಂದು ತಿಳಿಯುವರಂಥ ಮಾನಿಸರೊ
ಳಮರ್ದ ಮೌಢ್ಯವು ತೊಲಗಿ ಸಕಲ ಪಾಪಗಳಿಂದಲವರು ಬಿಡುಗಡೆವಡೆವರು
ಕ್ಷಮೆ ಬುದ್ಧಿ ಜ್ಞಾನ ಮೋಹದಭಾವ ಕರಣಗಳ
ದಮವು ಸತ್ಯವು ದುಃಖಸುಖವು ಮನವೃತ್ತಿಗಳ
ಶಮವು ಭಯವಿಲ್ಲದಿರುವಿಕೆ ಭಯವು ಜನ್ಮಮರಣಗಳಹಿಂಸೆಯು ಸಮತೆಯು

ಸಂತಸವು ಶಾರೀರ ಕ್ಲೇಶದಾಯಕ ತಪವು
ದಂತುರಿತ ಕೀರ್ತಿಯಪಕೀರ್ತಿಗಳು ದಾನವೇ
ಮುಂತಾದ ಭೂತಗಳ ಭಾವಚಯವೆನ್ನಿಂದಲೇ ಪುಟ್ಟಿ ಪಸರುತಿಹವು
ಚಿಂತಿಸಲಿಕೀ ಪ್ರಜೆಗಳೆಲ್ಲಾರ ಸೃಷ್ಟಿಯೊ ಮ
ಹಾಂತರಾ ಸಪ್ತವರ ಮಹರ್ಷಿಗಳು ನಾಲ್ಕು
ಸಂತಮನುಗಳು ನನ್ನ ಭಾವಿಸುವರೆನ್ನ ಮನದಿಂದಲೇ ಜನಿಸಿರುವರು ೩

ಎನ್ನ ಈ ಮಹಿಮಾವಿಶೇಷವಂ ಸಾಮರ್ಥ್ಯ
ದುನ್ನತಿಯನಾರಿದ್ದ ಹಾಗೆ ತಿಳಿಯುವನಾತ
ನುನ್ನಿಗಂ ಕದಡದಿಹ ಮನಸ್ಥೈರ್ಯದಿಂ ಕೂಡಿದವನಾಗುವೆರಡೆಣಿಸದೆ
ನನ್ನಿಂದಲೇ ಸಕಲ ಜಗವು ನಡೆಯುತ್ತಿರುವು
ದಿನ್ನು ನಾನದರ ಹುಟ್ಟಿಗೆ ಕಾರಣಿಕನಿಹೆಂ
ದುನ್ನಿಸುವ ಜ್ಞಾನಿಗಳು ಪ್ರೇಮದಿಂದೆನ್ನನೇ ಶರಣಾಗಿ ಸೇವಿಸುವರು ೪

ಮನವನಿಂದ್ರಿಯಗಳೆನ್ನೊಳಗಿರಿಸುತಾವಾಗ
ಲನುಗೊಳ್ಳುತೊಬ್ಬರೊಬ್ಬರಿಗರಿದು ದೊರೆಯುತಲಿ
ವಿನಯಧನರಾದ ಸುಜ್ಞರು ಸತತ ಸಂತೋಷವಹಿಸಿ ರಮಿಸುತ್ತಿರುವರು
ಇನಿತೆನ್ನ ಮೇಲೆ ಮಮತೆಯನಿರಿಸಿ ಭಜಿಸುತಿಹ
ಮನುಜರಿಂಗಾನೊಲಿದು ಹಿತದೊಳಾತ್ಮಜ್ಞಾನ
ವನು ಕರುಣಿಸುವೆನೀತರಿಂದವರು ಸುಲಭದಿಂದೆನ್ನ ಪದವಂ ಪಡೆವರು ೫

ಅವರ ಮೇಲಣ ಕನಿಕರದೊಳಾನು ಹೊಳೆಯುತಲಿ
ರುವ ಜ್ಞಾನವೆಂಬ ದೀಪಕನಾಗಿ ಮನಪ್ರೊಗುತ-
ಲವಿವೇಕದಿಂ ಹಬ್ಬಿದಜ್ಞಾನತಮವ ಹೋಗಾಡಿಸುವೆನೆನೆ ಪಾರ್ಥನು
ಲವಲವಿಕೆಯಿಂ ಕೇಳ್ದ ನೀ ಪರಬ್ರಹ್ಮನಿಹೆ
ಪವಿತ್ರನಿಹೆ ಶ್ರೇಷ್ಠ ಧಾಮನಿಹೆ ಶಾಶ್ವತನಿ
ರುವೆ ದಿವ್ಯ ಪುರುಷನಿಹೆ ಜನನವಿರಹಾದಿದೇವತೆಯಿಹೆನು ವಿಭುವಾಗಿಹೆ ೬

ಸರುವ ಮುನಿವರರು ದೇವರ್ಷಿಯಾಗಿಹ ನಾರ
ದರು ದೇವಲನು ವ್ಯಾಸನಸಿತನೇ ಮೊದಲಾದ
ವರು ಪೇಳುವರು ನೀನೆ ವರ್ಣಿಸುವೆ ತಾನಾಗುತಂದವೇಲಾಸವುಗಳ
ಸರಿಯೆಂದು ನಿಜವೆಂದು ತಿಳಿದಿಹೆನು ನೀ ಪೇಳಿ
ದಿರವೆಲ್ಲವುಂ ದೇವ! ನಿನ್ನ ವ್ಯಕ್ತಿತ್ವವುಂ
ಪರಮಾರ್ಥ ತತ್ತ್ವಗಳ ದೇವದಾನವಸಂಘವಾದರೂ ಮನವರಿಯರು ೭

ಜಗಗಳಂ ಸೃಜಿಸುವನೆ ಜಗದೊಡೆಯನೇ ದೇವ
ತೆಗಳ ದೇವನೆ ಜಗವ ಕಾಪಾಡುವನೆ ನೀನೆ
ಸೊಗಯಿಸುವ ನಿನ್ನ ಸ್ವರೂಪವುಂ ನೀನಾಗಿ ತಿಳಿದಿರುವೆಯಲ್ಲದಾರಿಂ
ಬಗೆಹರಿಸಲಳವು ನೀನೀಲೋಕಗಳನಾವ
ಬಗೆಯ ಮಹಿಮಾವಿಶೇಷಗಳ ವಸ್ತುಗಳಿಂದ
ಪೊಗದು ತುಂಬಿಹೆಯಂಥ ನಿನ್ನಯ ವಿಭೂತಿಗಳನೊಂದ ಬಿಡದೆನಗೆ ಪೇಳು ೮

ನಾ ನಿನ್ನನಾವಾಗಲೂ ಹೇಗೆ ಭಕ್ತಿಯಿಂ
ಧ್ಯಾನಿಸುತಲಿಹುದೆಂದು ಯಾವ ವಸ್ತುಗಳಲ್ಲಿ
ನೀನು ಚಿಂತಿಸಲರ್ಹನೆಂದಾನು ಮನವರಿಯಲೆಂತಲ್ಲದೊಡೆ ಯೋಗದಿ
ಊನವಿರದದರಿಂದ ನಿನ್ನಯ ವಿಭೂತಿಗಳ
ಸಾನುರಾಗದೊಳೆನಗೆ ವಿಸ್ತರಿಸು ನಿನ್ನಸೊದೆ
ಸೋನೆ ಸುರಿಯುವ ವಚನಲಾಸ್ಯವೀಂಟುತಲೆನಗೆ ತೃಪ್ತಿಯಿನಿತಿಲ್ಲವೆನಲು ೯

ದೇವಕೀಕಂದನೆಂದಂ ಮುಖ್ಯವಾಗಿರುವ
ದೈವೀವಿಭೂತಿಗಳ ನಿನಗೊರೆವೆನೆನ್ನ ವಿಪು
ಲಾವಸ್ಥೆಗಳಿಗೆ ಈ ವಿಶ್ವದೊಳಗೆಣೆಯಿಲ್ಲ ವಿಸ್ತರಿಸೆ ಕೊನೆಯಿಲ್ಲವು

ಕೇವಣಿಸುತೆಲ್ಲ ಪ್ರಾಣಿಗಳ ಹೃದಯದೊಳಿರುವ
ಪಾವನಾತ್ಮಂ ನಾನೆ ಸಕಲಭೂತಪ್ರತತಿ
ಯಾವರಿಸುತವುಗಳಾದಿಯು ಮಧ್ಯವಂತವೂ ನಾನಾಗಿಹೆನು ಭುವನದಿ ೧೦

ದ್ವಾದಶಾದಿತ್ಯರಲಿ ವಿಷ್ಣುವಾಗಿಹೆ ಜ್ಯೋತಿ
ಯಾದ ವಸ್ತುಗಳಲ್ಲಿ ಸೂರ್ಯನಿಹೆನುಡುಗಳೊಳ
ಗಾದರದ ಚಂದ್ರನಿಹೆ ಮರುತ್ತುಗಳಲಿ ನಾನೆ ಮರೀಚಿಯಾಗಿರುವೆನು
ವೇದಚಯದಲಿ ಸಾಮವೇದವಾಗಿಹೆನು ದೇ
ವಾದಿಯಲಿ ವಾಸವನದಾಗಿರುವೆನಿಂದ್ರಿಯದಿ
ಚೋದಿಸುವ ಮನವಿರುವೆ ಭೂತಸಂಘಾತದಲಿ ಚೈತನ್ಯವಾಗಿರುವೆನು ೧೧

ವಿರತರುದ್ರರೊಳಾನು ಶಂಕರನು ರಾಕ್ಷಸಯ
ಕ್ಷರಲಿ ವಿತ್ತೇಶನು ಕುಬೇರನಿಹೆ ವಸುಗಳೊಳ
ಗುರಿವಗ್ನಿಯಾಗಿಹೆನು ಪರ್ವತಾವಳಿಗಳಲಿ ಮೇರುಗಿರಿಯಾಗಿರುವೆನು
ವರ ಪುರೋಹಿತರೊಳುತ್ತಮ ಬೃಹಸ್ಪತಿಯದಾ
ಗಿರುವೆನು ಸರೋವರಸಮೂಹದೊಳಗಾನು ಸಾ
ಗರವಾಗಿಹೆನು ಮುಖ್ಯ ಸೇನಾಧಿಪತಿಗಳಲಿ ಸ್ಕಂದನಾಗಿಹೆ ನೋಡಲು ೧೨

ಪಾವನ ಮಹರ್ಷಿಗಳೊಳಾನು ಭೃಗು ಮೃದುವಚನ
ದಾವಳಿಯೊಳೋಂಕಾರ ಯಜ್ಞಾದಿಯೊಳು ಜಪವು
ಸ್ಥಾವರಂಗಳಲಿ ಹಿಮವಂತನು ಸಮಸ್ತ ವೃಕ್ಷಗಳಲಶ್ವತ್ಥನಿಹೆನು
ದೇವರ್ಷಿಗಳಲಿ ನಾರದನು ಗಂಧರ್ವರೊಳ
ಗಾವಿಬುಧ ಚಿತ್ರರಥ ಸಿದ್ಧರಲಿ ಕಪಿಲನೈ
ರಾವತವು ಗಜಗಳಲಿ ಪಾಲ್ಗಡಲೊಳುಗಿದಿಹುಚ್ಚೈಃಶ್ರವವು ವಾಜಿಗಳಲಿ ೧೩

ಮಾನಿಸರೊಳರಸ ನಿಶಿತಾಯುಧಗಳಲಿ ಕುಲಿಶ
ಧೇನುವ್ರಜದಲಿ ಕಾಮಧೇನು ಫಣಿಪತಿಗಳೊಳ
ಗಾನು ವಾಸುಕಿ ಸಂತತಿಗಳೀಯೆ ಕಂದರ್ಪ ನಾಗರೊಳನಂತನಿಹೆನು
ವೈನತೇಯನು ಪಕ್ಷಿಗಳಲಿ ಯಾದಸ್ಸುಗಳೊ
ಳಾನು ವರುಣನು ಪಿತೃಗಳೊಳಗರ್ಯಮನು ಬಲುಹ
ದಾನವರ ಮೊತ್ತದಲಿ ಪ್ರಹ್ಲಾದ ಸಂಯಮಿಪರೊಳಗಾನು ಯಮನಾಗಿಹೆ ೧೪

4

ಕಲನೆ ಗೈವರಲಿ ಕಾಲನು ಮೃಗಗಳಲಿ ಸಿಂಹ
ಚಲನೆವುಳ್ಳವುಗಳಲಿ ಪವನ ಶಸ್ತ್ರವ ಪಿಡಿವ
ರಲಿ ರಾಮ ಮೀನುಗಳೊಳಾನು ಮೊಸಳೆಯು ಜಾಹ್ನವಿಯು ಹರಿವ ನದಿಗಳಲ್ಲಿ
ಉಲಿವಾಕ್ಷರದೊಳಕಾರವು ಸಮಾಸದಿ ದ್ವಂದ್ವ
ಲಲಿತಸರ್ಗದೊಳಾದಿಮಧ್ಯಾಂತ ವಿದ್ಯೆಯೊಳ
ಗೊಲಿವಾತ್ಮವಿದ್ಯೆಯು ವಿವಾದದೊಳಗುತ್ತರವು ಕಾಲವಾಗಿಹೆ ಕ್ಷಯಿಸದ ೧೫

ಸರುವ ಫಲಗಳನೀವ ವಿಶ್ವತೋಮುಖ ಸರ್ವ
ಹರನಾದ ಮೃತ್ಯು ಮುನ್ನಡೆಯುಪರೊಳೇಳಿಗೆಯು
ಪರ ನಾರಿಯರೊಳಾನು ಯಶಬುದ್ಧಿ ವಾಕ್ಕಾಂತಿ ಸ್ಮೃತಿಧೃತಿ ಕ್ಷಮೆಯಾಗಿಹೆ
ಒರಲ್ವ ಸಾಮಗಳಲ್ಲಿ ಬೃಹತ್ಸಾಮ ಛಂದವಿ
ಸ್ತರಗಳಲಿ ಗಾಯತ್ರಿ ಋತುಗಳಲಿ ಮಾಧವನು
ಮರೆಮೋಸವೆಸಗುವರೊಳಾನು ದ್ಯೂತವು ಮಾರ್ಗಶೀರ್ಷವಿಹೆ ಮಾಸಗಳಲಿ

ದಿಂಡುಗೆಡದಿಹ ತೇಜವಂತರಲಿ ತೇಜವು
ದ್ದಂಡವ್ಯವಸಾಯವೂ ವಿಜಯವೂ ಸಾತ್ತ್ವಿಕರ
ಮಂಡಲದಿ ಸತ್ತ್ವವಾಗಿಹೆ ಮುನಿಗಳೊಳು ವ್ಯಾಸ ಕವಿಗಳೊಳಗುಶನನಿಹೆನು
ಪಾಂಡುನಂದನರಲ್ಲಿ ಪಾರ್ಥ ಯಾದವರಲ್ಲಿ
ಪುಂಡರೀಕಾಕ್ಷ ವಸುದೇವಜನು ದಮಿಪರಲಿ
ದಂಡವಾಗಿಹೆ ಜಯಿಸುವವರಲ್ಲಿ ನೀತಿಯಾಗಿಹೆ ರಹಸ್ಯೋಕ್ತಿಗಳಲಿ ೧೭

ಮೌನವಾಗಿಹೆ ಜ್ಞಾನವಂತರೊಳು ಪರಿಶುದ್ಧ
ಜ್ಞಾನವಾಗಿಹೆ ಸಕಲ ಭೂತಸಂಘಾತವಂ
ನಾನಾವಿಧದಿ ಪೆರುವ ಬೀಜವಾಗಿಹೆ ಚರಾಚರಗಳೊಳಗೆನ್ನನುಳಿದ
ಏನಿಲ್ಲ ವಸ್ತುಚಯವೆನ್ನ ದಿವ್ಯ ವಿಭೂತಿ
ಯಾನೊಕ್ಕಣಿಸಲಂತ್ಯವಿರದು ನೇಹಿಗನೆಂದು
ಸಾನುರಾಗದಲಿ ನಾ ವಿವರಿಸಿದೆನಿನಿತಾದರವುಗಳಂ ಬಿತ್ತರದಲಿ ೧೮

ಆಯದೊಳಗಾವುದಿಹದಲಿ ಮಹಿತ ಮಹಿಮೆಯಿಂ
ದಾಯತಿಕೆಯಿಂ ಕಾಂತಿಯಿಂ ಕೂಡಿರುವುದದನೆ
ಮಾಯದೆನ್ನಯ ವಿಮಲ ತೇಜಸ್ಸಿನಂಶದಿಂ ಪುಟ್ಟಿರುವುದೆಂದು ತಿಳಿಯು

ವಾಯುಸಂಭವನನುಜ ಹಲವು ವಾದವಿವಾದ
ವಾಯದಿಂದೇನು ಫಲ ಪೇಳಲೇನಿಹುದದನು
ಪಾಯದಿಂ ಯೋಚಿಸಲಿಕೀ ವಿಪುಲ ವಿಶ್ವವನೆ ವ್ಯಾಪಿಸಿಹೆನೇಕಾಂಶದಿ ೧೯

ಹನ್ನೊಂದನೆಯ ಅಧ್ಯಾಯ

ಸೂಚನೆ ॥ ಮುಂದುವರಿಸುತಲಾ ಧನಂಜಯಗೆ ವಸುದೇವ
ನಂದನಂ ಪ್ರಕಟಿಸಿದ ವಿಶ್ವರೂಪವ ಹರಿಹಿ
ನಿಂದದನೆ ಕಂಡು ನರ ಭಯಭಕ್ತಿಯೊತ್ತರದಿ ಕೈವಾರಿಸಿದ ಶೌರಿಯ

ಎನಲರ್ಜುನಂ ಪೇಳ್ದನೆನಗೆ ಹಿತವಾಗಲೆಂ
ದನುಪಮ ರಹಸ್ಯದಧ್ಯಾತ್ಮವಿಷಯವನೊರೆಯ
ಲನುಗೊಳ್ಳುತದನುಂಡಮೇಲೆನ್ನ ಕವಿದಿರುವ ಮೋಹವಡಗಿತು ಮೆಲ್ಲನೆ
ಕೊನರಿ ಬೆಳೆದಿಹ ಸಕಲ ಭೂತಗಳ ಸರ್ಗಲಯ
ದನುವನಚ್ಚಳಿಯದಿಹ ನಿನ್ನ ಮಹಿಮೆಗಳೆಲ್ಲ
ವನು ನಿನ್ನ ಮುಖದಿಂದಲೇ ಲಾಲಿಸುತ್ತಾನು ಕೃತಕೃತ್ಯನಾಗಿರುವೆನು ೧

ಆವ ವಿಧದಲಿ ನೀನು ಬಿತ್ತರಿಸಿ ಪೇಳಿರುವೆ
ಯಾ ವಿಷಯಚಯವೆಲ್ಲವಂತೆಯೇ ಸರಿಯಾದ
ರಾ ವಿಮಲದೈಶ್ವರದ ವಿತತ ರೂಪವ ನಾನು ಕಾಣಬಯಸುತ್ತಿರುವೆನು
ಕಾವ ಕಾದಲನೆ ನಾನದ ನೋಡಲರ್ಹನೆಂ
ಬೀ ವಿಚಾರವನೊಪ್ಪಿ ಮಮತೆಯಿರಲೆನಗದನೆ
ಸಾವಿಲ್ಲದಿಹ ವಿಶ್ವರೂಪವನೆ ತೋರೆನಲು ಶ್ರೀಕೃಷ್ಣನೊಲಿದೆಂದನು ೨

ನಾನಾಕೃತಿಯ ವರ್ಣಗಳ ದಿವ್ಯವಾದನಾ
ನಾ ನಿಧಾನದ ವಿಧದ ರೂಪಸಾಹಸ್ರಗಳ
ನಾನುಭವಿಕನ ತೆರದಿ ನೀ ನಿಟ್ಟಿಸೆನ್ನೊಳಗೆ ಚಿತ್ರವೇಕತ್ರಿಸುತಲಿ
ಬಾನಮಣಿಯಾದಿತ್ಯರಂ ವಸುಗಳಂ ರುದ್ರ
ರಂ ಸಮಿರ್ದಿಹ ಮರುತರಶ್ವಿನಿಕುಮಾರಕರ
ನೀನು ನೋಡಂತೆ ಹಿಂದೆಂದು ಕಾಣದನೇಕ ಸೋಜಿಗದ ವಸ್ತುಗಳನು ೩

ನನ್ನ ದೇಹದೊಳೊಬ್ಬುಳಿಸುತಲಾಳ್ದಿರುವ ಸಂ
ಪನ್ನ ಸಚರಾಚರದ ಜಾಗತೀವಿಸ್ತರವ
ನಿನ್ನೇನ ದಿಟ್ಟಿಸಲಿಕಾಸೆಪೊತ್ತಿಹೆಯುವುಗಳೆಲ್ಲವಂ ನೀ ನಿರುಕಿಸು
ನಿನ್ನ ಈ ಭೌತಿಕದ ಕಂಗಳಿಂಗೆನ್ನ ಈ
ಬಿನ್ನಾಣ ಗೋಚರಿಸಲಾರದೆಂದೇ ನಿನಗೆ
ಸನ್ನುತದ ದಿವ್ಯದೃಷ್ಟಿಯುಸೀವೆನೇತರಿಂದೆನ್ನೈಶ್ವರೀಯೋಗವ ೪

ನೋಡು ಸಂಜಯ ಮುಂದುವರಿದನಿಂತೆಂದು ಹರಿ
ಯಾಡುತೆ ಮಹಾಮಹಿಮನಾದವಂ ಪಾರ್ಥನಿಗೆ
ಜೋಡಿದೋಲುತ್ಕೃಷ್ಟತಮವಾದ ತನ್ನ ಪರರೂಪವಂ ಪ್ರಕಟಿಸಿದನು
ಪಾಡಲರಿಯದನೇಕ ವಕ್ತ್ರನಯನದ ಜೆರಗು
ಮಾಡುತಿಹ ವಿವಿಧ ನೋಟದನೇಕ ಝಗಝಗಿಪ
ಮೋಡಿಯಾಭರಣಗಳ ಲೆಕ್ಕವಿಲ್ಲದ ಪೊತ್ತ ದಿವ್ಯವಾದಾಯುಧಗಳ ೫

ರುಚಿರಮಾಲ್ಯಾಂಬರವ ಧರಿಸಿರುವ ಸೌರಭ್ಯ
ಪ್ರಚುರ ಗಂಧಾನುಲೇಪನದ ಸರ್ವಾಶ್ಚರ್ಯ
ಖಚಿತನಾಗಿಹ ಕೊನೆಗಳಿಲ್ಲದಿರುವೆಲ್ಲೆಡೆಯು ವದನಾಬ್ಜಕದ ದೇವನ
ವಚನಸರಣಿಗಗಮ್ಯವೆನಲು ಸೂರ್ಯಸಹಸ್ರ
ನಿಚಯುವಾಕಾಶದೊಳಗೊಮ್ಮೆಗೇ ಹೊಮ್ಮಿದರೆ
ಕಚಿತವಾಗುವ ಪ್ರಕಾಶದ ಪಿಂಡದಂತವನ ಭಾಸವಿದ್ದಿತು ಬೆಳಗುತೆ ೬

ಆಗ ದೇವನ ವಿಪುಲಕಾಯದೊಳಗರ್ಜುನಂ
ತಾಗಿ ತುಳುಕಿಹನೇಕವಿಧಗಳಿಂ ಪ್ರವಿಭಕ್ತ
ವಾಗಿ ಹಬ್ಬಿಹ ಸಕಲಲೋಕವಿಸ್ತರವನೊಂದೆಡೆಯೊಳಿರುವುದ ಕಂಡನು
ಸೋಗಿನಿಂ ಬೆರಗಾದ ಸಿತವಾಹನಂ ಮೈಯ
ಮೇಗೆ ಪೊಂಪುಳಿಯೆತ್ತಿ ಮಣಿಮಕುಟದೆಸೆವ ತಲೆ
ವಾಗಿ ಪದಪಂಕಜಕೆ ಕೈಮುಗಿದು ಭಕ್ತಿಯಾವೇಶದಿಂದಲಿ ಸ್ತುತಿಸಿದ ೭

ದೇವ! ನಿನ್ನಯ ಶರೀರದಿ ಸರ್ವಭೂತಗಳ
ದೇವತಾದಿಗಳ ಕಮಲಾಸನದೊಳಿರುವೀಶ
ನಾವಿಮಲನ ಪ್ರಜಾಪತಿಯ ದಿವ್ಯರ್ಷಿಗಳನುರಗಗಳ ನೋಡುತಿಹೆನು

ನೀವಿರುವನೇಕ ಪದಹಸ್ತದಲಿ ವಕ್ತ್ರನೇ
ತ್ರಾವಳಿಲಿ ಸರ್ವತ್ರಸಂಖ್ಯವಾಗಿಹ ರೂಪ
ವಾವರಿಸಿಹನೆ ನಿನ್ನಯಾದಿಮಧ್ಯಾಂತಗಳ ವಿಶ್ವರೂಪನೆ ಕಾಣೆನು ೮

ಧರಿಸಿ ಮಣಿಮಯ ಕಿರೀಟವ ಗದೆಯ ಚಕ್ರಮಂ
ಮಿರುಗುತಿರುವೆಲ್ಲೆಡೆಯ ತೇಜಸ್ಸರಾಶಿಯಿಂ
ದುರಿವನಲಸೂರ್ಯರ ದ್ಯುತಿಯಂತೆ ತಿಳಿಯಲಾರದ ನೋಡಲಾಗದಿರುವ
ಪರಮ ಮೂರ್ತಿಯ ನಿಟ್ಟಿಸುವೆನರಿಯಬೇಕಾದ
ಪರಬ್ರಹ್ಮವಿಹೆ ನೀನು ನಾಶವಿರದವ ಜಗಕೆ
ಸಿರಿದಾಗಿಹಾಶ್ರಯಸ್ಥಾನವಿಹೆ ಶಾಶ್ವತದ ಧರ್ಮರಕ್ಷಕನಾಗಿಹೆ ೯

ಆನರಿಯುವೆನು ಸನಾತನಪುರುಷನೆಂದಿಲ್ಲಿ
ನೀನಾದಿಮಧ್ಯಾಂತರಹಿತನತಿ ವಿಕ್ರಮಂ
ಭಾನುಶಶಿಗಳೆ ನಿನ್ನ ನೇತ್ರಯುಗ್ಮವು ಬಾಹುಗಳನಂತವಾಗಿರುವುವು
ತಾನಗ್ನಿಯಂತೆ ಧಗಧಗಿಪ ಮುಖಮಂಡಲವ
ನಾನುತಿಹ ನಿಜಕಾಯಕಾಂತಿಯಿಂ ಜಗವ ಬಿಡ
ದೇ ನೋಯಿಸುವ ತಪಿಸುತಿಹ ನಿನ್ನ ನಿಟ್ಟಿಸುವೆ ವಿಸ್ಮಯಾವಿಷ್ಟನಾಗಿ ೧೦

ಆಕಾಶಭುವಿಗಳಂತರವ ದಶದಿಕ್ಕುಗಳ
ನೇಕ ರೂಪದಿ ನಿಂದು ವ್ಯಾಪಿಸಿಹೆಯೆಲ್ಲೆಡೆಲಿ
ಲೋಕತ್ರಯವೆ ನಿನ್ನಯದ್ಭುತದ ಪರಿಜಕಾಣುತಲಿ ಕಳವಳಿಸುತಿಹುದು
ಈ ಕರಾಳ ಸ್ವರೂಪದ ನಿನ್ನಯುದರವ ದಿ
ವೌಕಸರು ಪೊಗುತಿಹರು ಭೀತಿಯಿಂ ಕೈಮುಗಿಯು
ತೇಕಭಾವದಿ ಭಜಿಸುತಿಹರು ಸಿದ್ಧಮಹರ್ಷಿಗಳು ಸ್ತೋತ್ರಗೈಯುತಿಹರು ೧೧

ಆದಿತ್ಯರುದ್ರವಸುಗಳು ಸಾಧ್ಯಮರುತಾಶ್ವಿ
ನ್ಯಾದಿಗಳು ಗಂಧರ್ವ ಯಕ್ಷ ದಾನವರು ವಿ
ಶ್ವೇದೇವತೆಗಳೆಲ್ಲ ವಿಸ್ಮಿತಾನನರಾಗಿ ನಿನ್ನನೇ ನೋಡುತಿಹರು
ಯಾದವಕುಲಾವತಂಸನೆ ನಿನ್ನ ಮಹದ್ರೂಪ
ವಾದರಿಸಿ ಬಹುವಕ್ತ್ರನೇತ್ರಗಳ ಬಹು ಬಾಹು
ಪಾದೋರುಗಳ ಬಹೂದರ ದಂಷ್ಟ್ರಗಳ ಭಯಂಕರವಿರಲು ನಿಟ್ಟಿಸುತಲಿ ೧೨

ಜಗವೆ ಕಂಗೆಟ್ಟಿಹುದು ಮುಗಿಲ ಮುಟ್ಟುವನೇಕ
ಜಗಜಗಿಪ ಬಣ್ಣಗಳ ಬಣ್ಣಿಗೆಯ ವಿತತಾನ
ನಗಳ ದೀಪ್ತವಿಶಾಲ ನಯನಗಳ ನಿನ್ನಿರವ ಕಂಡಾನು ತಳಮಳಿಸುತೆ
ಬಗೆಗಾಣದಿಹೆನು ಧೃತಿಗುಂದಿ ಶಮವೊಂದದಿಹೆ
ಜಗನ್ನಿವಾಸನೆ ಪ್ರಲಯಕಾಲಾನಲನ ತೆರದೊ
ಳೊಗುವ ಜ್ವಾಲೆಯ ಕೋರೆದಾಡೆಯಿಂ ಭೀಕರದ ನಿನ್ನ ಮುಖಗಳ ದಿಟ್ಟಿಸಿ ೧೩

ದಿಕ್ಕು ತೋಚದೆ ಸುಖದ ಲವವಿರದೆ ಬೇಯುತಿಹೆ
ನಕ್ಕಜದಿ ಸಂತುಷ್ಟನಾಗು ಧೃತರಾಷ್ಟ್ರಕನ
ಮಕ್ಕಳೆಲ್ಲರು ರಾಜಸಂಘದಿಂ ಕರ್ಣ ಭೀಷ್ಮ ದ್ರೋಣ ಮುಖ್ಯರಿಂದ
ಮಿಕ್ಕೆಮ್ಮ ಬಲದ ನಾಯಕರನೊಡಗೂಡುತಲಿ
ಹೆಕ್ಕಳಿಸಿ ನಿನ್ನ ದಂಷ್ಟ್ರಾಕರಾಲದ ವದನ
ವೊಕ್ಕಿ ಪೊಗುತಿಹರು ಪಲ್ಲುಗಳೆಡೆಯೊಳುಡಿದ ತಲೆಯೋಡಿನಲಿ ಸುರಿರಕುತದಿ

ಹೇಗೆ ನದಿಗಳನೇಕ ವಾಹಗಳು ಹರಿಯುವವೊ
ಸಾಗರವನೇ ಬಿಡದೆ ಹೇಗೆ ಹುಲುನೊರಜುಗಳು
ಸಾಗುವವೊ ಧಗಧಗಿಸುವನಲನಂ ಬೆಂಬತ್ತಿ ತಮ್ಮಯ ವಿನಾಶಕಾಗಿ
ಹಾಗೆಯಾ ನರಲೋಕ ವೀರರಾದರು ತಾವೆ
ವೇಗದಿಂ ನಿನ್ನಯ ಜ್ವಲಿಪಾನನದೊಳಿರುಕಿ
ಪೋಗುವರು ನೀನವರ ಮಿಗೆ ಸಕಲ ಲೋಕವನೆ ನುಂಗಿ ಚಪ್ಪರಿಸುತಿರುವೆ ೧೫

ನಿನ್ನ ತೀಕ್ಷ್ಣದ ಕಿರಣಜಾಲಗಳು ಸರ್ವ ಜಗ
ವನ್ನೆ ಪುದಿದುರುಬೆಯಿಂ ಸುಡುತಿಹವು ಡಾವರಿಸಿ
ಬನ್ನಬಟ್ಟಿಹರೆಲ್ಲ ದೇವವರನೇ! ಶಾಂತನಾಗಿ ಪ್ರಸನ್ನನಾಗು
ಚೆನ್ನಿಗನೆ ನಮಿಸುತಿಹೆ ನೀನಾರು ಪೇಳೆನಗೆ
ಮುನ್ನೆಲ್ಲದಕೆ ಕರ್ತೃಕಾರಣನದಾಗಿರುವ
ನಿನ್ನಿರವ ತಿಳಿಯಲಿಚ್ಛಿಸುವೆ ನಾನರಿತಿಲ್ಲವಾಗಿ ನಿನ್ನಯ ನೆಲೆಯನು ೧೬

ನೀಲಮೇಘಶ್ಯಾಮನೆಂದ ನಾನೇ ಜಗಕೆ
ಕಾಲನಾಗಿಹೆ ಸರ್ವರಂ ಕೊಂದು ಮಡುಹಲ್ಕೆ
ಲೋಲುಪ್ತಿಯಿಂದಲುಜ್ಜುಗಿಸಿರುವೆ ನಿನ್ನನುಳಿದರಿಬಲದ ಯೋಧರೆಲ್ಲ

ಕಾಲವಾಗಲಿಕಿಹರು ಪಾರ್ಥನದರಿಂದ ನೀ
ನೇಳು ಜಸವಡೆ ರಿಪುಗಳಂ ಮಥಿಸಿ ರಾಜ್ಯಸಿರಿ
ಯೋಲೈಸಿ ಬಿನದಿಸಿವರೆಲ್ಲರೂ ನನ್ನಿಂದ ಮೊದಲೆ ಸಂಹೃತರಾಗಿರೆ ೧೭

ನೀನಿದಕೆ ಲೋಕದಿ ನಿಮಿತ್ತಮಾತ್ರಕನಾಗು
ದ್ರೋಣ ಭೀಷ್ಮ ಜಯದ್ರಥಾದಿ ವೀರರನೇಕ
ರಾನೆ ಮಡುಹಿದೆ ಚಿಂತಿಸದೆ ಸವರು ಕಾಳಗದಿ ಶತ್ರುಗಳ ಗೆಲ್ಲಲಿರುವೆ
ಮೌನಿವರ ಸಂಜಯಂ ಪೇಳ್ದನೀ ವಾಕ್ಯಗಳ
ನಾ ನರಂ ಕೇಳ್ದು ಕೈಮುಗಿದು ನಡುಗುತೆ ನಮಿಸಿ
ತಾನತೀವ ಬೆದರ್ಕೆಯಿಂದಳ್ಕಿ ಗದ್ಗದ ಸ್ವರದಿ ಮಗುಳಿಂತೆಂದನು ೧೮

ದೇವನೇ! ನಿನ್ನ ಕೀರ್ತನೆಯಿಂದ ಲೋಕಗಳೆ
ಪಾವನವು ಸಂತಸವ ನೀಡುತಿವೆ ರಾಕ್ಷಸರು
ಸಾವರಿಸದೋಡುವರು ದೆಸೆದೆಸೆಗೆ ಹೆದರಿ ಸಿದ್ಧರ ಸಂಘ ವಂದಿಸುವುದು
ಆವಾದಿ ಕರ್ತೃಜನಿಗೇ ಕರಣವಾಗುತಾ
ರೈವ ಮಹಿಮನಿಗವರು ನಮಿಸದಿರ್ಪರದೆಂತು
ದೇವೇಶ! ಜಗನ್ನಿವಾಸನೆ! ನೀನೆ ಬ್ರಹ್ಮನಿಹೆ ಸದಸತ್ತಿನಿಂ ಮಿಗಿಸಿಹ ೧೯

ನೀನಾದಿದೇವಂ ಪುರಾಣಪುರುಷಂ ಜಗಕೆ
ನೀನೆ ಮುಖ್ಯಾಧಾರ ತಿಳುವಳಿಕೆ ತಿಳಿವಾತ
ನೀನೆ ಪರಪದವಿ ನಿನ್ನಿಂದಲೇ ವಿಶ್ವವಿದು ತುಂಬಿಹುದನಂತರೂಪ
ನೀನೆ ವಾಯ್ವಗ್ನಿಯಮವರುಣ ಶೀತಲರುಚಿಯು
ನೀನೆ ಪ್ರಪಿತಾಮಹನದಾದ ಪ್ರಜಾಪತಿಯು
ನಾನು ಮಗುಮಗುಳೆ ನಿನ್ನಡಿದಾವರೆಗೆ ನಮಿಪೆ ನಮಿಪೆ ನೂರಾರುಬಾರಿ ೨೦

ನಿನಗೆ ಹಿಂಗಡೆ ಮುಂಗಡೆಗಳಿಂದ ವಂದಿಸುತಿ
ಹೆನು ಸಕಲ ಕಡೆಗಳಿಂದಲಿ ವಂದಿಸುವೆನು ಕನ
ವಸಿಪ ವೀರ್ಯನಪಾರವಿಕ್ರಮಿಯು ನೀ ಸರ್ವದಲಿ ಪುದಿದು ಸರ್ವನಿರುವೆ
ವಿನುತ ಮಹಿಮೆಯನರಿಯದಾನು ಪ್ರಮಾದದಿಂ
ಕಿಸಿಸಿಸಿಂ ಕೂರ್ಮೆಯಿಂದಾಳವಾಡಿದ ಕಣ್ಣ
ತನಿಗೆಳೆಯ ಹೇಯಾದವಿತ್ಯಾದಿ ಕೆಡುನುಡಿಗಳನ್ನೆಣಿಸದಿರು ದೇವನೆ ೨೧

ಪರಿಹಾಸಕಾಗಿ ನಾ ವಿಹರಿಸುತ್ತಿರಲು ಮಲ-
ಗಿರಲು ಕುಳಿತಿರಲುಣ್ಣುತಿರಲೊಬ್ಬನಿರಲು ಕೆಲ
ರೆರೆಯುರೆದುರೊಳೆ ವಿಧವಿಧವಮಾಸಗೊಳಿಸಿದುದನೆಲ್ಲ ಕ್ಷಮಿಸಪ್ರಮೇಯ
ಚರಾಚರದ ಜಗಕೆ ನೀ ಪಿತನಿರುವೆ ಗುರುವಿರುವೆ
ಹಿರಿಯನಿಹೆ ಪೂಜ್ಯನಾಗಿಹೆ ನಿನಗೆ ಸಮವಾದ
ಪರೆ ಲೋಕತ್ರಯದೊಳಿಲ್ಲೆನಲು ನಿನ್ನಿಂದ ಹೆಚ್ಚಿನವರಾರಪ್ರತಿಮನೆ ೨೨

ಅದರಿಂದ ಜಗದೊಡೆಯ ಸ್ತೋತ್ರಪಾತ್ರನೆ ನಿನ್ನ
ಪದಕೆರಗಿ ಪೈಬಾಗಿ ಸಂತೋಷಗೊಳಿಸುವೆನು
ಮುದದಿಂದ ನೀನೆನ್ನ ಪುತ್ರನಂ ಪಿತನಂತೆ ಮಿತ್ರನಂ ಮಿತ್ರನಂತೆ
ಚದುರೆಯಂ ಕೂರ್ಪನೊಲ್ ಕ್ಷಮಿಸಿ ಮನ್ನಿಸಬೇಕು
ಹೆದರಿ ಹಳವಳಿಸುತಿಹುದೆನ್ನ ಮನ ಮೋದವೆ
ತ್ತಿದರು ನಿನ್ನದ್ಭುತದಪೂರ್ವರೂಪವ ಕಂಡು ದೇವ! ಪ್ರಸನ್ನನಾಗು ೨೩

ಎಂದೆ ನನಗಾ ಕೆಳೆತನದ ಜೋಹವನೆ ತೋರು
ಸಂದಣಿಸಿರುವ ಶಂಖಚಕ್ರಮಣಿಮಕುಟಾದಿ
ಯಿಂದ ರಂಜಿತ ಚತುರ್ಭುಜದ ತನು ದೇಹದಲಿ ವಿಶ್ವರೂಪವ ಮಾಯಿಸಿ
ಸುಂದರನೆ ನಾ ಕಾಣಲಾಶಿಸುವೆನೆನಲಾ ಮು
ಕುಂದನೆಂದನನಂತವಾದ ವಿಶ್ವಾಕಾರ
ದಿಂದ ರಾಜಿಪ ಮೊದಲನೆಯದಾದ ನಿನ್ನ ಹೊರತಾರೆಂದಿಗೂ ನೋಡದ ೨೪

ವಿಮಲ ತೇಜೋಮಯದ ಪರರೂಪಮಂ ನಿನ್ನೊ
ಳಮಿತ ಪ್ರೇಮದಿ ತೋರ್ದೆನೆನ್ನಾತ್ಮಯೋಗದಿಂ
ದ ಮಹಿಯೊಳಿಂಥ ರೂಪವ ವೇದಯಜ್ಞಾಧ್ಯಯನಗಳಿಂ ತೀವ್ರತಪದಿಂ
ದಮಶಮಾದಿ ಕ್ರಿಯೆಗಳಿಂದಲಾರಾದರದ
ನಮರಿ ದಿಟ್ಟಿಸಲಾರರೆಂದಿಗೀ ಭುವಿಯೊಳನು
ಪಮ ಭಾಗ್ಯವಂತನಾಗಿಹ ನಿನ್ನನುಳಿದಿಹದಿ ಪಾಂಡುನಂದನ ಪರಿಕಿಸೆ ೨೫

ಈ ತೆರದ ನನ್ನ ಕಡು ಭೀಕರಾಕಾರಮಂ
ಕಾತರಿಸದಿರು ನೋಡಿ ನಿನ್ನ ಮನದಿರವದಕೆ
ಸೋತು ವಿಕಲಿತವಾಗದಿರಲಿ ಬೆಚ್ಚದೆಲೆ ನೀ ನಲ್ಮೆಯಿಂ ಮಗುಳೆನ್ನಯ

ಪ್ರೀತರೂಪವನಿದೋ ನೋಡು ಸಂಜಯ ಪೇಳ್ದ
ನಾತನಿಂತೆಂದು ತನ್ನಯ ಮೊದಲ ಸೌಮ್ಯವಪು
ವಾತು ತೋರಿದ ಭೀತನಾದ·ಪಾರ್ಥನ ಸಂತವಿಸುತೆ ವೈದಡವಿ ಬಳಿಕ ೨೬

ಕುಂತಿಯಾತ್ಮಜನೊರೆದ ನಿನ್ನ ಈ ಮಾನುಷದ
ಶಾಂತದೇಹವ ಕಂಡು ನಾ ಸಮಾಹಿತಚಿತ್ತ
ವಾಂತು ಚೇತರಿಸಿರುವೆನೆನೆ ಕೃಷ್ಣನೆಂದ ನೀನಿಂದು ದಿಟ್ಟಿಸಿ ಭೀತಿಯಿಂ
ತಾಂತವಾಗಿಹ ಸುದುರ್ದರ್ಶರೂಪವ ದೇವ-
ಸಂತತಿಗಳೇ ಸತತ ಕಾಣಬಯಸುತ್ತಿಹರು
ಸಂತತವು ವೇದತಪದಾನಯಜ್ಞಾದಿಕ್ರಿಯಾಶತಗಳಿಂದಲದನೆ ೨೭

ಜಗದೊಳಾರೂ ಕಾಣೆ ಶಕ್ತರಲ್ಲವನನ್ಯ
ಬಗೆಯ ಭಕ್ತಿಯೊಳೆನ್ನ ನೈಜತೆಯನರಿಯಲಿ
ಕ್ಕೊಗುಮಿಗೆಯ ಜೋಹ ನೋಡಲಿಕೆನ್ನ ತತ್ತ್ವದಿಂದಲಿ ಪ್ರವೇಶಿಸಲಪ್ಪುದು
ಮಿಗೆ ಭುವಿಯೊಳಾರೆನ್ನ ಪರನಾಗಿ ವಿಹಿತ ಕ
ರ್ಮಗಳನರ್ಪಿಸಿ ಭಕ್ತನಾಗಿ ವಿಷಯದ ಜಾಲ
ಕಗವಡದೆ ಪ್ರಾಣಿಚಯದೊಳು ವೈರವಿರಿಸದವನೆನ್ನ ಪದವಂ ಪಡೆಯುವ ೨೮

ಹನ್ನೆರಡನೆಯ ಅಧ್ಯಾಯ

ಸೂಚನೆ ॥ ವಾಸುದೇವಂ ಮುಂದೆ ವಿವರಿಸಿದ ಪಾರ್ಥನಿಂ
ಗೀಸುವಿಧದೊಳಗೆನ್ನ ಮೇಲೆ ದೃಢಭಕ್ತಿಯುಲು
ಪಾಸನೆಯೆ ಶ್ರೇಷ್ಠವಿಹುದೆಂದು ಪರಭಕ್ತಿಯೋಗವನು ವಿಸ್ತರದಿಂದಲಿ

ಭಾವನಂ ಕೇಳ್ದನರ್ಜುನ ನಿನ್ನನಾವಾಗ
ಲಾವ ಭಕ್ತರು ಭಕ್ತಿಯಿಂ ಪೂಜಿಸುತ್ತಿಹರೊ
ಯಾವ ಮುನಿಗಳು ನಿನ್ನಯವ್ಯಕ್ತರೂಪವಂ ಯೋಗದಿಂ ಭಾವಿಸುವರೊ
ಕೋವಿದರದಾರಿವರೊಳೆನಲು ಕಣ್ಣನುಸಿರ್ದ
ನೀವಿ ನೋಡಲಿಕಿವರೊಳಾರೆನ್ನನತಿ ಪ್ರೀತಿ
ಯಾವೇಶದಿಂ ಭಜಿಸುತಿಹರಂಥ ಶ್ರದ್ಧಾನ್ವಿತರೆ ಹೆಚ್ಚಿನವರೆಂದನು ೧

ಯಾರಿಲ್ಲಿ ಗೋಚರಿಸದಿಹ ಸರ್ವವ್ಯಾಪಿಯಿಹ
ತೋರಲಳವಿರದಿಹ ಗಣನೆಗೆಟಕದಿಹ ಚಲಿಸ
ಲಾರದಿಹ ಕೂಟಸ್ಥನಾಗಿರುವ ನಿತ್ಯವಾಗಿರುವ ನಿರ್ಗುಣಬ್ರಹ್ಮನ
ಸಾರಿಂದ್ರಿಯಗಳ ಬಿಗಿವಿಡಿದೆಲ್ಲೆಡೆಯುಲಿಮತಿ
ಯೋರಗೆಯೊಳಿರಿಸಿ ಸಕಲ ಪ್ರಾಣಿಗಳಲಿ ಹಿತ
ದೋರಿ ವಿಧಿಯಿಂದುಪಾಸಿಸೆ ನನ್ನ ಪದವಿಯನೆ ಪೊಂದುವರು ಭಾವಬಲದಿ ೨

ಕರಣಗಳಿಗೆಟಕದಿರುವಾ ಪದವಿ ದೇಹಿಗಳಿ
ಗರಿಯೆ ಬಹು ಕಷ್ಟವಿರಲವ್ಯಕ್ತದಲಿ ಮನವ
ನಿರಿಸುತಲಿ ಸತತ ಭಾವಿಸುವಂಥವರಿಗದರೊಳಧಿಕವಪ್ಪುದು ಕ್ಲೇಶವು
ಸರುವ ಕರ್ಮಗಳಾರು ನನಗೊಪ್ಪಿಸುತೆ ನನ್ನ
ಪರರಾಗನನ್ಯಗತಿಯಿಂದಲೊಂದೇ ಮನದಿ
ನಿರತ ಧ್ಯಾನಿಸುತೆನ್ನನರ್ಚಿಸುತ್ತಿಹರಂಥ ನನ್ನೊಳಾಸಕ್ತ ಮನದ ೩

ಅವರ ನಾ ತಡವಿಲ್ಲದಲೆ ಮೃತ್ಯುರೂಪಕದ
ಭವದ ಸಾಗರದಿಂದಲುದ್ಧರಿಸುವೆನು ಕೃಪಾ
ಪ್ಲವಗದಿಂದದರಿಂದ ನೀನೆನ್ನೊಳೇ ತನ್ನ ಮನವ ಬುದ್ಧಿಯನಿರಿಸಲು
ತವೆ ತನುವ ತೊರೆದ ಮೇಲಾದರೂ ನನ್ನೊಳೇ
ಕವಿದಿರುವೆ ಈ ವಿಷಯದಲ್ಲಿ ಸಂಶಯಿಸದಿರು
ತವಕದಿಂದೆನ್ನೊಳೇ ಮನವ ಸ್ಥಿರವಾಗಿ ನೀ ನಿಲಿಸಲಿಕಶಕ್ತನಿರಲು ೪

ತವಿದಿರುವ ಮನದೊಳಭ್ಯಾಸಯೋಗದಿ ಮೆಲ್ಲ
ನವಗಡಿಸದೆನ್ನ ಪಡೆಯಲು ಬಯಸು ಮೇಣಂಥ
ಹವಣವೂ ಸಾಧ್ಯವಿಲ್ಲದಿರಲ್ಕೆ ನನ್ನ ಪ್ರೀತ್ಯರ್ಥದಲಿ ಕರ್ಮವೆಸಗು
ನವೆಯದಂತಹ ಕರ್ಮಚರಣೆಯಿಂ ಸಿದ್ಧಿಸಂ
ಭವಿಸುವುದು ಜ್ಞಾನರೂಪದಿ ಮುಂದಕಂತಿಪ್ಪ
ಭವಣೆಯುಳವಲ್ಲದಿರೆ ಸರ್ವಕರ್ಮದ ಫಲವ ತ್ಯಜಿಸು ನಿಯತಾತ್ಮನಾಗಿ ೫

ಜ್ಞಾನವಭ್ಯಾಸದಿಂ ಮೇಲು ವಿಜ್ಞಾನದಿಂ
ಧ್ಯಾನ ಹೆಚ್ಚೆನದಿವುಗಳೆರಡರಿಂ ಕರ್ಮಗಳ
ನಾನುತಿಹ ಫಲದ ತ್ಯಾಗವೆ ಹಿರಿದು ಬಳಿಕವಗೆ ಶಾಂತಿಯೆಡರಿಡದೆ ಬಹುದು

ತಾನಾವ ಪ್ರಾಣಿಗಳ ಮೇಲೆ ಹಗೆಯಿರಿಸದಭಿ
ಮಾನ ತೊಡೆಯುತಲೆಲ್ಲರಂ ಮೈತ್ರಿ ಕರುಣೆಯಿಂ
ಮಾನಿಸುತೆ ಸುಖದುಃಖಗಳಲಿ ಸಮನಾಗಿ ಸೈರಣೆಗೊಂಡು ಸುಖಿಸನವನು ೬

ಸತತ ಸಂತುಷ್ಟನಾಗಿಹ ಸುದೃಢ ನಿಶ್ಚಯದ
ಹಿತದೊಳೆನಗೊಪ್ಪಿಸಿದ ಚಿತ್ತಬುದ್ಧಿಯ ನಿಗ್ರ
ಹಿತ ಮನೋವೃತ್ತಿಗಳ ಭಕ್ತನೇ ಜಗದೊಳೆನಗತ್ಯಂತ ಪ್ರಿಯನಾಗಿಹ
ಖತಿ ಬೆದರಿ ಕುಬ್ಬೆಗಳಿವಿಲ್ಲದಿಹನಾರಿಂದ
ವಿತತಲೋಕವೆ ತಳಮಳಿಸುತಿಲ್ಲವಾರು ತಾ
ನತುಳ ಧೃತಿಯಲಿ ಲೋಗರಿಂದಲುದ್ವೇಗಗೊಳುತಿಲ್ಲವಾತನೆ ಪ್ರಿಯನಿಹೆ ೭

ಯಾವನೇನಂ ಬಯಸದಿಹನೊ ಶುಚಿಯಾಗಿಹನೊ
ಕೋವಿದನುದಾಸೀನನೋ ವ್ಯಥಿಸದಿಹನೊ ತಾ
ನಾವ ದುರ್ವೃತ್ತಿಗಳ ಕೈಗೊಳನೊ ಮುದದ್ವೇಷ ಶೋಕಕಾಮವ ಕೊಳ್ಳನೋ
ಸಾವರಿಸದಶುಭಶುಭಗಳ ತ್ಯಜಿಸುತಿಹನವನೆ
ಭಾವುಕನು ಪ್ರಿಯನಿರುವ ಯಾರು ರಿಪುಮಿತ್ರರಲಿ
ಸೋವಿಬಹ ಸುಖದುಃಖ ಶೀತೋಷ್ಣಗಳಲಿ ಸಮನಾಗಿ ಸಂಗವನೊಂದದೆ ೮

ಯಾರು ನಿಂದಾಸ್ತುತಿಗಳಿಗೆ ತೂಷ್ಣಿಯಾಗಿರುವ
ಕೋರದೇನಂ ಸಿಕ್ಕಿದರಲಿ ತೃಪ್ತನಿಹ ಮನೆ
ಮಾರುಗಳೆ ಮುಂತಾದ ಹಂಬಲಿರದಚಲಮತಿಯಿಹ ಮನುಜನೇ ಪ್ರಿಯನಿಹ
ಸಾರತರ ಧರ್ಮಸಮ್ಮತವಾದ ಮಿಗೆ ಸುಧಾ
ಪೂರವಾದೀ ವಚನಗಳನೆನ್ನೊಳಾಸಕ್ತಿ
ದೋರಿ ಶ್ರದ್ಧೆಯ ವಹಿಸುತಾರುಪಾಸಿಸುವರಾ ಭಕ್ತರೆನಗತಿ ಪ್ರೀಯರು ೯

ಹದಿಮೂರನೆಯ ಅಧ್ಯಾಯ

ಸೂಚನೆ ॥ ಶ್ರೀವಧೂರಮಣನೆಂದಂ ಶ್ವೇತವಾಹನಗೆ
ಸಾವರಿಸಿ ಕ್ಷೇತ್ರಕ್ಷೇತ್ರಜ್ಞರಿರವಂ ಮುಂದ
ೞಾ ವಿಷಯವಿಸ್ತರವ ಕ್ಷೇತ್ರಕ್ಷೇತ್ರಜ್ಞಯೋಗವನಿಲ್ಲಿ ವಿವರಿಸುತಲಿ



ಪತ್ರೀಂದ್ರವಾಹನಂ ಪೇಳ್ದನೀ ದೇಹವಂ
ಕ್ಷೇತ್ರವೆನ್ನುವರದನೆ ಬೇರಾಗಿ ತಿಳಿದವನ
ಕ್ಷೇತ್ರಜ್ಞನೆನ್ನುವರು ಸಕಲಕ್ಷೇತ್ರಗಳೊಳಿಹ ಕ್ಷೇತ್ರಜ್ಞನಾನೆನ್ನುತೆ
ಸುತ್ರಾಮನಂದನನೆ! ತಿಳಿಯುರ್ವ ಕ್ಷೇತ್ರಜ್ಞ
ಕ್ಷೇತ್ರಗಳ ಸರಿಯಾದ ತಿಳಿವೆ ಸುಜ್ಞಾನವಾ
ಕ್ಷೇತ್ರವಾವುದು ಯಾವ ಧರ್ಮಸ್ವಭಾವ ಸುವಿಕಾರಗಳನೊಳಗೊಂಡಿದೆ ೧

ಆರಿಂದಲೇತರದು ಬಂದಿಹುದು ಕ್ಷೇತ್ರಜ್ಞ-
ನಾರವನ ಶಕ್ತಿಯೇತರದೆಂಬುದೆಲ್ಲವಂ
ಸಾರಿ ಹೇಳುವೆನೆನ್ನ ಕೇಳದನೆ ಮುನಿವರರು ವೇದೋಪನಿಷದಾದಿಯು
ಭೂರಿವಿಧದಿಂದ ನಿರ್ಣಯಿಸುತೊರೆದಿಹರೆಂದೆ
ತೋರದೊಳಗೈದು ಭೂತಂಗಳವ್ಯಕ್ತಹಂ
ಕಾರಮತಿಯೇಕಾದಶೇಂದ್ರಿಯಗಳೈಕರಣಗೋಚರದ ವಿಷಯಂಗಳು ೨

ಬಯಕೆ ಹಗೆತನ ದುಗುಡ ಸೊಗಭಾವಗಳ ಸಂತ
ತಿಯು ಕರಣವೃತ್ತಿಗಳನೊತ್ತಿಡಿವ ಧೃತಿ ಚೇತ
ನೆಯೆ ಅವುಗಳಿಂದಾದ ಹಲವಿಧವಿಕಾರಂಗಳೇ ಕ್ಷೇತ್ರವೆನ್ನುತಿಹರು
ಬಯಲ ಹೆಮ್ಮೆಯು ಡಾಂಭಿಕತೆಯಿಲ್ಲದಿಹುದಹಿಂ-
ಸೆಯು ಸಮಾಧಾನ ಗುರುಸೇವೆ ಸ್ಥೈರ್ಯವು ಸರಳ
ತೆಯು ಶೌಚವಾತ್ಮನಿಗ್ರಹವು ನಿರಹಂಕೃತಿಯು ವಿಷಯದಲಿ ವೈರಸ್ಯವು ೩

ಜನುಮಮೃತಿಜರೆಗಳಲಿ ವ್ಯಾಧಿದುಃಖಾದಿಯಲಿ
ಕೊಸರಿಡಿವ ದೋಷದೃಷ್ಟಿಯು ಪುತ್ರದಾರಗೃಹ
ಧನಗಳೊಳನಾಸಕ್ತಿ ಪ್ರೀತಿರಹಿತತೆಗಳಿಷ್ಟಾನಿಷ್ಟಗಳು ಸಮನಿಸೆ
ಕನಲದಿಹ ಸಮತೆಯೆನ್ನೊಳನನ್ಯ ಯೋಗದಿಂ-
ದನುಭಾವಿಸುವ ಭಕ್ತಿಯೇಕಾಂತವಾಸ ಬಹು
ಜನರ ಗುಂಪಿನೊಳನಭಿರುಚಿ ಸಂತತಧ್ಯಾತ್ಮಜ್ಞಾನದಲಿ ಸುವಿಚಾರವು ೪

ಮೋಕ್ಷವಿಷಯದಿ ನಿರತ ಹಂಬಲೇ ಜ್ಞಾನವಿಹು
ದೀಕ್ಷಿಸಲಿಕಿವುಗಳಿಂದ ವಿರುದ್ಧವಾದ ಗುಣ
ಪಕ್ಷಗಳ ತುಂಬಿರುವುದಜ್ಞಾನವಿದೆ ಯಾವುದನ್ನರಿಯೆ ಮುಕ್ತಿಯಹುದೊ

ಆ ಕ್ಷೇಮಪದವಾದ ಜ್ಞೇಯವನ್ನರುಪ್ಪವೆನು
ಅಕ್ಷಯದ ಪರಬ್ರಹ್ಮವದನಾದಿ ಸದಸತ್ತಿ
ನಾಕ್ಷೇಪದಿಂ ಮಿಕ್ಕಿರುವುದದಕೆ ಸರ್ವತ್ರ ಪಾಣಿಪಾದಶ್ರುತಿಗಳು ೫

ವದನಾಕ್ಷಿಶಿರಗಳಿಹವದು ಜಗದಿ ಸರ್ವವಂ
ಪುದಿದು ತುಳುಕಿಹುದು ಸಕಲೇಂದ್ರಿಯದ ಗುಣಗಳಿಂ
ದದು ಕೂಡಿದಂತಿದ್ದರಾವಿಂದ್ರಿಯಗಳಿಲ್ಲದಿಹುದನಾಸಕ್ತವಿಹುದು
ಅದು ಗುಣಗಳಿಲ್ಲದಿಹುದಾದರೂ ಗುಣಗಳಿಂ
ದೊದವಿರುವ ಫಲವುಣ್ಣುವುದು ಸರ್ವಕಾಧಾರ
ವಿದೆ ಸರ್ವಭೂತಗಳ ಹೊರಗೊಳಗು ಹರಡಿಹುದು ದೂರಹತ್ತಿರವಿರುವುದು ೬

ಚಲವಚಲವಾಗಿಹುದು ಸೂಕ್ಷ್ಮವಾಗುತೆ ಮತಿಗೆ
ನಿಲುಕದಿದೆ ಬಿಡಿಯಾದ ವಸ್ತುಗಳೊಳೊಂದಾಗಿ
ನೆಲೆನಿಂದೆ ಬಿಡಿಯಾದ ಸೋಗ ತಳೆಯುತ್ತಿಹುದು ವಿಶ್ವಕಾಧಾರವಾಗಿ
ಸಲೆ ಸೃಜಿಸುವುದು ಲಯಿಸುವುದು ಪಾಲಿಪುದು ಜ್ಯೋತಿ-
ವಲಯಕದೆ ಬೆಳಕನೀಯುತ್ತಿಹುದು ತಮಸ್ಸಿನಿಂ
ದಲಿ ಪರವದೇ ತಿಳುವಳಿಕೆ ತಿಳಿಯಲಿಹ ವಸ್ತು ತಿಳಿವಿನಿಂ ಗೋಚರಿಪುದು ೭

ಎಲ್ಲವರ ಹೃದಯದೊಳಗಿಹುದಿಂತು ಕ್ಷೇತ್ರವ
ನ್ನುಲ್ಲಸಿತ ಜ್ಞೇಯಜ್ಞಾನಗಳ ಸಂಕ್ಷೇಪದಿಂ
ದಿಲ್ಲಿ ವಿವರಿಸಿದೆನಿದನರಿಯಲೆನ್ನಯ ಭಾವವೈದೆ ತಾನರ್ಹನಹನು
ಮಲ್ಲ ಪುರುಷನು ಪ್ರಕೃತಿಯಿರ್ವರೂ ಆದ್ಯಂತ
ವಿಲ್ಲದವರೆಂದರಿಯು ಹಲವಿಧದ ಗುಣವಿಕಾ
ರೋಲ್ಲಾಸಗಳು ಪ್ರಕೃತಿಯಿಂ ಬಂದುವೆಂದು ತಿಳಿ ಕಾರ್ಯಕಾರಣಗಳಿಂಗೆ ೮

ಅದರ ಕರ್ತೃತ್ವಕ್ಕೆ ಹೇತುವೇ ಪ್ರಕೃತಿಯಿಹು
ದದರಿಂದಲೊಗೆವ ಸುಖದುಃಖಾದಿಯನುಭವ
ಕ್ಕೊದಗುತಿಹ ಹೇತುವೇ ಪುರುಷನಿಹನವ ಪ್ರಕೃತಿಯೊಳಗಿದ್ದು ಭುಜಿಸುತಿಹನು
ವಿಧವಿಧದಿ ಪ್ರಕೃತಿಯಿಂದುಂಟಾದ ಗುಣಗಳಂ
ಸದರದಿಂದವನೊಳ್ಳೆ ಕೆಟ್ಟ ಯೋನಿಗಳಲ್ಲಿ
ಯುದುಭವಕ್ಕಂತಿರುವ ಪ್ರಕೃತಿಗುಣಗಳ ಸಂಗವೇ ಕಾರಣವು ಯೋಚಿಸೆ ೯

ಹತ್ತಿರದೊಳಿದ್ದು ದಿಟ್ಟಿಸುವನನುಮೋದಕಂ
ಭರ್ತುರ್ಭೋಕ್ತಾರನಾಗೆಲ್ಲದಕ್ಕೊಡೆಯನಿಹ
ನುತ್ತಮದ ಪುರುಷನೀ ಕಾಯದೊಳಗವನನೇ ಪರಮಾತ್ಮನೆಂದೆನುವರು
ಮತ್ತಾವನಿಂತಿಪ್ಪ ಪುರುಷನಂ ಪ್ರಕೃತಿಯು
ನ್ನೊತ್ತಿಡಿದ ಗುಣಗಳಿಂದೊಡಗೂಡಿ ತಿಳಿವನಾ
ಸತ್ತಮಂ ಹೇಗಿದ್ದರೆಲ್ಲಿದ್ದರೂ ಭವದಿ ಮರಳಿ ಹುಟ್ಟುವದಿಲ್ಲವು ೧೦

ಕೆಲರು ಧ್ಯಾನದಿ ಕೆಲರು ಜ್ಞಾನಯೋಗದಿ ಕೆಲಬ
ರೊಲಿದು ಕರ್ಮದ ಯೋಗದಲಿ ಕಾಂಬರಾತ್ಮನಿಂ
ದಲೆ ಸ್ವಾತ್ಮವೈಭವವ ಕೆಲರಿಂತು ತಾವಾಗರಿಯಲಾರದಿತರರಿಂದ
ಹೊಲಬ ಮನವರಿತುಪಾಸಿಸುವರವರಾದರೂ
ಹಲಹುಟ್ಟುಸಾವ ಸಂಸೃತಿಯ ದಾಟುವರಿಹದಿ
ಹೊಲದ ಹೊಲತಿಳಿವುಗಾರನ ಜೋಡಣೆಯೊಳೆ ಜಂಗಮಸ್ಥಾವರದ ರೂಪದ

ಭಾವವೆಲ್ಲವು ಜನಿಸುತಿಹುದೆಂದು ತಿಳಿಯು ನೀ
ಯಾವನೆಲ್ಲಾ ಪ್ರಾಣಿಗಳಲಿ ಸಮನಾಗಿದ್ದು
ಸಾವನೊಳಗೊಂಡಿಲ್ಲವಂಥ ಪರಮೇಶ್ವರನ ನೋಡಿದನೆ ನೋಡಿದವನು
ತೀವಿರುವನೋರಂದದದೆಲ್ಲೆಡೆಯೊಳೀಶ್ವರನ
ಸೇವಿಸುತಲರಿವಾತ ತನ್ನ ಹಿಂಸಿಸದಿರುತ
ಲೋವಿಪರಗತಿಯೈದುತಿಹನಾರು ಸರ್ವ ಕರ್ಮಾವಳಿಯನೆಸಗುತಿಹುದು ೧೨

ವಿಗಡ ಪ್ರಕೃತಿಯದೆಂದು ತಿಳಿವನವ ತನ್ನಾತ್ಮ
ನೊಗುಮಿಗೆಯ ಕರ್ತಾರನಲ್ಲವೆಂದರಿಯುವಂ
ಚಿಗಿದು ಬೇರಾಗಿರುವ ವಸ್ತುಗಳನೆಲ್ಲೊಬ್ಬನೊಳಗೊಬ್ಬುಳಿಸಿ ಕಾಂಬನೋ
ಬಗಿದಾತ್ಮನಿಂದಲೇ ಜಗವೆ ಬಂದಿಹುದೆಂದು
ಬಗೆಯುತಿಹನಾತನೇ ಬ್ರಹ್ಮರೂಪವನಡೆವ
ನಗವೈರಿಸುತನಾತ್ಮನಾದ್ಯಂತವಿಲ್ಲದವನಾಗಿ ಗುಣರಹಿತನಾಗಿ ೧೩

ಕಾಯದೊಳಗಿದ್ದರೇತರ ಲೇಪವೊಂದನೇ
ಗೈಯದಿಹನೆಲ್ಲೆಲ್ಲು ತುಳುಕಿರುವ ನಭ ಸೂಕ್ಷ್ಮ
ದಾಯದಿಂದಾವುದರ ಸೋಕಲವ ಪೊದ್ದದೋಲಾತ್ಮ ತನುವೆಲ್ಲೆಡೆಯಲಿ

ಮಾಯದಾವರಿಸಿದ್ದರಾವಭಾವವ ಸೋಂಕ
ದೇ ಯುಕ್ತನಾಗಿರುವನೊಬ್ಬನಾದರು ರವಿಯು
ಹಾಯುತೆ ಸಮಗ್ರಲೋಕವನೆ ತನ್ನುರುಬೆಳಿಂದ ಪ್ರಕಾಶಿಸುವಂದದಿ ೧೪

ಸರುವ ಕ್ಷೇತ್ರಗಳನ್ನು ವ್ಯಾಪಿಸುತಲಾ ಕ್ಷೇತ್ರಿ
ಯುರಿದು ಮಿರುಗುತ್ತಿಹನು ಸ್ವಯಂಪ್ರಕಾಶಕನಾಗು
ತಿರದಿಂತು ಕ್ಷೇತ್ರಕ್ಷೇತ್ರಜ್ಞರಂತರವ ನಿರ್ಮಲ ಜ್ಞಾನಚಕ್ಷುಸ್ಸಿನಿಂ
ಹರಿವ ಮಾಯಾಶಕ್ತಿಯಿಂದ ಬಿಡುಗಡೆಯಾಗ
ಲಿರುವ ಯುಕ್ತಿಗಳೆಲ್ಲ ಮನವರಿತ ಮಾನಿಸರೆ
ಪರಮಪದವಿಯನಯ್ದುತಿಹರು ನಿರ್ದಾಯದಿಂದೆನ್ನನಾರಾಧಿಸುತಲಿ ೧೫

ಹದಿನಾಲ್ಕನೆಯ ಅಧ್ಯಾಯ

ಸೂಚನೆ ॥ ವಸುದೇವಸುತನೊರೆದ ಫಲುಗುಣಗೆ ನಲ್ಮೆಯಿಂ
ದಸಮ ಸತ್ತ್ವರಜಸ್ತಮಗಳೆಂಬ ಗುಣತ್ರಯವ
ಪಸರಿದವರ ಪ್ರಭಾವವ ಬಿಡದೆ ಗುಣತ್ರಯವಿಭಾಗಯೋಗವ ವಿವರಿಸಿ

ಮುದದಿ ಶ್ರೀಕೃಷ್ಣ ಮುಂದೊರೆದ ಜ್ಞಾನದೊಳುತ್ತ
ಮದ ಜ್ಞಾನಮಂ ನಿನಗೆ ಪೇಳುತಿಹೆನದನರಿತೆ
ಸದಮಲಾಶಯದ ಮುನಿನಿಕರವೆಲ್ಲವು ಪರಮ ಸಿದ್ಧಿವಡೆದರು ಪೂರ್ವದಿ
ಇದರನವಲಂಬಿಸುತಲೆನ್ನ ಸಾಧರ್ಮ್ಯವೊಂ
ದಿದ ಮಹಾತ್ಮರು ಸರ್ಗದಲಿ ಜನಿಸದಿಹರು ಪ್ರಲ
ಯದಿ ವ್ಯಥಿಸದಿಹರಿಲ್ಲಿ ನಾನೆ ವಿಶ್ವದ ಯೋನಿಯಾದ ಮಹದ್ಬ್ರಹ್ಮನಿಹೆನು ೧

ಅದರೊಳೇ ನಾ ಗರ್ಭಹೇರುತಿಹೆನದರಿಂದ
ಲೊದವುತಿಹುದೀ ಸಕಲ ವಸ್ತುಗಳು ದೇಹೇಂದ್ರಿ
ಯದ ಗುಂಪುಗಳನೊಡರ್ಚುವ ಯೋನಿಗಳಿಗೆಲ್ಲ ಬ್ರಹ್ಮವೇ ಮಹದ್ಯೋನಿಯು
ಪುದಿದದರ ಬೀಜವೀಡುವ ತಂದೆಯೇ ನಾನು
ಸದರದಿಂ ದೇಹದಲಿ ದೇಹಿಯಂ ಬಂಧಿಸುತಿ
ಹುವೆ ಪ್ರಕೃತಿಸಂಭೂತವಾಗಿರುವ ಸತ್ತ್ವರಜತಮವೆಂಬ ಮೂರ್ಗುಣಗಳು ೨

ಹೀಗೆ ತ್ರಿಗುಣಗಳಲ್ಲಿ ಸತ್ತ್ವವತಿ ನಿರ್ಮಲವ
ದಾಗಿ ದುಃಖಾದಿಗಳನೊಳಗೊಳದೆ ಬೆಳಗುತಿಹು
ದಾಗಿ ಸುಖಜ್ಞಾನಗಳ ಸಂಗದಭಿಮಾನದಿಂ ಜೀವಕನ ಬಂಧಿಸುವುದು
ಮಾಗದಿರುವಿಚ್ಛೆಯಿಂ ಪ್ರೀತಿಯಿಂ ಪುಟ್ಟಿದನು
ರಾಗ ರೂಪದ ರಜೋಗುಣವಾತ್ಮನಂ ಬಳಸಿ
ತಾ ಗೈವುವವನೆನ್ನುವಭಿಮಾನದಿಂ ಕರ್ಮಸಂಗದಿಂ ಕಟ್ಟುತಿಹುದು ೩

ಸರುವ ಪ್ರಾಣಿಗಳೊಳವಿವೇಕವನೊಡರ್ಚುತಿಹ
ನೆರೆ ತಮೋಗುಣವರಿಯುವಿಕೆಯಿಂದಲಾದುದೆಂ
ದರಿಯದುವೆ ತಪ್ಪುತಿಳಿವಿಂದ ನಿದ್ರಾಲಸ್ಯದಿಂದೆಮ್ಮ ಕಟ್ಟುತಿಹುದು
ವರ ಸತ್ತ್ವಗುಣವು ಸುಖದಲಿ ರಜೋಗುಣವು ತಾ
ಕರುಮವೆಸಗುವುದರಲಿ ತಮವು ಸುವಿವೇಕ ಮುಸು
ಕಿರುತೆ ಪ್ರಮಾದದಲಿ ಸಿಲುಕಿಸುತೆ ದೇಹಿಯಂ ಕಟ್ಟಿಗೊಳಪಡಿಸುತಿಹುದು ೪

ರಜತಮೋಗುಣಗಳಂ ಸತ್ತ್ವವೂ ತವೆ ಸತ್ತ್ವ
ರಜಗಳಂ ತಮವು ತಮಸತ್ತ್ವಗುಣಗಳ ರಜವು
ಗಜರಿ ಹಿಮ್ಮೆಟ್ಟಿಸುತಲೆದ್ದು ಕಾಣುತ್ತಿರುವುದೆಂದೆಮ್ಮ ಕಾಯದೊಳಗೆ
ಗಜಗಲಿಸುವುದೊ ಜ್ಞಾನವೆಲ್ಲ ಬಾಗಿಲುಗಳಲಿ
ಸುಜನರರಿಯುವರಾಗ ಸತ್ತ್ವವೇರಿಹುದೆಂದು
ರಜವು ತಲೆಯೆತ್ತಿರಲು ಲೋಭತೃಷ್ಣೆಯಶಾಂತಿ ಕರ್ಮಪ್ರವೃತ್ತ್ಯಾದಿಯು ೫

ಎಮ್ಮೊಳೊಡಮೂಡುವವು ತಮವು ಮೇಲಡರಲ್ಕೆ
ಕಮ್ಮದೊಳನಾಸಕ್ತಿ ಮೋಹ ಪ್ರಮಾದಾದಿ
ಯೊಮ್ಮುವುದು ಜೀವಕಂ ಸತ್ತ್ವವೇರ್ಕೆಯೊಳಿರುವ ಕಾಲದಲಿ ಮೃತಿಯೈದಲು
ನೆಮ್ಮದಿಯೊಳುತ್ತಮರ ಪುಣ್ಯಲೋಕವ ಪಡೆವ
ಬಿಮ್ಮಿಡಿದ ರಜದಿ ಸಾಯಲ್ಕೆ ಕರ್ಮಾಸಕ್ತಿ
ಯುಮ್ಮಳದವರಲಿ ಜನಿಸುವ ತಮದಿ ಮೃತನಾಗೆ ಕೆಟ್ಟ ಯೋನಿಲಿ ಪುಟ್ಟುವ ೬

ಸತ್ತ್ವವೇ ಫಲವಿಹುದು ಸುಕೃತಕರ್ಮಗಳಿಂಗೆ
ಮತ್ತೆ ರಾಜಸಕರ್ಮಗಳಿಗೆ ದುಃಖವೆ ಫಲವು
ಮತ್ತಿದಜ್ಞಾನವೇ ಫಲವು ತಾಮಸಕರ್ಮಗಳಿಗೆಂದು ಪೇಳುತಿಹರು

ಸತ್ತ್ವದಿಂದರಿವು ರಜದಿಂದಾಸೆ ತಮದಿಂದ
ಕೆತ್ತಿದಜ್ಞಾನ ಮೋಹ ಪ್ರಮಾದಗಳು ಗಮಿ
ಸುತ್ತಿಹವು ದೇಹಿಯಲಿ ಮೇಲ್ಮೆಟ್ಟಲಿನ ಜನ್ಮವೈದುವರು ಸತ್ತ್ವಸ್ಥರು ೭

ರಾಜಸರು ನಡುವಣದ ಜನುಮವಡೆವರು ತಮೋ
ಭಾಜಿಗಳು ಕೀಳುಗುಣ ನಡೆವಳಿಕೆಗೆಡೆಗೊಟ್ಟು
ಸಾಜದಿಂ ಕೆಳಗಣದ ಹುಟ್ಟನೊಂದುವರೆಂದು ದ್ರಷ್ಟೃವೀ ಗುಣಗಳಿಂದ
ಮಾಜದನ್ಯರ ಕರ್ತೃವಾಗಿ ಕಾಣುವುದಿಲ್ಲ
ವೋ ಜೀವನಿವುಗಳಿಂ ಮೀರಿದವನೆಂದರಿವ
ನೋ ಜಗದೊಳಾತನೆನ್ನಯ ಸ್ವರೂಪವ ಸುಲಭದಿಂದ ಕೈವರ್ತಿಸುವನು ೮

ದೇಹಿ ತನುವೆರಸಿದೀ ಗುಣಗಳನತಿಕ್ರಮಿಸೆ
ತಾ ಹುಟ್ಟು ಸಾವು ಮುಪ್ಪುಗಳ ದುಃಖಗಳ ಕಡು
ಸೋಹಿನಿಂ ಬಿಡುವೆತ್ತಿ ಮೋಕ್ಷವಡೆಯುವನೆನಲು ಕೌಂತೇಯ ಕವಿದು ಕೇಳ್ದ
ಬೇಹಿನಿಂದೀ ಮೂರು ಗುಣವರಿತು ದಾಟಿರುವ
ಸಾಹಸಿಯ ಕುರುಹೇನು ಆಚಾರವೆಂತಿಹುದು
ಕಾಹುರದವುಗಳ ತರಿಸುವನೆಂತು ಪೇಳೆನಲು ಕೃಷ್ಣನೊಲಿದೊರೆದ ನಗುತ ೯

ಅವನು ತಿಳುವಳಿಕೆ ಕರ್ಮಾಸಕ್ತಿ ಮೋಹಗಳು
ಸವನಿಸಲಿಕವುಗಳಲಿ ಹಗೆದೋರುತಿಲ್ಲ ಪೋ
ಣವು ಪೋದರವನು ಬಯಸುವುದಿಲ್ಲ ತಾನುದಾಸೀನನಾಗಿದ್ದು ಮುತ್ತಿ
ನವೆಸುತಿಹ ಗುಣಗಳಿಂ ಬದಲಾವಣೆಯನು ಪಡೆ
ಯುವುದಿಲ್ಲ ಜಡದೇಹ ಕರಣಾದಿಗಳು ವಿಷಯ
ನಿವಹದಲಿ ತಾವಾಗಿ ರಮಿಸುತಿಹವೆಂದರಿತು ಸ್ಥಿತಿಗತಿಲಿ ಕದಲುತಿಲ್ಲ ೧೦

ಸೊಗದುಗುಡಗಳಲಿ ಸಮನಿಹ ಸ್ವಸ್ಥನಿಹ ಹೊಗಳು
ತೆಗಳಿಕೆಲಿ ಸಮನಿರುವ ಹೊನ್ನುಮಣ್ಣುಗಳೊಂದೆ
ಬಗೆಯಿಂದ ಕಾಂಬನಪ್ರಿಯಪ್ರಿಯಗಳಲಿ ಸಮನಿರುವ ಧೀರನಾಗಿರುವನು
ಬಗೆಯೊದಲೆ ಮಾನಾಪಮಾನಗಳ ಸಮನಿರುವ
ಹಗೆಗೆಳೆಯರಲ್ಲಿ ಸಮನಿಹನಾವ ಕರ್ಮವ ತೊ
ಡಗದಿರುವ ಕರಣಸುಖಕೆಂದೆ ಆ ಮಾನಿಸನೆ ಗುಣಗಳಿಂ ಮೀರಿದವನು ೧೧

ಆವನೆನ್ನಂ ಕಂದುಕುಂದಿಲ್ಲದಲೆ ಭಕ್ತಿ
ಯಾವೇಶದಿಂ ಭಜಿಪನಾತನೀ ತ್ರಿಗುಣಗಳ
ಹಾವಳಿಯ ದಾಟಿ ಬ್ರಹ್ಮಸ್ವರೂಪವನೈದಲರ್ಹನಾಗುವ ಧರೆಯುಲಿ
ಸಾವಿಲ್ಲದಿಹ ಸನಾತನ ಧರ್ಮರೂಪ ಬದ
ಲಾವಣೆಯ ಪೊಂದದಿಹ ಚರಮ ಸುಖಕರವಾದ
ಆ ವಿಮಲ ಸುಗುಣಬ್ರಹ್ಮನ ಪ್ರತಿಷ್ಠಾಸ್ಥಾನವಾನಿರುವೆನೀ ವಿಶ್ವದಿ ೧೨

ಹದಿನೈದನೆಯ ಅಧ್ಯಾಯ

ಸೂಚನೆ ॥ ಪಾಪನಾಶಯುದ ಪರಮಾತ್ಮ ಪಾರ್ಥಗೆ ಪೇಳ್ದ
ಸಾಪರಿಸುತಾತ್ಮಸ್ವರೂಪಮಂ ತನ್ನ ನಿಜ
ಭಾವಮಂ ಪುರುಷೋತ್ತಮನ ಯೋಗಮಂ ಮುಂದೆವಿಸ್ತರಿಸಿಪ್ರೇಮದಿಂದ

ಕಾರಣಿಕಪುರುಷನೆಂದಂ ಮೇಲಿನಿಂದುಗಿದ
ಬೇರುಳ್ಳನಂತ ಜೀವಾದಿ ಕೆಳಶಾಖೆಗಳ
ಸಾರ ಶ್ರುತಿವಾಕ್ಯ ಪತ್ರಾಳಿಯುವ್ಯಯ ಪದವನಶ್ವತ್ಥತರುವೆಂಬರು
ಆರಿದನ್ನರಿಪನವ ವೇದವಿತ್ತಿಹನದರ
ಮೂರು ಗುಣಗಣಗಳಿಂ ಮೈದುಂಬಿರುವ ವಿಷಯ
ದೋರಣದ ಚಿಗುರುಗಳ ನೂರಾರು ಕೊಂಬೆಗಳು ಮೇಲ್ಕೆಳಗೆ ಹರಡಿರುವವು ೧

ಭೂಲೋಕದಲಿ ಕರ್ಮಲೇಪವಳವಡಿಸುತಿಹ
ಮೂಲಗಳನೇಕ ಕೆಳಗೂ ಹಬ್ಬಿಹವು ಭವವ
ನೋಲೈಸುತಿರಲದರ ರೂಪ ತಿಳಿಯುವುದಿಲ್ಲವಾದ್ಯಂತವಿಲ್ಲವದಕೆ
ಮೇಲಾದ ಸುಪ್ರತಿಷ್ಠಿತ ಸ್ಥಾನವಿಲ್ಲವೀ
ಜಾಲದಿಂ ಬೇರೂರಿ ನಿಂದಿರುವ ವಿಟಪಿಯುನೆ
ಮೂಲಸಹಿತಲೆ ಕಡುಗಿ ವೈರಾಗ್ಯವೆಂಬ ನಿಶಿತಾಸ್ತ್ರದಿಂ ಕತ್ತರಿಸುತೆ ೨

ಬಳಿಕಾವ ಪದವಿಯೊಮ್ಮೆಗೆ ಪಡೆಯೆ ಹಿಂದಿರುಗ
ದುಳಿಯುವರೊ ಯಾವ ಪರಪುರುಷನಿಂದೀ ಸೃಷ್ಟಿ
ಗಳೆ ಮೊಳೆತು ಬೆಳೆದಿರುವವಂಥ ಪುರುಷನ ಪದವ ಮರೆಹೊಗುತಲರಸಬೇಕು

ಗಳಿತ ಮೋಹಾಭಿಮಾನದ ಸಂಗದೋಷಗಳ
ಕಳಚಿರುವ ವಿಜಿತಕಾಮದ ಸತತವಧ್ಯಾತ್ಮ
ವಳಯುವನೆ ಚಿಂತಿಸುವ ಸುಖದುಃಖ ಮೊದಲಾದ ದ್ವಂದ್ವದಿಂ ಮುಕ್ತರಾದ ೩

ಅವಿವೇಕವಿಲ್ಲದಿಹ ಮನುಜರಾ ನಾಶರಹಿ
ತವದಾದ ದಿವ್ಯಪದವೊಂದುವರು ಯಾವ ಸುಪ
ದವಿಯನೈದಲು ಮರಳುತಿಲ್ಲವದ ಚಂದ್ರಾಗ್ನಿಸೂರ್ಯರೂ ಬೆಳಗುತಿಲ್ಲ
ತವಿದಿಹಾಪದವೆನ್ನ ಶ್ರೇಷ್ಠಧಾಮವು ನೋಡೆ
ಭುವನದಿ ಸನಾತನದ ಜೀವನೆನ್ನಂಶ ಸಂ
ಭವನವಂ ಪ್ರಕೃತಿಸ್ಥವಾದ ಮನವೇ ಷಷ್ಠವಾದ ಕರಣಗಳೆಳೆವನು ೪

ಎಂದು ಈ ದೇಹದೊಡೆಯಂ ದೇಹ ಬಿಡುವನಿ
ನ್ನೊಂದು ದೇಹವ ಕೊಳುವನಾಗ ಗಾಳಿಯು ಹೂಗ
ಳಿಂದ ಪರಿಮಳದಂತೆ ಕಸಿದು ಕೊಂಡೊಯ್ಯುತಿಹನಿಂದ್ರಿಯಾದಿಗಳೊಂದಿಗೆ
ಮುಂದೆ ಚಕ್ಷು ಸ್ಪರ್ಶ ರಸನ ಶ್ರುತಿ ಘ್ರಾಣಗಳ
ನೊಂದಿ ವಿಷಯಕಲಾಪದಲಿ ಮನವು ಚಲಿಸುವುದು
ಹೊಂದಿರುವ ತನುವ ಬಿಟ್ಟೆದ್ದರಿರುತಿದ್ದರೂ ವಿಷಯ ಭೋಗಿಸುತಿದ್ದರೂ ೫

ಗುಣಗಳಿಂ ಕೂಡಿದ್ದರೂ ಜೀವಕನ ಮೂಢ
ಬಣಗುಗಳು ತಿಳಿಯಲಾರರು ಜ್ಞಾನಚಕ್ಷುವಿನ
ಕಣೆಗಳರಿವರು ಯತ್ನಗೈವ ಯೋಗಿಗಳವನ ತಮ್ಮೊಳಗೆ ಕಾಣುತಿಹರು
ಹೆಣಗಿದರು ಯತ್ನಶತದಿಂದಲವಿವೇಕಿಗಳು
ಮಣಿಯದಿಹ ಚಿತ್ತದಿಂದವನ ನೋಡುವುದಿಲ್ಲ
ಸೆಣೆಯುವಾವಾದಿತ್ಯತೇಜವೀ ಭೂಗೋಲವಂ ಪ್ರಕಾಶಿಸುತಿರುವುದೋ ೬

ಆವ ದ್ಯುತಿಯನಲಶಶಿಯುರೊಳಿಹುದೊ ಆ ತೇಜ
ದಾವಳಿಯನೆನ್ನದೆನ್ನುತೆ ತಿಳಿಯು ನಾನೆ ಈ
ಭೂವಲಯದೊಳಹೊಕ್ಕು ಸಕಲ ಭೂತಗಳ ತನ್ನೋಜೆಯಿಂ ಧರಿಸಿರುವೆನು
ಕಾವರಿಸುವ ಸೋಮನಾಗಿ ನಾ ರಸದ ಸ್ವ
ಭಾವದಿಂದೆಲ್ಲ ಸಸ್ಯಗಳ ಬಲಿಸುತ್ತಲಾ
ರೈವೆ ನಾ ಪ್ರಾಣಾದಿ ವಾಯುಗಳನೊಡವೆರಸಿ ಜಠರಾಗ್ನಿಯಾಗುತೆಲ್ಲ ೭

ಜಂತುಕಾಯಗಳ ಪೊಗುತಲಿ ನಾಲ್ಕುವಿಧದನ್ನ
ಮಂ ತೇಯುತರಗಿಸುವೆ ನಾನೆ ಸರ್ವರ ಹೃದಯ
ದಂತರಾಲದೊಳಿರುವೆನೆನ್ನಿಂದಲೇ ಜ್ಞಾನಸ್ಮೃತ್ಯಾದಿಯುದಿಸುತಿಹವು
ಅಂತರಿಸದಡಗುವವು ನಾನೆ ವೇದಗಳಿಂದ
ಚಿಂತಿಸಲ್ಪಡುವವಂ ವಿಧವಿಧದಿ ನಾನೆ ವೇ
ದಾಂತದುಪಪಾದಕಂ ನಾ ವೇದವೇದಾಂಗಗಳನರಿತವಂ ಲೋಕದಿ ೮

ಭುವಿಲಿ ಕ್ಷರಾಕ್ಷರಗಳೆಂಬೆರಡು ಪುರುಷರಿಹ
ರವರೊಳಗೆ ಜಂಗಮಸ್ಥಾವರಾತ್ಮಕ ವಸ್ತು
ನಿವಹವೇ ಕ್ಷರವಿರುವುದವ್ಯಕ್ತಪ್ರಕೃತಿಯಕ್ಷರವಿರುವುದೆಂದೆಂಬರು
ಕವಿದಾರು ಲೋಕತ್ರಯವ ಪೊಗದು ಪಿಡಿದಿರುವ
ನವನನ್ಯನಿರುವನುತ್ತಮಪುರುಷ ನಾಶವಿರ
ದವನವನ ಪರಮಾತ್ಮನೆಂಬರಾ ಕ್ಷರದಿಂದ ಮಿಗಿಸಿಹಕ್ಷರದಿಂದಲಿ ೯

ಪರನಿರುವೆನದರಿಂದಲಾನು ವೇದದಿ ಜಗದಿ
ಪುರುಷೋತ್ತಮನೆದೆಂದು ಹೆಸರುಗೊಂಡಿಹೆನೆನ್ನ
ನರಿವನಾರಿಂತು ಮೋಹವ ಕೊಳದೆ ಸರ್ವಜ್ಞನವ ಸರ್ವವಿಧಗಳಿಂದ
ಸರಿದೆನ್ನನಾಶ್ರಯಿಪನಿಂತು ಬಹು ಗುಟ್ಟಾದ
ವರ ಶಾಸ್ತ್ರದಿರವ ನಾ ಪೇಳಿರುವೆನಿದನು ಮನ
ವರಿಯೆ ನರ ಮತಿವಂತನಾಗಿರುವ ಜೀವನದಿ ಕೃತಕೃತ್ಯನಾಗಿರುವನು ೧೦

ಹದಿನಾರನೆಯ ಅಧ್ಯಾಯ

ಸೂಚನೆ || ಸವ್ಯಸಾಚಿಗೆ ಶುಭಾಶುಭಸ್ವಭಾವಗಳನಿರ
ದೆ ವ್ಯಾಳಶಯನ ವಿಸ್ತರಿಸಿದಂ ನಲವಿಂದ
ದೈವ್ಯಾಸುರೀಸಂಪದವಿಭಾಗಯೋಗನುಂ ಮಾನುಷೀಯೋನಿಗಳಲಿ

ಭಗವಂತನೆಂದ ಚಿತ್ತದ ಶುದ್ಧಿ ಜ್ಞಾನಯೋ
ಗಗಳ ತತ್ಪರತೆ ಭಯವಿಲ್ಲದಿರುವಿಕೆಯಿಂದ್ರಿ
ಯಗಳ ನಿಗ್ರಹವು ವೇದಾಧ್ಯಯನ ತಪ ದಾನ ಯಜ್ಞಗಳು ಸರಳತನವು

ಮಿಗೆ ಸತ್ಯ ತ್ಯಾಗ ಶಾಂತಿಯಹಿಂಸೆಗಳು ಕೋಪ
ವೊಗದಿಹುದು ದಯೆಯು ಚಾಡಿಯು ಪೇಳದಿಹುದು ಭೋ
ಗಗಳೊಳಗನಾಸಕ್ತಿ ಮೃದುತನವು ನಾಚಿಕೆಯು ಚಾಪಲ್ಯವಿಲ್ಲದಿಹುದು ೧

ಧೃತಿ ಶೌಚ ತೇಜ ಕ್ಷಮೆಗಳು ನಿರಭಿಮಾನತೆಯು
ಇತರರಿಂಗೆರಡೆಣಿಸದಿರುವುದಿವುಗಳೆ ಯೋಗ್ಯ
ಗತಿಯಲ್ಲಿ ಹುಟ್ಟಿದವಗುಂಟಾಗುತಿರುವ ದೈವೀಸಂಪದಗಳಿರುವವು
ಅತಿಯಾದ ದರ್ಪವಭಿಮಾನ ಡಂಭಾಚಾರ
ಖತಿಯು ಕಾಠಿನ್ಯವಜ್ಞಾನವಿವುಗಳೆ ಕೆಟ್ಟ
ಸ್ಥಿತಿಯಲ್ಲಿ ಹುಟ್ಟಿ ಬೆಳೆದವನೊಳುಂಟಾಗುತಿರುವಾಸುರೀಸಂಪದಗಳು ೨

ಇವುಗಳೊಳಗಾಸುರಿಯು ಬಂಧಕಾರಕ ದೈವಿ
ಕವು ಮೋಕ್ಷಕಾರಕವು ಪಲುಬದಿರು ನೀ ದೈವಿ
ಕವ ಕೊಂಡೆ ಜನಿಸಿರುವೆ ಈ ಜಗದಿ ದೈವಾಸುರಗಳೆನ್ನುವೆರೆಡು ಬಗೆಯ
ಭವದ ಮಾನುಷಸೃಷ್ಟಿಯಿಹುದದರೊಳಾನು ದೈ
ವವನು ವಿಸ್ತರದಿಂದ ಪೇಳಿರುವೆನೀಗಾಸು-
ರವ ಕೇಳು ದುಷ್ಟವಾಸನೆಯಸುರರೀ ಲೋಕದೊಳು ತಮ್ಮ ಕರ್ತವ್ಯದಿ ೩

ಏನ ಬಿಡಬೇಕೇನ ಮಾಡಬೇಕೆನ್ನುವ ನಿ
ದಾನವರಿಯರು ಸದಾಚಾರ ಸತ್ಯ ಶುಚಿತ್ವ
ವೇನೇನು ಕಾಣದವರೊಳಗವರು ಜಗವ ಸುಳ್ಳಿಂದ ತುಂಬಿರುವುದೆಂದು
ಸ್ಥಾನಮಾನಗಳಿಲ್ಲದಿಹುದೆಂದು ಈಶ್ವರನ
ನಾನದಿಹುದೆಂದು ಸ್ತ್ರೀಪುರುಷರೊಡನಾಟದಿಂ
ತಾನಾದ ಕರ್ಮವೇ ಹೇತುವಾಗಿಹುದಲ್ಲದೇನಿಲ್ಲವೆಂದೊರೆವರು ೪

ಈ ದಿಟ್ಟಿಯಂ ಕೊಂಡು ನಷ್ಟಚೇತನದಿ ಕಾ
ಳಾದ ಬುದ್ಧಿಯೊಳುಗ್ರಕರ್ಮದೊಳು ಜಗಕಹಿತ
ರಾದವರು ಹುಟ್ಟುವರು ತಾವೆಂದಿಗೂ ಸಾಕೆನಿಸದಂಥ ಬಯಕೆಗಳನು
ಆದರಿಸಿ ದಂಭಮದಮಾನಂಗಳಿಂ ಕೂಡಿ
ಹಾದಿಯೊಳಗವಿವೇಕದಿಂದಶುಭವಿಷಯಚಯ
ವೇಪಳೆಯುತಶುಚಿಯನಾಚಾರಗಳ ಹಿಡಿದೆ ಭವದಿ ಮುಂಬರಿಯುತಿಹರು ೫

ಅಳಿಯಲೆಟಕದ ಪ್ರಲಯದನಕ ತೀರದ ಚಿಂತೆ
ಗಳ ಹಚ್ಚಿಕೊಳುತೆ ವಿಷಯದ ಸುಖವೆ ಹೆಚ್ಚಿನ್ನು-
ತಿಳಿಯೊಳದೆ ಸರ್ವಸ್ವಮೆಂದು ನಿಶ್ಚಯಿಸುತಾಶಾಪಾಶಶತಗಳಿಂದ
ಬಳಿದು ಬಂಧಿತರಾಗಿ ಕಾಮಕ್ರೋಧಗಳನೊಳ
ಗೊಳುತೆ ಕಾಮೋಪಭೋಗವನರಸುತನ್ಯಾಯ
ದೊಳೆ ಧನಾದಿಯ ಸಂಗ್ರಹವನಾಶಿಸುವರಿವುಗಳಿಂದೆನಗೆ ದೊರಕಿತೆಂದು ೬

ಈ ಹಂಬಲಾನು ಹೊದ್ದುವೆನೆಂದು ಇದು ತನ್ನ
ಕಾಹಿನೊಳದಾಗಲಿಹುದೆಂದು ಮೇಣೆನಗಿನ್ನು
ಈ ಹಣವು ದೊರೆಯಲಿಹುದೆಂದು ನಾನೇ ಒಡೆಯ ಭೋಗಿ ಬಲವಂತನೆಂದು
ಈ ಹಗೆಯ ನಾನೆ ಕೊಂದಿಹೆನೆಂದು ಮಿಕ್ಕವರ
ಸೋಹಿ ಕೊಲ್ಲುವೆನೆಂದು ನಾ ಸಿದ್ಧ ಸುಖಿಯೆಂದು
ನಾ ಹಣದಿ ತುಳುಕಿದವ ನಾನೊಳ್ಳೆ ಕುಲದವೆನಗಿನ್ನಾರು ಸದೃಶರೆಂದು ೭

ಆನಂದ ಪಡುವೆ ಯಾಗವ ಮಾಡುತಿಹೆನೆಂದು
ದಾನವೀಡುವೆನೆಂದು ನೂರಾರು ಬಗೆಯೊಳ
ಜ್ಞಾನದಿಂ ಮೂಢರಾಗಿಹರವರನೇಕವಿಧ ದುಷ್ಟಕಲ್ಪನೆಗಳಿಂದ
ತಾನಾಗಿ ಭ್ರಮೆಗೊಂಡು ಮೋಹಜಾಲದಿ ಸಿಲುಕಿ
ನಾನಾತರದ ವಿಷಯಸುಖಗಳಲಿ ರತರಾಗಿ
ಹೀನವಾಗಿಹ ನರಕಕೂಪದಲಿ ಬೀಳುವರು ತಾವೆ ದೊಡ್ಡವರೆನ್ನುತೆ ೮

ಎದೆಯನುಬ್ಬಿಸಿಕೊಂಡು ತಮ್ಮೊಳಿಹ ಧನಮಾನ
ಮದಗಳಿಂ ಗರ್ವಿಷ್ಠರಾಗಿ ವಿಧಿಯರಿಯದಲೆ
ಸದರದಲಿ ಯಾಗಾದಿಗಳನೆಸಗುವರು ಡಂಭದಿಂ ತೋರಿಕೆಗೆ ಲೋಕದಿ
ಕುದಿವ ಕಾಮ ಕ್ರೋಧ ದರ್ಪ ಬಲಹಂಕೃತಿಯ
ಮೊದಲಾದುವಾಶ್ರಯಿಸಿ ತಮ್ಮೊಳಗೆ ಪರರೊಳಗೆ
ಚದರಿರುವ ಪರಮಾತ್ಮನೆನ್ನ ದ್ವೇಷಿಸುತಿತರರೊಳಸೂಯೆಬಡುತಿರುವರು ೯

ಕ್ರೂರಹೃದಯದ ನನ್ನ ಕಂಡರಾಗದ ದುರಾ
ಚಾರವೆತ್ತಿದ ನರಾಧಮರ ನಾ ಬಿಡದೆ ಸಂ
ಸಾರದೊಳಗಾವಾಗಲಾಸುರೀಯೋನಿಗಳೊಳೇ ತಳ್ಳುತಿರುವೆ ಕಡುಗಿ

ಆ ರೀತಿಗೆಟ್ಟವರು ನೀಚಗತಿಗಳನಿಂತು
ಸೇರಿ ನನ್ನನು ನೆನೆಯುದೆನ್ನನೊಂದದೆ ಮುಂದೆ
ಹಾರುವರು ಪ್ರತಿಜನುಮದೊಳು ಕೀಳುಹಂತಗಳ ಭವದ ಪಥದೊಳಗಿಳಿಯುತೆ

ತಾಗಿ ತನ್ನಂ ನಶಿಸುವುದೆ ನರಕಪತ್ತನದ
ಬಾಗಿಲೇ ಕಾಮಲೋಭಕ್ರೋಧವದರಿಂದ
ಲಾಗಿ ಆ ಮೂರರಂ ಸರ್ವಪ್ರಯತ್ನದಿಂದಾದರೂ ತ್ಯಜಿಸಬೇಕು
ಬಾಗದಲೆ ಆ ತಮೋದ್ವಾರಂಗಳಿಂ ಮುಕ್ತ
ನಾಗಿರುವ ನರನಿಹದಿ ಚರಿಸುವಂ ತನ್ನೇಳ್ಗೆ
ಗಾಗಿ ಬಳಿಕವನುತ್ತಮದ ಪದವ ಪೊಂದುವಂ ಕ್ರಮದಿಂದ ಮೇಲೇರುತೆ ೧೧

ಯಾರು ಶಾಸ್ತ್ರದ ನೇಮನಿಷ್ಠೆಗಳ ಕಡೆಗಣಿಸಿ
ಸಾರುತಿಹ ಮನಬಂದ ತೆರದೊಳವ ಮೋಕ್ಷಪದ
ವೇರಲಾರಂ ಮುಂದಕವಗೆ ಲೌಕಿಕಸುಖವು ಪರದ ಸುಗತಿಯು ಸಲ್ಲದು
ಪಾರಮಾರ್ಥಿಕಶಾಸ್ತ್ರವೇ ಪ್ರಮಾಣವು ನಿನಗೆ
ಕಾರಿಯದ ನಿರ್ಣಯದೊಳದರಿಂದ ನೀ ಶಾಸ್ತ್ರ
ಸಾರಾಯವರಿತು ಲೋಕದಿ ನಿನ್ನ ಧರ್ಮಕರ್ಮಾದಿಗಳ ನಡೆಸಬೇಕು ೧೨

ಹದಿನೇಳನೆಯ ಅಧ್ಯಾಯ

ಸೂಚನೆ || ಶುದ್ಧಮೂರುತಿ ಧನಂಜಯಗೆ ಬಿತ್ತರಿಸಿದಂ
ಶ್ರದ್ಧೆಯಲಿ ವೃತ್ತಿಯಲಿ ಮೂರ್ಬಗೆಯ ನಡತೆಗಳ
ಶ್ರದ್ಧಾತ್ರಯವಿಭಾಗಯೋಗಮಂ ವಿಶ್ವದಲಿ ಪುಟ್ಟಿ ಸಾಯುವ ಜನರಲಿ

ಪಾಂಡುನಂದನ ಕೇಳ್ದನಾರು ಶಾಸ್ತ್ರದ ನೇಮ
ದಂಡಲೆಯ ತೊರೆದು ಸೇವಿಪರು ಶ್ರದ್ಧೆಯೊಳವರ
ಮಂಡಿಸಿಹ ನಿಷ್ಠೆಯೇನಿದೆ ಸಾತ್ತ್ವಿಕವೆ ರಾಜಸವೆ ತಾಮಸವೆ ಯೋಚಿಸೆ
ಪುಂಡರೀಕಾಕ್ಷ ಪೇಳ್ದಂ ಜೀವರೊಳು ಹುಟ್ಟು
ಗೊಂಡು ಬರುತಿವೆ ತ್ರಿವಿಧದ ಸ್ವಭಾವಗಳು ಭೂ
ಮಂಡಲದೊಳಿರೆ ಸಾತ್ತ್ವಿಕೀ ರಾಜಸೀ ತಾಮಸಿಗಳೆಂದು ಕೇಳವುಗಳ ೧

ಮನದ ಸಂಸ್ಕಾರಕನುಗುಣವಾಗುತೆಲ್ಲರೊಳು
ಜನುಗುತಿದೆ ಶ್ರದ್ಧೆ ಪುರುಷಂ ತನ್ನ ಶ್ರದ್ಧೆಯಂ
ತನುಗೊಳ್ಳುತಿಹ ಯಾವನಾವ ಶ್ರದ್ಧೆಯೊಳಿರುವನವನಂತೆ ರೂಪಿಸುವನು
ವಿನುತ ಸಾತ್ತ್ವಿಕಮನುಷ್ಯರು ಜಗದಿ ದೇವತೆಗ
ಳನು ಯಕ್ಷರಾಕ್ಷಸರ ರಾಜಸರು ಭೂತಂಗ
ಳನು ತಾಮಸರು ಪೂಜಿಸುತ್ತಿಹರು ಯಾರು ಬಲದಂಭಹಂಕೃತಿಗಳಿಂದ ೨

ರಾಗಕಾಮಗಳಿಂದ ಕೂಡಿದ್ದು ಕಲುಷಿತರ
ದಾಗಿ ಭೀಕರ ಶಾಸ್ತ್ರವಿಹಿತವಲ್ಲದ ತಪವ
ಸೋಗಿನಿಂ ಚರಿಸುತಿಹರವರು ಕಾಯದೊಳಿರುವ ವಸ್ತ್ವಿಂದ್ರಿಯಾದಿಗಳನು
ವಾಗಿ ಹಬ್ಬಿರುವೆನ್ನನೂ ವೃಥಾ ಸೊರಗಿಸುವ
ರಾಗಿರುವ ಆ ಸೀಚರನ್ನಸುರರೆಂದರಿಯು
ರಾಗದಿಂದೂಡುವಾಹಾರದೊಳಗಾದರೂ ತ್ರೈವಿಧ್ಯವಿದೆ ನೋಡಲು ೩

ಅಂತೆಯೇ ದಾನ ತಪ ಯಜ್ಞಗಳೊಳಿವೆ ಮೂರು
ಹಂತಗಳು ಲಾಲಿಸವುಗಳ ಭೇದವಿಸ್ತರವ
ನೀಂ ತಳುವದಾಯುಷ್ಯ ಸತ್ತ್ವಪ್ರೀತ್ಯಾರೋಗ್ಯಬಲಸುಖಗಳಂ ಪೆರ್ಚುವ
ದಂತುರಿತ ರಸಗಳಿಂ ಜಿಡ್ಡಿನಿಂ ಕೂಡಿ ಕಾ
ಯಾಂತರದಿ ಕೆಲಕಾಲಕುಳಿವ ಹೃದ್ಯಗಳಾದ
ಸಂತರಾಹಾರಗಳೆ ಸಾತ್ತ್ವಿಕಪ್ರಿಯಗಳಿವೆ ಬಹಳುಪ್ಪುಕಾರಹುಳಿಲಿ ೪

ವಿಗಡವಾದತ್ಯುಷ್ಣದೊಣಗಿರುವ ತೀಕ್ಷ್ಣವಿಹ
ಮಿಗೆ ಹುರಿದ ಸೀದ ಕಡುದುಃಖರೋಗಾದಿಯನೊ
ದಗಿಸುವಾಹಾರಗಳು ರಾಜಸರಿಗೊಚ್ಚತವು ರಸವಿಲ್ಲದರೆಬೆಂದಿಹ
ಒಗೆದೊಣಕಲಾಗಿರುವ ಹಳಸಿರುವ ದುರ್ಗಂಧ
ವುಗಿವುತಿರುವುಚ್ಛಿಷ್ಟವಾದ ಯೋಗ್ಯರ ಭೋಜ
ನಗಳಿಗೊಗ್ಗದ ಖಾದ್ಯಗಳು ತಾಮಸರಿಗತಿಪ್ರಿಯವಾಗಿಹವು ಲೋಕದಿ ೫

ಫಲವಾಶಿಸದೆ ಶಾಸ್ತ್ರಮತದಿ ವಿಧಿಯಿಂದೆನಗೆ
ಸಲುವ ಕರ್ತವ್ಯವೆನ್ನುತೆ ಮನವ ನೆಲೆಗೊಳಿಸು
ತಲಿ ಗೈಯುತಿಹ ಯಜ್ಞವೇ ಸಾತ್ತ್ವಿಕವು ಫಲವನೇ ಲಕ್ಷ್ಯದಲ್ಲಿಡುತಲಿ

ಕಲಕಿರುವ ಮನದಿ ಡಂಭಾಚಾರಕಾಗಿ ತಾ
ನೊಲಿದೆಸಗುತಿಹ ಯಜ್ಞವೇ ರಾಜಸವು ವಿಧಿಯ
ನೆಳಸದೆ ಶ್ರದ್ಧೆಯಿಲ್ಲದೆ ಮಂತ್ರದಕ್ಷಿಣೆಗಳಿರದೆ ದಾನಗಳೀಯದೆ ೬

ಪರಿಯರಿಯದೆಸಗುತಿಹ ಯಾಗವೇ ತಾಮಸವು
ಗುರು ಪ್ರಾಜ್ಞ ಬ್ರಾಹ್ಮಣರ ದೇವರಾರಾಧನೆಯು
ಸರಳತನ ಶೌಚಗಳು ಬ್ರಹ್ಮಚರ್ಯವಹಿಂಸೆಯೇ ದೈಹಿಕದ ತಪವಿದೆ
ನಿರತ ವೇದೋಚ್ಚಾರಣೆಯು ಯಾರಿಗುಬ್ಬೆಗವ
ನುರಿಸದಿಹ ಪ್ರಿಯವಾದ ಹಿತಕರದ ಸತ್ಯವಾ
ಗಿರುವ ಮಾತುಗಳೆ ವಾಙ್ಮಯತಪವು ಸತತ ಸಂತುಷ್ಟತೆಯು ಸೌಮ್ಯತ್ವವು ೭

ಮಾನಸಿಕ ಗತಿಯ ನಿಗ್ರಹ ಭಾವನಾಶುದ್ಧಿ
ಮೌನಾದಿಗಳೆ ಮಾನಸದ ತಪವು ನೋಡಲು ನಿ
ದಾನವಿದರಿಂದಲಿಡಿಕಿರಿದ ಮೂರ್ವಿಧ ತಪಗಳತ್ಯಂತ ಶ್ರದ್ಧೆಯಿಂದ
ಸಾನುರಾಗದಿ ಫಲಗಳನಪೇಕ್ಷಿಸದೆ ಸಮಾ
ಧಾನದಿಂದಿಹ ಮನದಿ ಮಾಡಲದು ಸಾತ್ತ್ವಿಕವು
ಮಾನ ಸತ್ಕಾರ ಪೂಜಾದಿಗಳನಿತರರಿಂ ಗಳಿಸಲೆಂದೇ ದಂಭದಿ ೮

ಗೈಯುತಿಹ ಚಲವಾಗುತಲ್ಪಕಾಲದ ಫಲವ
ನೀಯುತಿಹ ತಪವೆ ರಾಜಸವು ಮೂಢಾಶಯದಿ
ಕಾಯವಂ ಗಾಸಿಗೊಳಿಸುತಲನ್ಯರಿಗೆ ಕೇಡ ಬಗೆಯುತಲಿ ಮಾಡುತಿರುವ
ಮಾಯಿಕದ ತಪವೆ ತಾಮಸವೆನಿಸುವುದು ತನಗೆ
ದಾಯವಿಲ್ಲದೆ ಪುಣ್ಯದೇಶಕಾಲಂಗಳೊಳ
ಗಾಯತದ ಪಾತ್ರದಲಿ ಕೊಡತಕ್ಕುದೆಂದೀಡುತಿಹುದೆ ಸಾತ್ತ್ವಿಕದಾನವು ೯

ಮುಂದೆ ಪ್ರತ್ಯುಪಕಾರವಾಶಿಸಿಯೊ ಫಲಪಡೆಯ
ಲೆಂದೊ ಕೊಡುತಿಹ ದಾನ ತೆರಲು ಬೇಕಾದ ವ್ಯಥೆ
ಯಿಂದ ರಾಜಸವಿಹುದಯೋಗ್ಯಪಾತ್ರಕ್ಕನುಚಿತದ ದೇಶಕಾಲಗಳಲಿ
ಸಂದಣಿಸದುಚಿತ ಸತ್ಕಾರಗಳನವಮಾನ
ದಿಂದೀವ ದಾನ ತಾಮಸವಿಹುದು 'ಓಂ ತತ್ ಸ
ತ್'ಎಂದು ಪರಬ್ರಹ್ಮನಂ ಗುರುತಿಸುವ ಮೂರ್ಬಗೆಯ ಪೆಸರುಗಳು ಸುಜ್ಞಮತದಿ

ಪರಬೊಮ್ಮನವನಿಂದಲೇ ಸೃಷ್ಟಿಕಾಲದಲಿ
ವರ ವಿಪ್ರವೇದಯಜ್ಞಾದಿಯುಂಟಾಗಿಹವು
ನೆರೆ ವೇದವಾದಿಗಳು ವಿಧಿಯುಕ್ತಯಜ್ಞತಪದಾನಾದಿ ಕ್ರಿಯೆಗಳದರಿಂ
ಚರಿಸುತಿಹರೋಂಕಾರಪೂರ್ವಕವೆ 'ತತ್ತ'ನು
ಚ್ಚರಿಸಿಯೇ ಮೋಕ್ಷಕಾಂಕ್ಷಿಗಳು ಫಲವಂಗೈಸ
ದಿರುತೆ ನಾನಾವಿಧದ ಯಾಗತಪದಾನಾದಿಗಳನೊಲಿದು ಮಾಡುತಿಹರು ೧೧

'ಇದೆ' 'ಯೋಗ್ಯ' ವೆಂಬ 'ಪ್ರಶಸ್ತಕರ್ಮಗಳೆಂ'ಬ
ಸದರರ್ಥಗಳಲಿ 'ಸತ್ತೆ'ಂಬ ಪದವುಪಯುಕ್ತ
ವಿದೆ ಹಾಗೆ ಯಜ್ಞ ತಪ ದಾನಾದಿಯಾಸಕ್ತಸ್ಥಿತಿಯಿಾಶ್ವರಪ್ರೀತಿಯ
ಚದುರಕರ್ಮಗಳೆಲ್ಲ 'ಸತ್ತೆ'ನಿಸುವವು ಶ್ರದ್ಧೆ
ಯುದಿಸದೆಸಗುವ ಹೋಮತಪಗಳಖಿಳ ಕ್ರಿಯೆಯು
ಚದರವಸತೆನಿಸುತಿಹವವು ಪರಕ್ಕೈಹಿಕಕೆ ಸಲ್ಲದೇ ವ್ಯರ್ಥವಿಹವು ೧೨

ಹದಿನೆಂಟನೆಯ ಅಧ್ಯಾಯ

ಸೂಚನೆ ॥ ಮುಂದೊರೆದನರ್ಜುನಗೆ ಶ್ರೀಕೃಷ್ಣ ಸಕಲಗುಣ-
ಮಂದಿರಂ ಮೋಕ್ಷಸಂನ್ಯಾಸಯೋಗವ ಗುಣಗ
ಳಿಂದ ಪರಿಣಮಿಸುತಿಹ ವೃತ್ತಿಗಳ ತ್ಯಾಗಸಂನ್ಯಾಸಗಳ ಬಗೆಯೊಳೊಲಿದು

ಸಂಗರದಿ ಕೇಶಿಯನ್ನಿರಿದವನೆ! ಸಕಲೇಂದ್ರಿ
ಯಂಗಳೊಡೆಯನೆ! ತ್ಯಾಗಸಂನ್ಯಾಸಗಳ ಸ್ವರೂ
ಪಂಗಳನ್ನಾನು ಬೇರ್ಬೇರಾಗಿ ತಿಳಿಯಬಯಸುವೆನೆಂದು ಕೇಳೆ ನರನು
ಭಂಗರಹಿತನುಸಿರ್ದ ಕಾಮ್ಯವಾದಖಿಲ ಕ
ರ್ಮಂಗಳಂ ತೊರೆಯುವುದೆ ಸಂನ್ಯಾಸವೆನ್ನುವರು
ಹಿಂಗದಂತಹ ಕರ್ಮವೆಸಗಿದರು ಫಲ ಬಯಸದಿಹುದೆ ತ್ಯಾಗವದೆಂಬರು ೧

ಹೊಂದಿರುವ ಕರ್ಮಗಳು ದೋಷದಿಂ ಕೂಡಿಹುದ
ರಿಂದ ಕೆಲ ವಿದ್ವಾಂಸರವುಗಳಂ ಬಿಡಬೇಹು
ದೆಂದೊರೆಯುವರು ಕೆಲಬರುಚಿತ ತಪದಾನ ಯಜ್ಞಾದಿ ಕರ್ಮಗಳ ನರರು

ಎಂದಿಗೂ ಬಿಡಬಾರದೆನ್ನುವರು ಈ ಬಗೆಯೊ
ಳಿಂದೆನ್ನ ಗೊತ್ತುವಳಿಯುಂ ಕೇಳು ಮೂರು ವಿಧ
ದಿಂದಲಾ ತ್ಯಾಗ ಪ್ರಸಿದ್ಧವಾಗಿದೆ ವಿಹಿತ ಯಜ್ಞಾದಿ ಕ್ರಿಯೆಗಳಿಹದಿ ೨

ಮಾಡಲೇಬೇಕಾದವಿಹವು ಬಿಡಲಿಹವಲ್ಲ
ನೋಡಲಾ ಯಜ್ಞಾದಿ ಯೋಗ್ಯ ಕರ್ಮಗಳುಂಟು
ಮಾಡುವವು ಚಿತ್ತಶುದ್ಧಿಯು ಸುಮತಿಯುರಲಿ ಫಲಗಳ ಹಂಬಲಂ ತೊರೆಯುತೆ
ಮಾಡುವವ ನಾನೆನ್ನುವಭಿಮಾನವುಂ ತೊಡೆದು
ಪಾಡಿನಿಂದವುಗಳಂ ಕರ್ತವ್ಯವೆಂದೆಣಿಸಿ
ನಾಡೆ ಮಾಡಲು ಬೇಹುದೆಂಬುದೇ ನನ್ನ ನಿಶ್ಚಿತದಭಿಪ್ರಾಯವಿಹುದು ೩

ವಿಹಿತವಾಗಿಹ ಶಾಸ್ತ್ರಕರ್ಮಗಳನೆಂದು ಬಿಡು
ತಿಹುದು ಸರಿಯಲ್ಲ ಮೋಹದೊಳದರ ಪರಿತ್ಯಾಗ
ವಿಹದಿ ತಾಮಸವೆನಿಸುವುದು ದುಃಖಕರವೆಂದು ಕಾಯಕ್ಲೇಶದ ಭೀತಿಯಿಂ
ವಹಿಸದಲೆ ಕರ್ಮಗಳ ತೊರೆಯಲದು ರಾಜಸವು
ಮಹಿಯೊಳಂತಿಹ ತ್ಯಾಗದಿಂದಾವ ಫಲವಡೆಯ
ದಿಹರು ನಿಯತದ ಕರ್ಮಗಳ ತನ್ನ ಕರ್ತವ್ಯವೆಂದು ಫಲವಿಚ್ಛಿಸದಲೆ ೪

ನಾನೆ ಮಾಡುವನೆಂಬಹಂಕೃತಿಯ ತೊಡೆದೆಸಗ
ಲಾ ನೈಜಕರ್ಮಫಲತ್ಯಾಗವೇ ಸಾತ್ತ್ವಿಕವು
ತಾನಿಂತು ಸತ್ತ್ವದಿಂದಾಳ್ದಿರುವ ಮೇಧಾವಿಯಾದ ಸಂಶಯವಿಲ್ಲದ
ಜ್ಞಾನಿಯಾಗಿಹ ಜೋಗಿ ಕ್ಷೇಮಕರವಲ್ಲದಿಹ
ಹೀನಕರ್ಮಗಳಲ್ಲಿ ದ್ವೇಷವಿರಿಸುವುದಿಲ್ಲ
ಸಾನುರಾಗದಿ ಕುಶಲಕರ್ಮಗಳನೆಳಸುತ್ತಲಿಲ್ಲವೆಂದಿಗು ವಿಶ್ವದಿ ೫

ದೇಹಧಾರಿಗೆ ಕರ್ಮಗಳನೆಲ್ಲ ಬಿಡುವೆನೆಂ
ಬಾ ಹದನ ಶಕ್ಯವಿಲ್ಲವು ಯಾರು ತಾಗೈಯು
ವಾ ಹರಿಬಗಳ ಫಲವನಂಗೈಸದಿಹನಾತನೇ ತ್ಯಾಗಿಯೆಂಬೆನಿಸುವನು
ಜೇಹಿನಿಂ ಕರ್ಮಗಳ ಬಿಡದವರಿಗದರ ಫಲ
ಸೋಹಿ ಪರದೋಳ್ ಬಹುದನಿಷ್ಟೇಷ್ಟ ಮಿಶ್ರವೆಂ
ದೂಹಿಸಲು ಮೂರು ಬಗೆಯುಲಿ ತ್ಯಾಗಿಗೇಗೈದರೂ ಗಂಟು ಬೀಳ್ವುದಿಲ್ಲ ೬

ಐದು ಕಾರಣಗಳಿಹವಿಹದೆಲ್ಲ ಕರ್ಮಗಳ
ಸಾಧಿಸುತೆ ಸಿದ್ಧಿಸಲಿಕೆಂದು ಮನವರಿಯು ನೀ
ವೇದಾಂತಶಾಸ್ತ್ರದೊಳಗೆಂದಂತೆ ಜಡದೇಹ ಜೀವನಿಂದ್ರಿಯಗಡಣವು
ಆದರಿಸಿ ಮಾಡುತಿಹ ಚೇಷ್ಟೆಗಳು ಪಂಚಮವ-
ದಾದ ದೈವಗಳೆಂದು ಕಾಯವಾಙ್ಮನಗಳಿಂ
ದೀ ಧರೆಯೊಳಾವಾತ ಶಾಸ್ತ್ರಕೊಪ್ಪಿರುವೊಪ್ಪದಿರುವ ಕರ್ಮಗಳೆಸಗುವ ೭

ಅದಕೆಲ್ಲ ಈ ಐದು ಕಾರಣಗಳಿಂತಿರಲು
ಬದಗನಾವಂ ಮೂಢಬುದ್ಧಿಯಿಂದಾತ್ಮನನೆ
ಚದುರಕರ್ತಾರನೆನ್ನುತೆ ತಿಳಿವನಾ ಕುಮತಿ ನೈಜತೆಯ ಕಂಡಿಲ್ಲವು
ಮುದದಿಂದಲಾವಾತನಭಿಮಾನ ತಾಳದಲೆ
ಒದಗಿ ಬಹ ಫಲದಿಚ್ಛೆಯಿಂ ಲಿಪ್ತನಾಗದಲೆ
ಸದರವೆನೆ ಲೋಕವನೆ ಕೊಂದರೂ ಕೊಂದಹಾಗಲ್ಲ ಬಂಧನವಡೆಯನು ೮

ತಿಳುವಳಿಕೆ ತಿಳಿಯಲಿರುವುದು ತಿಳಿಯುವವನೆಂಬು
ದೆಳಸುತಿಹವೀ ಮೂರು ಕರ್ಮಚಯದಲಿ ಕರಣ
ಗಳು ಕೆಲಸ ಗೆಯ್ಯುವವನೀ ಮೂರು ಕರ್ಮಗಳ ನೆರವೇರಿಸುತ್ತಲಿಹವು
ತಳೆಯುವುದು ಮೂರ್ವಿಧವ ಗುಣಭೇದದಿಂದ ಮರು
ಕಳಿಸಿ ಕರ್ತಾರ ಕರ್ಮಜ್ಞಾನಗಳು ಶಾಸ್ತ್ರ
ಗಳ ಮತದಿ ಕೇಳದನೆ ವಿಧವಿಧದಿ ಪ್ರವಿಭಕ್ತವಾದೆಲ್ಲ ವಸ್ತುಗಳಲಿ ೯

ನಾಶವಿಲ್ಲದಖಂಡವಾದ ಬಿಡಿಯಲ್ಲದಿರು
ವಾ ಸುವಸ್ತುವನಾವ ತಿಳುವಳಿಕೆ ಕಾಣುವುದ
ದೇ ಸಾತ್ತ್ವಿಕವದೆಂದು ತಿಳಿಯು ಸರ್ವಪ್ರಾಣಿಗಳಲಿ ಬೇರ್ಬೇರಾಗಿಹ
ಈ ಸುವಿಧದಾತ್ಮಂಗಳೆಲ್ಲ ಪ್ರತ್ಯೇಕವೆಂ
ದೋಸರಿಸದರಿವ ಜ್ಞಾನವೆ ರಾಜಸವು ಯಾವು
ದೋ ಸತ್ತ್ವವೊಂದರೊಳೆ ವಸ್ತುತತಿಯೆಲ್ಲಡಕವಾಗಿರುವುದೆಂದು ದೃಢದಿ ೧೦

ನಂಬಿರುವ ಹೇತುವಿರದಲ್ಪವಾಗಿಹ ಯುಕ್ತಿ
ಗಿಂಬನೀಯದ ದುಷ್ಟಜ್ಞಾನವನೆ ತಾಮಸವ
ದೆಂಬರೈ ಸಂಗರಹಿತದ ನಿಯತವಾಗಿರುವ ರಾಗದ್ವೇಷಗಳುರಿಸದ

ತುಂಬಿಬಹ ಫಲಗಳನಪೇಕ್ಷಿಸದ ಕ್ರಿಯೆಗಳ ಕ
ದಂಬವೇ ಸಾತ್ತ್ವಿಕವು ಜಂಭದಿಂದಭಿಮಾನ
ದಿಂ ಬಯಸುತಲಿ ಫಲವನಾಯಾಸದಿಂ ಗೈವ ಕರ್ಮವೇ ರಾಜಸವಿದೆ ೧೧

ಮುಂದಕೇನಾಗಬಹುದೆಂಬುದಂ ತಾನೆಷ್ಟು
ಕಂದಬೇಕೆಂಬುದಂ ಪರರಿಗೆನಿತದರ ಬಗೆ
ಯಿಂದ ಕಷ್ಟವು ಬರುವುದೆಂಬುದಂ ತನ್ನ ಸ್ವಕೀಯ ಪೌರುಷದಿರವನು
ಹೊಂದಿ ನೋಡದೆ ಮೋಹದಿಂ ಮಾಡುತಿಹ ಕರ್ಮ
ವೃಂದವೇ ತಾಮಸವದೆನಿಸುವುದು ಫಲದಾಸೆ
ಯೊಂದಿರದೆಯುತ್ಸಾಹಧೃತಿಗಳಿಂ ಕೂಡಿರುತಲಭಿಮಾನವುಂ ತಾಳದೆ ೧೨

ಹಂಬಲವು ಕೈಗೂಡಿದರು ಕೂಡದಿದ್ದರೂ
ಹುಂಬನಾಗದ ಕರ್ತೃವೇ ಸಾತ್ತ್ವಿಕಂ ಜಗದಿ
ತುಂಬುಸೊಗವಂಗೈಸಿ ಫಲ ಬಯಸಿ ಕೆಟ್ಟಾಸೆಯಿಂದ ಹಿಂಸಾತ್ಮನಾಗಿ
ಜಂಬರದಿ ಮನಮುಕುರವುಂ ಶುಭ್ರವಿಡದೆ ಬೇ
ಳಂಬ ಸಂತಸಗಳಿಂ ಕದಡಿರುವ ಕರ್ತೃವೇ
ಜಂಬವಿಹ ರಾಜಸಂ ಶಾಸ್ತ್ರಸಂಸ್ಕಾರವಡೆಯದೆ ಯುಕ್ತಿಯರಿವಿಲ್ಲದೆ ೧೩

ಸೋಮಾರಿಯಾದ ಶಠನಾದ ಪರರಿಗೆ ಕೇಡ
ನಾಮಂತ್ರಿಸುವ ದೀರ್ಘಸೂತ್ರಿಯಾಗಿಹ ಕರ್ತೃ
ತಾಮಸನದೆನಿಸುತಿಹನವ ಸತತ ಜಡನಾಗಿ ದುಃಖಾರ್ತನಾಗಿರುವನು
ಈ ಮೂರು ಬಗೆಯೊಳೇ ಗುಣಗಳಿಂ ಭಿನ್ನವಿಹ
ಷೇಮುಷಿಯು ಧೃತಿಯು ಕೇಳ್ಬೇರಾಗಿ ವಿಸ್ತರದಿ
ತಾ ಮಾಡಲಿಹ ಕರ್ಮಗಳಲಿ ಪ್ರವೃತ್ತಿನಿವೃತ್ತಿಗಳ ಭಯವಭಯವ ೧೪

ಮಾಡಬೇಹುದ ಮಾಡದಿಹುದ ಮೋಕ್ಷವಬಂಧ
ದೋಡಾಟಗಳನರಿವ ಬುದ್ಧಿಯೇ ಸಾತ್ತ್ವಿಕವು
ನಾಡೆ ಧರ್ಮಾಧರ್ಮಗಳ ಕಾರ್ಯಾಕಾರ್ಯಗಳ ನಿರ್ಣಯಿಸಿ ತಿಳಿಯದಿರುವ
ನಾಡ ಬುದ್ಧಿಯೆ ರಾಜಸವು ತಮದ ಮುಸುಕಿನೊಳ
ಗೀಡಾಡಿ ತನ್ನುವನಧರ್ಮವುಂ ಧರ್ಮವೆನೆ
ರೂಢವಿಷಯಗಳೆಲ್ಲ ವಿಪರೀತವಾಗರಿವ ಮತಿಯು ತಾಮಸವೆನಿಪುದು ೧೫

ಹೊಯ್ದಾಡದೆಲೆ ಸಮಾಧಾನದಿಂದಿಹ ಮನದಿ
ನೆಯ್ದು ಧೃತಿಯಿಂ ಪ್ರಾಣಮನಕರಣಗಳ ಕ್ರಿಯೆಯ
ಸುಯ್ದಾನದಿಂ ತನ್ನ ಹಿಡಿತದೊಳಗಿಡುತಿರುವ ಧೃತಿಯೆ ಸಾತ್ತ್ವಿಕವೆನಿಪುದು
ಕಯ್ದೋರುತಿಹುದೆಲ್ಲ ಧರ್ಮಾರ್ಥಕಾಮಗಳ
ನೆಯ್ದುಲೆಂದಿಹ ಫಲವನಾಕಾಂಕ್ಷಿಸುವ ಧೃತಿಯು
ಸಯ್ಪೆ ರಾಜಸವೆನ್ನುವರು ಯಾವ ತಿಳಿಗೇಡಿಯಾಗಿ ಪಿಡಿದಿಹ ಪಟ್ಟನಿಂ ೧೬

ನಿದ್ದೆ ಬೆದರಿಕೆ ದುಗುಡಗಳ ವಿಷಾದವ ಮದವ
ನೊದ್ದು ಬಿಡುತಿಲ್ಲವಾ ಧೃತಿಯೆ ತಾಮಸವಿಹುದು
ಹೊದ್ದಲಾವುದ ಬಿನದಿಸುವ ದುಃಖವಡೆಯುನಾ ಸುಖದ ಹದನವನಾಲಿಸು
ಎದ್ದಾವುದಿಲ್ಲಿ ಮೊದಲಿಂಗೆ ವಿಷದಂತೊಗ್ಗ
ದಿದ್ದು ಪರಿಣಾಮದೊಳಗಮೃತದಂದದಿ ಹಿತದೊ
ಳದ್ದುವುದೊ ತಿಳಿಯಾದ ಬುದ್ಧಿಯಿಂದುಂಟಾದ ಸುಖವದೇ ಸಾತ್ತ್ವಿಕವಿದೆ೧೭

ವಿಷಯೇಂದ್ರಿಯಗಳ ಸಂಯೋಗದಿಂ ಮೊದಲಮೃತ
ದೊಸರಂತೆ ಮಧುರವಾಗಿದ್ದು ಕೊನೆಗೇರಿರುವ
ವಿಷದಂತೆ ವಿಗಡವಾಗಿಹ ಸುಖವೆ ರಾಜಸವು ಮೊದಲಿಗೂ ಕಡೆಗಾವುದು
ಪಸರಿದಾಲಸ್ಯನಿದ್ರಾಪ್ರಮಾದಗಳಿಂದ
ಕೊಸರಿ ಭ್ರಾಂತಿಯನುಂಟುಮಾಡುತಿಹ ಸುಖವೆ ತಾ-
ಮಸವೆನಿಸುವುದು ನೋಡೆ ಭುವಿಯಲ್ಲಿ ದಿವಿಯಲ್ಲಿ ದೇವತೆಗಳಲ್ಲಾಗಲಿ ೧೮

ಹುಟ್ಟಿನಿಂದೀ ಮೂರು ಗುಣಗಳುರೆ ಸೋಂಕಿಗೊಳ
ಪಟ್ಟಿರದ ವಸ್ತುವೆಂಬುವುದಿಲ್ಲ ಲೋಕದೊಳು
ದಟ್ಟಿಸಿಹ ವಿಪ್ರ ಕ್ಷತ್ರಿಯ ವೈಶ್ಯರಿಗೆ ಶೂದ್ರರಿಂಗೆ ಸ್ವಜನ್ಮದಿಂದ
ಗಿಟ್ಟಿಸಿಹ ಗುಣಗಳನ್ನನುಗಮಿಸಿ ಕರ್ಮಗಳು
ಗಟ್ಟಿಸಿಯೆ ಹಂಚಲಾಗಿವೆ ಬೇರುಬೇರಾಗಿ
ಕಟ್ಟೆಂದ್ರಿಯಗಳ ನಿಯಮನವು ಮನನಿಗ್ರಹವು ತಪಶೌಚಸ್ಥೈರಣೆಗಳು ೧೯

ಈಶನಿಹನೆಂಬ ನಂಬುಗೆಯು ಸುಜ್ಞಾನ ಜಿ
ಜ್ಞಾಸೆಗಳೆ ಬ್ರಾಹ್ಮಣರ ಸಹಜ ಕರ್ಮಗಳಿಹವು
ವಾಸಿ ಧೃತಿ ದಕ್ಷತನ ತೇಜ ಶೌರ್ಯಗಳು ಸಮರಕಳದಿಂದೋಡದಿಹುದು

ಸಾಸದೊಡೆತನವುಚಿತದಾನವೇ ಕ್ಷತ್ರಿಯರ
ನಾಸರಿಸಿ ಬಹ ಸಹಜ ಕರ್ಮಗಳು ವೈಶ್ಯರ ವಿ
ಶೇಷಕರ್ಮಗಳೆ ಕೃಷಿ ವ್ಯಾಪಾರ ಪಶುಪಾಲನೆಗಳು ಸ್ವಭಾವದಿಂದ ೨೦

ಸೇವೆ ಶೂದ್ರನ ಸಹಜ ಕರ್ಮವಿದೆ ತನ್ನ ಸ್ವ
ಭಾವಕನುರೂಪವಿಹ ಕರ್ಮದಲಿ ರತನಾದ
ಭಾವುಕಂ ಸುಲಭದಿಂ ಸಿದ್ಧಿವಡೆಯುವನದರನೆಂತೆಂದು ಲಾಲಿಸಿಂದು
ಯಾವನಿಂದೆಲ್ಲ ವಸ್ತುಗಳುಗಮಿಸಿಹವೊ ಮಗು
ಳಾವನಿಂದೆಲ್ಲವೂ ತುಂಬಿಹುದೊ ಆ ಪತಿತ-
ಪಾವನನ ಸಹಜಕರ್ಮಗಳಿಂದಲರ್ಚಿಸಲು ಸಿದ್ಧಿವೊಂದುವ ಮನುಜನು ೨೧

ತನ್ನ ಧರ್ಮವು ಕೊರತೆಯುಳ್ಳದಾದರು ಪರರ
ಚೆನ್ನಾಗಿ ನಡೆಸುತಿಹ ಧರ್ಮದಿಂ ಹಿರಿದಿರುವು
ದುನ್ನಿಸಲು ಸಹಜ ಸ್ವಕರ್ಮಗಳ ನಡೆಸುತಿರೆ ಪಾತಕವ ಪೊದ್ದದಿಹನು
ಮುನ್ನ ತನ್ನಯ ವಿಹಿತ ಕರ್ಮಗಳು ದೋಷದಿಂ
ದುನ್ನದ್ಧವಾದರೂ ಬಿಡಬಾರದವ ಬೆಂಕಿ
ಯನ್ನು ಹೊಗೆಯಂತೆ ಸಕಲೋದ್ಯೋಗಗಳ ದೋಷರಾಜಿ ಮುಚ್ಚಿರುವುದಿಹದಿ

ಸರ್ವತ್ರವತಿ ಮಮತೆ ಸಿರದ ಜಿತಮಾನಸದ
ಜೀರ್ವಡೆದ ಬಯಕೆಯಿಲ್ಲದ ಕರ್ಮಫಲತ್ಯಾಗಿ
ಯುರ್ವನೈಷ್ಕರ್ಮ್ಯಸಿದ್ಧಿಯ ಪಡೆವನಿಂತು ಜ್ಞಾನಾರ್ಹತೆಯ ಪೊಂದಿದವನು
ಉರ್ವರೆಯೊಳೆಂತು ಜ್ಞಾನದ ಪರಂಧಾಮವಾ
ಗಿರ್ವ ಬ್ರಹ್ಮವ ಪಡೆವನೆಂದು ಸಂಕ್ಷೇಪದಿಂ
ಚರ್ವಿಸುವೆ ಕೇಳದನೆ ಪರಿಶುದ್ಧವಾಗಿರುವ ಬುದ್ಧಿಯಿಂ ಯುಕ್ತನಾಗಿ ೨೩

ತೂಗಿ ಧೃತಿಯಿಂದ ದೇಹೇಂದ್ರಿಯಗಳಂ ಬಿಗಿದ-
ನಾಗಿ ಶಬ್ದಾದಿ ವಿಷಯಗಳ ತೊರೆದವನಾಗಿ
ರಾಗದ್ವೇಷಗಳ ತೊಡೆದವನಾಗುತೇಕಾಂತವಾಶ್ರಯಿಪ ಮಿತದೂಟದ
ಬಾಗಿಸಿಹ ವಾಕ್ಕಾಯಮನದ ನಿರತ ಧ್ಯಾನ
ಯೋಗಪರನಾಗಿರುವ ವಿಷಯವೈರಾಗ್ಯಮಂ
ಪೈಗೂಡಿಸಿಹ ದರ್ಪಹಂಕಾರ ಬಲಕಾಮಕ್ರೋಧಾದಿಗಳ ತ್ಯಜಿಸಿದ ೨೪

ಗೃಹವೆ ಮೊದಲಾದ ಪರಿಕರವಾಶಿಸದ ಶಾಂತ
ನಿಹ ನರನೆ ಬ್ರಹ್ಮಸ್ವರೂಪವೊಂದಲಿಕರ್ಹ
ನಹನಂಥ ಬ್ರಹ್ಮಭಾವದ ಪ್ರಸನ್ನಾಶಯನದೇನನಿಚ್ಛಿಸುವುದಿಲ್ಲ
ವಹಿಸದಿಹ ದುಃಖಾದಿಗಳ ಸರ್ವಪಶುಗಳ ನಿ
ವಹವನೊಂದೇ ರೀತಿಯಿಂ ಕಾಣುತಿಹ ಮುಂದೆ
ತಹದಿಂದಲೆನ್ನ ಮೇಲುತ್ಕೃಷ್ಟತಮವಾದ ಭಕ್ತಿಯಂ ಪೊದ್ದುತಿಹನು ೨೫

ಆ ಪರಮ ಭಕ್ತಿಯಿಂದಲೆ ನನ್ನ ನೈಜಸ್ವ
ರೂಪಮಂ ವಿಸ್ತಾರಮಂ ತಿಳಿವನಿದ್ದಂತೆ
ಆ ಪೂತಭಾವನಾ ದೃಢತೆಯಿಂದೆನ್ನೊಳಗೆ ಕ್ರಮದಿಂದ ಸೇರ್ವನವನು
ಆಪನ್ನ ಸಕಲ ಕರ್ಮಗಳನೆಸಗುವ ಜಗವ
ವ್ಯಾಪಿಸಿಹನೆನ್ನನವಲಂಬಿಸಿಹ ನರನೆನ್ನ
ಕಾಪಿನನುಗ್ರಹದ ಬಲದಿಂದ ಶಾಶ್ವತವಾದ ಮೋಕ್ಷಪದವಿಯ ಪಡೆವನು ೨೬

ಎಲ್ಲ ಕರ್ಮಗಳ ಮನದಿಂದಲೆನಗೊಪ್ಪಿಸುತ
ಲಿಲ್ಲೆನ್ನಪರನಾಗಿ ಬುದ್ಧಿಯ ಸಮಾಧಾನ
ದಲ್ಲಿರಿಸಿ ಯಾವಾಗಲೆನ್ನೊಳೇ ಮನವಿರಿಸುತೆನ್ನೊಳನುರಕ್ತನಿರಲು
ನಿಲ್ಲದೆನ್ನ ಪ್ರಸಾದದೊಳೆಲ್ಲನರ್ಥಗಳ
ನುಲ್ಲಾಸದಿಂ ದಾಟಲಿಹೆ ನೀನಹಂಕಾರ
ದಲ್ಲೆನ್ನ ಮಾತುಗಳ ಕೇಳದಲೆ ಮತ್ತನಿರೆ ಹಾಳಾಗಿ ನಶಿಸಲಿರುವೆ ೨೭

ನಾನಾಹವವ ಮಾಡಲಾರೆನೆನ್ನುತಿ ದುರಭಿ
ಮಾನದಿಂ ಪೇಳುತಿರುವೀ ನಿನ್ನ ನಿರ್ಣಯವು
ಶಾನೆ ಹುಸಿಯೋ ನಿನ್ನ ಪ್ರಕೃತಿ ನಿನ್ನಂ ತನ್ನತಾನಾಗಿ ಧುರಕೆಳೆವುದು
ನೀನು ಸ್ವಭಾವದಿಂ ವಿಹಿತಕರ್ಮಗಳಿಂದ
ಲೇ ನಿಬದ್ಧನದಾಗಿರಲು ಮೋಹದಿಂದ ತಾ
ನೇನ ಗೈಯುವುದಿಲ್ಲವೆನುವೆಯದನೇ ವಿವಶನಾಗಿ ತಾನೇ ಮಾಡುವೆ ೨೮

ಈಶರಂ ಜಗದಖಿಲ ಪ್ರಾಣಿಗಳ ಹೃದಯದಲಿ
ವಾಸಿಸಿಹನೆಲ್ಲರಂ ಜಂತ್ರಬೊಂಬೆಗಳಂತೆ
ತಾ ಸುತ್ತಿಸುವ ಪಾರ್ಥ! ನೀನವನನೇ ಸರ್ವಭಾವದಿಂ ಶರಣುಹೋಗು

ಆ ಸರ್ವ ಸಾಕ್ಷಿಯ ಹಸಾದದೊಳೆ ಚಿರಶಾಂತಿ
ಯಾಪಸರೆಯು ಮಿಗೆ ಶಾಶ್ವತಸ್ಥಾನವೂ ನಿನಗೆ
ಕೈಸೇರುವುದು ಹೀಗೆ ನಾ ನಿನಗೆ ಬಹುರಹಸ್ಯದ ಜ್ಞಾನದಿರವೊರೆದೆನು ೬೯

ಇಂದು ನೀನಿದನೆಲ್ಲವಂ ವಿಮರ್ಶಿಸಿ ಮನಕೆ
ಬಂದಂತೆ ಮಾಡು ನೀನಚ್ಚುಮೆಚ್ಚಿನ ಗೆಳೆಯ
ನೆಂದು ನಿನಗೊರೆವೆನೆಲ್ಲದಕಿಂತ ಹೆಚ್ಚು ಗುಟ್ಟಾದ ವಚನವನಾಲಿಸು
ಕುಂದದೆನ್ನೊಳೆ ಮನವನಿಡು ನನ್ನ ಭಕ್ತನಾ
ನಂದದಿಂದಾಗು ನನ್ನನೆ ಪೂಜಿಸೈ ಶ್ರದ್ಧೆ
ಯಿಂದೆನ್ನನೆರಗು ನನ್ನನೆ ಪಡೆವೆ ನಿನಗಿದಂ ಪ್ರಿಯನೆಂದು ಪೂಣ್ಬುಸಿರುವೆ ೭೦

ಸರ್ವ ಧರ್ಮಗಳ ನೀ ತ್ಯಜಿಸಿ ಭಕ್ತಿಯೊಳೆನ್ನ
ನೊರ್ವನನೆ ಶರಣೆಂದು ಕೊರಗದಿರು ನಾ ನಿನ್ನ
ಪರ್ವಿರುವ ನಿಖಿಲ ಪಾಪಗಳ ಹೊರೆಯಿಂದಿಹದಿ ಬಿಡಿಸುವೆನು ಸುಲಭದಿಂದ
ಉರ್ವರೆಯೊಳಿದನೆಲ್ಲ ಕೇಳಲಿಚ್ಛಿಸದವಂ
ಗುರ್ವತಪವಾಚರಿಸದಗೆ ಭಕ್ತನಲ್ಲದಗೆ
ಗರ್ವದಿಂದೆನ್ನ ಸೇವಿಸದಾಳವಾಡುವಗೆ ನೀನೆಂದಿಗುಸಿರಬೇಡ ೭೧

ಹೆಚ್ಚು ಗುಟ್ಟಾದ ಈ ತತ್ತ್ವಗಳನಾರೆನ್ನ
ನಚ್ಚು ಭಕ್ತರಲಿ ನೆಲೆಗೊಳಿಸುವನೊ ಅವನೆನ್ನೊ
ಳುಚ್ಚತರ ಭಕ್ತಿಯನ್ನಿರಿಸಿ ನನ್ನನೆ ಪಡೆವ ಸಂದೇಹವಿಲ್ಲವಿದಕೆ
ಸಚ್ಚರಿತ್ರರೊಳಾತನಿಂದೆನಗೆ ಮೇಲಾಗಿ
ಮೆಚ್ಚುಗೆಯ ಮನುಜರಾರಿಲ್ಲ ಮೇಣವನಿಂದ
ಲೊಚ್ಚತದ ನರನು ಭೂಲೋಕದೊಳಗೆಂದೆಂದು ಜನ್ಮವೆತ್ತುವುದಿಲ್ಲವು ೭೨

ಧರ್ಮಸಮ್ಮತವಾದ ನಮ್ಮ ಸಂವಾದವಿದ
ನಾರ್ಮಹಿಯೊಳೋದುವನೊ ಆ ಪರಿಯ ಜ್ಞಾನೇಷ್ಟಿ
ಕರ್ಮದಿಂದಾನಿಲ್ಲಿ ಪೂಜೆಗೊಂಡವನಾಗುತಿಹೆನೆಂಬುದೆನ್ನ ಮತವು
ಪೇರ್ಮೆಯಿಂದಾವ ನರ ಶ್ರದ್ಧೆಯುಳ್ಳವನಾಗಿ
ನಿರ್ಮತ್ಸರನದಾಗಿ ಕೇಳ್ವನಿದನವ ಭವದಿ
ನಿರ್ಮುಕ್ತನಾಗಿ ತಾ ಪುಣ್ಯವಂತರಡರ್ವ ಶುಭಲೋಕಗಳ ಪೊಂದುವ ೭೩

ಸಂದೇಹವಿರಿಸದಿದನೆಲ್ಲವೇಕಾಗ್ರಮನ
ದಿಂದ ನೀ ಕೇಳಿದೆಯ ಪಾರ್ಥನೇ! ನಿನ್ನೊಳಗೆ
ಸಂದಣಿಸಿಹಜ್ಞಾನವಿಭ್ರಮೆಯು ನಷ್ಟವಾಯಿತೆ ಪೇಳೆನಲ್ಕೆ ನರನು
ವಂದಿಸುತಲೆಂದ ಕೃಷ್ಣನ ದೇವ! ನಿನ್ನ ದಯೆ
ಯಿಂದೆನ್ನ ಮೋಹವುಡಿಯಿತು ವಿವೇಕವು ತಳ್ತು
ನಿಂದಿಹುದು ಸಂಶಯಗಳಡಗಿಹವು ನಾ ನಿನ್ನ ಮಾತಿನೋಲ್ ನಡೆಯಲಿಹೆನು

ಸಂಜಯಂ ಪೇಳ್ದನಿಂತಾನು ಶೌರಿಯ ಮೇಣ್ ಧ
ನಂಜಯನ ರೋಮಾಂಚಕಾರಿಯದ್ಭುತವಾದ
ರಂಜಿಸುವ ಸಂವಾದರೂಪದಲಿ ಯೋಗೇಶನಚ್ಯುತಂ ತನ್ನ ತಾನೆ
ವ್ಯಂಜಕದಿ ಪೇಳುತಿಹ ಗುಹ್ಯತಮವಾದ ಈ
ಮಂಜುಲದ ಪರಮಯೋಗದ ವಿವರಮಂ ಮುದದಿ
ಸಾಂಜಲಿಯ ಭಕ್ತಿಯಿಂ ಲಾಲಿಸಿದೆ. ಮುನಿವರ್ಯ ವ್ಯಾಸನನುಗ್ರಹದಿಂದಲಿ

ರಾಯ ಧೃತರಾಷ್ಟ್ರನೇ ವಾಸುದೇವಾರ್ಜುನರೊ
ಳಾಯತದಿ ನಡೆದ ಈ ಪುಣ್ಯಕರವಾದ ಸದು
ಪಾಯದಿಂ ಸುಂದರದ ವಿಸ್ಮಯಾವಹ ಮಾತುಗಾರಿಕೆಯ ನೆನೆನೆನೆಯುತೆ
ಮಾಯದೋಲ್ ನಾ ಹರ್ಷಗೊಳ್ಳುತಿಹೆ ಮಗುಮಗುಳಿ
ಮಾಯದಿಂ ಮಧುವೈರಿ ತೋರಿದದ್ಭುತದಪ್ರ
ಮೇಯರೂಪದ ವಿಶ್ವರೂಪಮಂ ನಾ ಸ್ಮರಿಸಿ ಸ್ಮರಿಸಿ ಸೋಜಿಗವಡುತಿಹೆ ೩೬

ಸಂತೋಷದುಬ್ಬರದಿ ಮತ್ತನಾಗಿಹೆ ಧರಾ
ಕಾಂತ ನೀನಿಂದೆನ್ನ ನಿರ್ಣಯವನಾಲಿಸಿದೊ
ಶಾಂತಮೂರುತಿ ಸರ್ವಯೋಗೇಶ ಗೋಪಾಲಕೃಷ್ಣ ತಾನೆಲ್ಲಿರುವನೋ
ಹೊಂತಗಾರ ಧನಂಜಯಂ ಧನುರ್ಧರನಾಗಿ
ಕ್ಲಾಂತಿಯಿಂದೆಲ್ಲಿರುವನಲ್ಲಿ ಗೆಲವೇಳಿಗೆಯು
ಸಂತಸವು ಸಿರಿ ರಾಜ್ಯಸಂಪದಗಳೆಲ್ಲವೂ ಬೆಳಗಿ ನಲಿಯುತ್ತಿರುವುವು ೩೭

ಇಂತು ಗೀತಾಮೃತಲಹರೀ ಮುಗಿದುದು.

ಕನ್ನಡದ ಸಿರಿಸೀಮೆಯಂಚಿನಲಿ ಮಲೆನಾಡ
ಕನ್ನವುರದಾಲೆಟ್ಟಿಗ್ರಾಮದಲಿ ಜಸಪೂರ-
ಕನ್ನಪ್ಪ ದ್ವಿಜಕುಲಾಗ್ರಣಿ ರಾಮನಾತ್ಮಜಂ ಗೋಪಾಲಕೃಷ್ಣನೆನುವ
ಪನ್ನಗವಿಭೂಷಣನ ಕಿಂಕರಂ ಜ್ಞಾನಸಂ
ಪನ್ನಮತಿ ವಿರಚಿಸಿದನೀಕೃತಿಯ ಸಾಹಿತಿಯು
ಪನ್ನದಿಂದೆನಲು ಜನ ಸಾಮಾನ್ಯರರಿವಂತೆ ಸಿರಿಗನ್ನಡದ ನುಡಿಯಲಿ ೧

ನಂದನದ ವತ್ಸರದಿ ಚಿಗುರಿ ಬೆಳೆದುದು ಕಾವ್ಯ
ನಂದನದಿ ಸುಮವಲ್ಲಿಯೆನಲೋದುಗರ ಮನಕೆ
ನಂದನದ ಕಿರಿದು ಕೃತಿಯಿದು ಹಾವಭಾವಪದಲಂಕಾರಗಳ ಬೆಡಗಿಲಿ
ನಂದನ ಕುಮಾರನೊಲಿದೊರೆದ ಕಥನವು ಪಾಂಡು
ನಂದನಗೆ ಗುಣಗ್ರಾಹಿಗಳ್ ವಿದುಷರೋದಲಾ
ನಂದನವಿದೆನಿಸೆ ವರಕವಿಯಲ್ಲದಿರ್ದೊಡಂ ನಾಂ ಧನ್ಯನೆಂದೆಣಿಸುವೆ ೨

ಶಾವಂಜೆ ಗುರುರಾವ್ ಅಂಡ್ ಸನ್ಸ್ ಇವರಿಂದ ಉಡುಪಿ ಶ್ರೀಕೃಷ್ಣಮುದ್ರಣಾಲಯ
ದಲ್ಲಿ ಮುದ್ರಿಸಲ್ಪಟ್ಟು ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದಲ್ಲಿ ಪ್ರಕಟಿಸಲ್ಪಟ್ಟಿತು.
ಶಾ. ಶಕ ೧೮೭೪, 7-1952